[1] ಶ್ರೀ ನರಸಿಂಹಾಚಾರ್ಯರು ತಮ್ಮ ಪೀಠಿಕೆಯಲ್ಲಿ ೩೫೪ ಹೊಸ ಶಾಸನಗಳನ್ನು ಸೇರಿಸಲಾಗಿದೆ ಎಂದಿದ್ದಾರೆ (ಪು. ೩೫). ಆದರೆ ಆ ಸಂಪುಟದ ೨೪ನೆಯ ಶಾಸನ ಮೊದಲ ಆವೃತ್ತಿಯಲ್ಲಿ ೭ನೆಯ ಶಾಸನವಾಗಿದ್ದು, ಮೊದಲನೆಯ ಆವೃತ್ತಿಯ ೧೪೧ನೆಯ ಶಾಸನವನ್ನು ಎರಡನೆಯ ಆವೃತ್ತಿಯಲ್ಲಿ ಸೇರಿಸಿಲ್ಲ.

ಅತಿ ಪ್ರಾಚೀನವಾದ ಶಾಸನ. ಇದು ಸುಮಾರು ೬–೭ನೆಯ ಶತಮಾನಗಳಲ್ಲಿ ಹುಟ್ಟಿರಬಹುದಾದ ಶಾಸನ. ಈ ಸಂಪುಟದಲ್ಲಿರುವ ಶಾಸನಗಳನ್ನು ಕಾಲಸೂಚಿಯ ಪ್ರಕಾರ ಕೆಳಕಂಡ ಪಟ್ಟಿಯಲ್ಲಿರುವಂತೆ ವಿಂಗಡಿಸಬಹುದು.

ಕಾಲ ಕ್ರಿಸ್ತಶಕ		ಚಿಕ್ಕಬೆಟ್ಟ	ದೊಡ್ಡಬೆಟ್ಟ	ಶ್ರವಣ ಬೆಳಗೊಳ	ಸಮೀಪದ ಗ್ರಾಮುಗಳು
೬–೭ನೆಯ ಶತಮಾನ		೧	—	—	—
೭ನೆಯ	,,	೫೪	—	—	—
೮ನೆಯ	,,	೨೦	—	—	—
೯ನೆಯ	,,	೧೦	—	—	—
೧೦ನೆಯ	,,	೬೯	೭	—	—
೧೧ನೆಯ	,,	೪೧	೩	೨	೪
೧೨ನೆಯ	,,	೫೩	೩೮	೧೫	೨೨
೧೩ನೆಯ	,,	೧೬	೧೬	೧೦	೧೦
೧೪ನೆಯ	,,	೩	೭	೮	೩
೧೫ನೆಯ	,,	—	೨೦	೮	೩
೧೬ನೆಯ	,,	—	೧೧	೨	೩
೧೭ನೆಯ	,,	೩	೩೮	೧೫	೪
೧೮ನೆಯ	,,	—	೨೮	೩	—
೧೯ನೆಯ	,,	೧	೪	೧೭	೧
ಒಟ್ಟು		೨೭೧	೧೭೨	೮೦	೫೦=೫೭೩

ಕಟವಪ್ರ—ಕಳ್ವಪ್ಪು—ವೆಳ್ಗೊಳ

ಶ್ರವಣಬೆಳಗೊಳದ ಶಾಸನಗಳಲ್ಲಿ ಈ ಸ್ಥಳವನ್ನು ಕಟವಪ್ರ, ಕಟಪ್ಪ, ಕಟಪ್ರ, ಕಟ್ವಪ್ಪ, ಕಳ್ಬಪ್ಪ, ಕಳ್ಬಪ್ಪು, ಕಳ್ವಪ್ಪು, ವೆಳ್ಗೊಳ, ಬೆಳ್ಗೊಳ, ಬೆಳುಗೊಳ, ಧವಳಸರಸತೀರ್ಥ, ಶ್ವೇತಸರೋವರ ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ. ಅತಿ ಪ್ರಾಚೀನ ಸಂಸ್ಕೃತ. ಶಾಸನದಲ್ಲಿ (ನಂ. ೧, ಸುಮಾರು ೬–೭ನೆಯ ಶತಮಾನ) ಕಟವಪ್ರ ಎಂಬ ರೂಪವಿದೆ. ೭ನೆಯ ಶತಮಾನದ ಸಂಸ್ಕೃತ ಶಾಸನಗಳಲ್ಲಿ (ನಂ. ೧೩, ೮೫) ಕಟವಪ್ರಗಿರಿ, ಕಟವಪ್ರಶೈಲ ಎಂಬ ಮತ್ತು ಅದೇ ಕಾಲಕ್ಕೆ ಸೇರಿದ ಕನ್ನಡ ಶಾಸನಗಳಲ್ಲಿ (ನಂ. ೨೫, ೧೨೩, ೧೩೨) ಕಟವಪ್ರಶೈಲ, ಕಟಪ್ರಗಿರಿ, ಕಟ್ವಪ್ರಗಿರಿ ಎಂಬ ರೂಪಗಳನ್ನು ಕಾಣಬಹುದು. ಕಳ್ಬಪ್ಪ, ಕಳ್ಬಪ್ಪು, ಕಳ್ವಪ್ಪು ಎಂಬ ಕನ್ನಡದ ಹೆಸರುಗಳು ಸಹ ೭ನೆಯ ಶತಮಾನದ ಶಾಸನಗಳಲ್ಲಿ (ಕ್ರಮವಾಗಿ ನಂ. ೩೧, ೧೪, ೩೦ ಇತ್ಯಾದಿ) ಕಾಣುತ್ತೇವೆ. ''ಕಟವಪ್ರ, ಕಳ್ವಪ್ಪುಗಳೆರಡೂ ಚಿಕ್ಕಬೆಟ್ಟವನ್ನೇ ಸೂಚಿಸುತ್ತವೆ . . . . ಆದರೆ ಅವುಗಳಲ್ಲಿ ಯಾವುದು ಮೂಲ? 'ಕಟವಪ್ರ' ಎಂಬುದು 'ಕಳ್ವಪ್ಪು' ಎಂಬುದರ ಸಂಸ್ಕೃತೀಕರಣವೇ? ಅಥವಾ 'ಕಳ್ವಪ್ಪು' ಎಂಬುದು 'ಕಟವಪ್ರ' ಎಂಬುದರ ತದ್ಭವವೇ?'' ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕುವ ಯತ್ನದಲ್ಲಿ ಡಾ. ಚಿದಾನಂದಮೂರ್ತಿಯವರು ಇವುಗಳ ಮೂಲವಿನ್ನೂ ಪರಿಷ್ಕಾರವಾಗಬೇಕಾಗಿದೆ ಎಂದಿದ್ದಾರೆ.[1]

ಈ ಪ್ರಶ್ನೆಯನ್ನು ಚರ್ಚಿಸುತ್ತಾ ಶ್ರೀ ದೇವೀರಪ್ಪನವರು ''ಕಳ್ವಪ್ಪು ಪದದ ಪ್ರಾಚೀನರೂಪ ಕಳ್‌ಬೆಳ್ಪು ಎಂಬುದಿರಬೇಕು. ಕಾಲ ಸವೆದಂತೆ ಪದವೂ ಸವೆದು ಕಳ್ವೆಪ್ಪು–ಕಳ್ವಪ್ಪು–ಕಳ್ಬಪ್ಪು ಆಗಿರಬೇಕೆಂದು ತೋರುತ್ತದೆ'' ಎಂದಿದ್ದಾರೆ. ''ಕಳ್–ನೀರು; ಕರ್ಚಿ, ಕಚ್ಚು, ಕಳ್ಚು, ಕಲುವು ಈ ಮಾತುಗಳಿಗೆ ಮೂಲ ಕಳ್ ಎಂಬುದೆ. ಬೆಳ್ಪು (ವೆಳ್ಪು) ಬೆಪ್ಪು ಆಗುವುದು.

[1] ಸಂಶೋಧನ ತರಂಗ, ಪುಟ ೭೧

ಅದು ಸಮಸ್ತ ಪದದಲ್ಲಿ ಸೇರಿಕೊಂಡಾಗ ಬಪ್ಪು ಆಗುವುದೂ ಭಾಷಾಚರಿತ್ರೆಯಲ್ಲಿ ಸಂಭವನೀಯ. ಅಂತೂ ಕಟ್ಬಿಪ್ಪು-ಬೆಳ್ಳಿನ ನೀರು. ಕಟವಪ್ರ ಎಂಬುದು ರೂಪಸಾಮ್ಯವನ್ನು ಮಾತ್ರ ಗಮನಿಸಿ ಸಂಸ್ಕೃತೀಕರಣ ಮಾಡಿದ ಪದ'' ಎಂದೂ ಅವರು ಹೇಳಿದ್ದಾರೆ.[1]

ಈ ಸಂದರ್ಭದಲ್ಲಿ ಇನ್ನೊಂದು ಊಹೆಯನ್ನು ಇಲ್ಲಿ ಗಮನಿಸಬಹುದು. ಹಲ್ಮಿಡಿ ಶಾಸನದಲ್ಲಿ ಉಕ್ತವಾಗಿರುವ 'ಕಳಭೋರ' ಎಂಬುದು ತಮಿಳಿನಲ್ಲಿ ಕಳಭ್ರ, ಕಳಪ್ಪರ್, ಕಲಪ್ಪಾಳರ್ ಎಂಬ ರೂಪವನ್ನು ಹೊಂದಿದೆಯೆಂದೂ, ಕಳಭ್ರ ಎಂಬುದು ಒಂದು ಜನಾಂಗದ ಹೆಸರೆಂದೂ, ಸುಮಾರು ಕ್ರಿ.ಶ. ೭ನೆಯ ಶತಮಾನದ ತಮಿಳುನಾಡಿನ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ತಲೆಕೆಳಗು ಮಾಡಿದವರು ಇವರೆಂದೂ ಶ್ರೀ ವೆಂಕಟರಾಮನ್‌ರವರು ಹೇಳಿದ್ದಾರೆ.[2] ಈ ಕಳಭ್ರರು ಶ್ರವಣಬೆಳಗೊಳದ ಸುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿದ್ದರೆಂದು ಊಹಿಸುವ ಈ ವಿದ್ವಾಂಸರು ಕಳವಪ್ಪು, ಕಳಬಪ್ಪು ಎಂಬ ಹೆಸರು ಈ ಜನಾಂಗದವರಿಂದಲೇ ಬಂದಿತೆಂಬುದನ್ನು ಸೂಚಿಸಿದ್ದಾರೆ. ಕದಂಬರಿಂದ ಹೊರದೂಡಲ್ಪಟ್ಟ ಈ ಜನ ನಂತರ ಬೆಂಗಳೂರು, ಕೋಲಾರ, ಚಿತ್ತೂರು ಜಿಲ್ಲೆಗಳನ್ನು ಆಕ್ರಮಿಸಿದರೆಂದೂ, ಬಳಿಕ ತಮಿಳುನಾಡಿನ ತೊಂಡೈಮಂಡಲ ಮುಂತಾದ ಪ್ರದೇಶಗಳಿಗೆ ವಲಸೆ ಹೋದರೆಂದೂ, ಇವರ ಊಹೆ. ಈ ಊಹೆಗೆ ಯಾವ ಆಧಾರವೂ ಇಲ್ಲ. ಕಟ್ಬಿಪ್ಪು ಮತ್ತು ಕಳಭ್ರ ಎಂಬುದಕ್ಕೆ ಯಾವ ಸಂಬಂಧವೂ ಇಲ್ಲ. ಅಲ್ಲದೆ ಹಲ್ಮಿಡಿ ಶಾಸನದಲ್ಲಿ ಉಕ್ತವಾದ ಕಳಭೋರ ಎಂಬುದು ಕಳಭ್ರ ಎಂಬ ಜನಾಂಗದ ಹೆಸರು ಎಂಬ ಹೇಳಿಕೆ ಆಧಾರರಹಿತವಾಗಿದೆ.

ಶ್ರೀ ದೇವೀರಪ್ಪನವರು ಕಟ್ ಎಂಬ ಮಾತಿಗೆ ನೀರು ಎಂಬ ಅರ್ಥವನ್ನು ಕೊಟ್ಟು, ಬೆಳ್ಪಿನನೀರು-ಕಟ್ವಿಪ್ಪು ಎಂಬುದು ಈ ಹೆಸರಿನ ಮೂಲರೂಪವೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಅವರು ದೊಡ್ಡಬೆಟ್ಟ ಮತ್ತು ಚಿಕ್ಕಬೆಟ್ಟಗಳೆರಡೂ ಬಿಳಿಯ ಕಗ್ಗಲ್ಲಿನ ಬಂಡೆಗಳು ಎಂದಿರುವುದು ಸಮಂಜಸವಾಗಿಲ್ಲ. ಒಂದು ಸ್ಥಳಕ್ಕೆ ಬರುವ ಹೆಸರು ಅಲ್ಲಿನ ಭೌಗೋಳಿಕ ಪರಿಸ್ಥಿತಿಯನ್ನು ಸಹ ಸೂಚಿಸುತ್ತದೆ ಎಂಬುದು ಸರ್ವವಿದಿತವಾದ ಅಂಶ. ಕಬ್ ಎಂಬ ಪದಕ್ಕೆ ಕಪ್ಪು ಎಂಬ ಅರ್ಥವಿರುವುದನ್ನು ಇಲ್ಲಿ ಗಮನಿಸಬೇಕು. ಬಹುಶಃ ಕಟ್ಬಿಪ್ಪು ಎಂಬುದು ಕಪ್ಪಾದ ಗುಡ್ಡ, ಕರಿಗುಡ್ಡ—ಎಂಬ ಅಲ್ಲಿನ ಪ್ರಾಕೃತಿಕ ಸನ್ನಿವೇಶವನ್ನು ವಿವರಿಸುವಂತಹ ಹೆಸರಾಗಿರಬೇಕು. ಆದರೆ ಬಪ್ಪು-ವಪ್ಪು-ಎಂಬುದಕ್ಕೆ ಬೆಟ್ಟ ಎಂಬ ಅರ್ಥವಿದ್ದಿತೇ ಎಂಬುದು ತಿಳಿಯದು. ಸಂಸ್ಕೃತದಲ್ಲಿ ವಪ್ರ ಎಂಬುದಕ್ಕೆ ಶೈಲ, ಗಿರಿ ಎಂಬ ಅರ್ಥವಿದೆ. ಆದರೆ ' ಕಟ ' ಎಂಬ ಪದಕ್ಕೆ ಅರ್ಥವೇನು ?

ಕಟ ಎಂದರೆ ಸಮಾಧಿಗುಹೆ, ಸಮಾಧಿ ಮಾಡತಕ್ಕ ಪ್ರದೇಶ.[3] ಚಿಕ್ಕಬೆಟ್ಟದಲ್ಲಿರುವ ೭ನೆಯ ಶತಮಾನದ ೫೪ ಶಾಸನಗಳಲ್ಲಿ ೪೧ ಶಾಸನಗಳು ಸಲ್ಲೇಖನ, ಸನ್ಯಸನ ಇತ್ಯಾದಿಗಳ ಮೂಲಕ ದೇಹವನ್ನು ಮುಡಿಪಿದ ಜೈನರ ನಿಷಿಧಿ ಶಾಸನಗಳು. ಅಂತೆಯೇ ೮ನೆಯ ಶತಮಾನದ ೨೦ ಶಾಸನಗಳಲ್ಲಿ ೧೦ ಅಂತಹುದೇ ಶಾಸನಗಳು. ಇದನ್ನೂ ಗಮನಿಸಿದರೆ ಕಟವಪ್ರ ಎಂದರೆ ಸಮಾಧಿಗಳಿರುವ ವಪ್ರ—ಸಮಾಧಿಮರಣ ಹೊಂದಲು ಯೋಗ್ಯವಾದ ಗುಡ್ಡ—ಎಂದು ಅರ್ಥವಾಗುವುದಿಲ್ಲವೇ? ೧೩ನೆಯ ಶಾಸನದಲ್ಲಿ ಅರಿಷ್ಟನೇಮಿಯು ತನ್ನ ಗಣವನ್ನು ತ್ಯಜಿಸಿ, ಕಟವಪ್ರಗಿರಿಯನ್ನೇರಿ ('ಸಮಾರುಹ್ಯ' ; ಶಾಸನಪಾಠದ ೫ನೆಯ ಸಾಲು) ಅಲ್ಲಿ ಸಿದ್ಧಿಯನ್ನು ಪಡೆದನೆಂದು ಹೇಳಿದೆ. ಅಂತೆಯೇ ಚರಿತಶ್ರೀ ಎಂಬ ಮುನಿಯು ಕಟ್ಬಪ್ಪಿನಾಮೇಲ್ ವ್ರತಗಳನ್ನು ನೋನ್ತು ಸೌಖ್ಯಸ್ಥನಾದನೆಂದು ೧೪ನೆಯ ಶಾಸನದಲ್ಲಿ ಹೇಳಿದೆ. ಮಾಸೇನರಿಷಿಗಳು ' ಕಟ್ವಪ್ಪಿನಾ ವೆಟ್ಟದುಳ್ ' ನೋನ್ತು ಮರಣ ಹೊಂದಿದರು (ನಂ. ೩೦). ಇವುಗಳನ್ನು ಪರಿಶೀಲಿಸಿದಾಗ ಆ ವೇಳೆಗಾಗಲೇ ಭದ್ರಬಾಹುಮುನಿಯಿಂದ ಪವಿತ್ರಗೊಳಿಸಲ್ಪಟ್ಟ ಈ ಚಿಕ್ಕಬೆಟ್ಟ ಜೈನರ ಸಮಾಧಿಮರಣಕ್ಕೆ ಅರ್ಹವಾದ ಸ್ಥಳವೆಂದು, ಪವಿತ್ರ ತೀರ್ಥವೆಂದು ಹೆಸರನ್ನು ಪಡೆದಿತ್ತು ಎಂಬುದು ಸ್ಪಷ್ಟವಾಗುತ್ತದೆ (ನಂ. ೮೫, ೮೬, ೮೭). ಆದ್ದರಿಂದ ಕಟವಪ್ರ ಎಂಬ ಸಂಸ್ಕೃತ ಪದಕ್ಕೆ—ಸಮಾಧಿಗುಡ್ಡ ಎಂಬ ಅರ್ಥವನ್ನು ಕೊಡುವುದು ಉಚಿತವೆನಿಸುತ್ತದೆ. ಕಟವಪ್ರದ ಕನ್ನಡ ರೂಪಾಂತರ ಕಟ್ಬಿಪ್ಪು ಆಗಿರಬೇಕು. ಕಟವಪ್ರ-ಕಡವಪ್ರ-ಕಟ್ವಿಪ್ರ-ಕಟ್ವಿಪ್ಪ-ಕಟ್ವಿಪ್ಪು-ಕಟ್ಬಿಪ್ಪು ಎಂಬ ರೂಪಾಂತರ ಅಸಾಧ್ಯವಾದುದೇನೂ ಅಲ್ಲವೆನಿಸುತ್ತದೆ.

ಇನ್ನು ವೆಳ್ಗೊಳ ಎಂಬ ಹೆಸರೂ ಈ ಊರಿಗೆ ಅನ್ವಯಿಸುತ್ತದೆ ಎಂಬುದನ್ನು ಗಮನಿಸಬೇಕು. ಇದನ್ನು ಬೆಳ್ ಕೊಳ=ಬಳ್ಗೊಳ ಎಂದು ಅರ್ಥೈಸಿ, ಊರ ನಡುವೆ ಇರುವ ಕೊಳದಿಂದ ಊರಿಗೆ ಈ ಹೆಸರು ಬಂದಿರಬಹುದೆಂಬ ಶ್ರೀ ನರಸಿಂಹಾಚಾರ್ಯರ

---

[1] ಪ್ರಬುದ್ಧ ಕರ್ಣಾಟಕ, ಸಂಪುಟ ೫೧, ಸಂಚಿಕೆ ೨, ಪುಟ ೧೬೩–೬೫

[2] *Transactions of the Archaeological Society of South India* (Madras), 1956–57, pp. 94-100

[3] Monier Williams : *A Sanskrit English Dictionary* (Indian edition, 1970) pp. 243. *Kaṭa* a burning ground or sephulcre; Kittel : *Kannada English Dictionary* (Revised and enlarged, 1969) p. 354

ಊಹೆಗೆ[1] ಕ್ರಿ. ಶ. ೭ನೆಯ ಶತಮಾನದ ಎರಡು ಶಾಸನಗಳಲ್ಲಿ (ನಂ. ೩೪ ಮತ್ತು ೩೮) ಕ್ರಮವಾಗಿ ವೆಳ್ಗೊಳ ಮತ್ತು ಬೆಳ್ಗೊಳ ಎಂಬ ಹೆಸರುಗಳಿರುವುದು ಆಧಾರವಾಗಿದೆ. ಆದರೆ ೫೦೧ನೆಯ ಶಾಸನದಲ್ಲಿ ಅದನ್ನು ಚಿಕ್ಕದೇವರಾಜೇಂದ್ರ ಮಹಾಸ್ವಾಮಿಯವರ ಕಲ್ಯಾಣಿ ಎಂದು ಹೇಳಿರುವುದನ್ನು, ಅನಂತಕವಿಯ ಗೊಮ್ಮಟೇಶ್ವರಚರಿತ್ರೆಯಲ್ಲಿ ಮೈಸೂರಿನ ಅರಸರಾದ ಚಿಕ್ಕದೇವರಾಜರು (೧೬೭೨-೧೭೦೪) ಇದನ್ನು ಕಟ್ಟಿಸಲು ಆಜ್ಞೆಮಾಡಿದರೆಂಬ ಹೇಳಿಕೆಯನ್ನು ಸಹ ಗಮನದಲ್ಲಿಟ್ಟುಕೊಂಡು ತಾವು ಮಾಡಿದ ಊಹೆ ಸರಿಯೇ ಎಂಬ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ.[2] ೭ನೆಯ ಶತಮಾನದ ಶಾಸನಗಳಲ್ಲಿನ ಉಲ್ಲೇಖವನ್ನು ಕಡೆಗಣಿಸಲಾಗದು. ಆದ್ದರಿಂದ ಅವರೇ ಹೇಳಿರುವಂತೆ ಈ ಕೊಳ ಆ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಈ ಕೊಳದಿಂದಲೇ ಆ ಊರಿಗೂ ಹೆಸರು ಬಂದಿರಬಹುದು. ಬಹುಶಃ ಚಿಕ್ಕದೇವರಾಜೇಂದ್ರನು ಅದನ್ನು ದುರಸ್ತುಗೊಳಿಸಿ ವಿಸ್ತರಿಸಿರಬಹುದು. ಕಟವಪ್ರ, ಕಳ್ವಪ್ಪು ಎಂಬುದು ಗುಡ್ಡದ ಹೆಸರಾಗಿದ್ದು, ಊರಿಗೆ ವೆಳ್ಗೊಳ ಎಂಬ ಹೆಸರಿರುವುದು ತಪ್ಪೇ?

ಭದ್ರಬಾಹು-ಚಂದ್ರಗುಪ್ತ

ಅತಿ ಪ್ರಾಚೀನ ಶಾಸನವು ಚಿಕ್ಕಬೆಟ್ಟದಲ್ಲಿರುವ ಸುಪ್ರಸಿದ್ಧವಾದ ಭದ್ರಬಾಹುವಿಗೆ ಸಂಬಂಧಿಸಿದ ಶಾಸನ. ಈ ಶಾಸನ ಅನೇಕ ಪಂಡಿತರ ವಿಮರ್ಶೆಗೆ ಒಳಗಾಗಿದೆ. ಸ್ಥೂಲವಾಗಿ ಹೇಳಬೇಕೆಂದರೆ ಈ ಶಾಸನ ಜೈನರ ಸಾಹಿತ್ಯದಲ್ಲಿ ಮೂಡಿಬಂದಿರುವ ಸಾಂಪ್ರದಾಯಿಕ ಹೇಳಿಕೆಯೊಂದನ್ನು ದೃಢಪಡಿಸುತ್ತದೆ ಎಂಬಷ್ಟು ಎಲ್ಲರೂ ಒಪ್ಪಿಕೊಂಡಿರುವ ಅಂಶ. ಆದರೆ ಇದರಲ್ಲಿ ಉಕ್ತರಾದ ಹಲವರನ್ನು ಗುರುತಿಸುವುದರಲ್ಲಿ ಬಹಳ ಭಿನ್ನಾಭಿಪ್ರಾಯಗಳಿವೆ. ಮಹಾವೀರನ ನಿರ್ವಾಣಾನಂತರ, ಗೌತಮಗಣಧರನೇ ಮೊದಲಾದ ಅನೇಕ ಋಷಿಗಳು ಜೈನರ ಗುರುಗಳಾಗಿದ್ದು, ಅವರಲ್ಲಿ ಒಬ್ಬನಾದ ಭದ್ರಬಾಹುಸ್ವಾಮಿಯು ಉಜ್ಜಯಿನಿಯಲ್ಲಿದ್ದಾಗ ಹನ್ನೆರಡು ವರ್ಷಗಳ ಬರಗಾಲ ದೇಶವನ್ನು ಕ್ಷೋಭೆಗೆ ಒಳಪಡಿಸುತ್ತದೆ ಎಂಬ ಭವಿಷ್ಯವಾಣಿಯನ್ನು ನುಡಿದುದರ ಪರಿಣಾಮವಾಗಿ ಸಂಪೂರ್ಣ ಸಂಘವು ಉತ್ತರಾಪಥದಿಂದ ದಕ್ಷಿಣಾಪಥಕ್ಕೆ ವಲಸೆ ಬಂದು, ಕ್ರಮೇಣ ನೂರಾರು ಜನಪದಗಳನ್ನು, ಗ್ರಾಮಗಳನ್ನು, ಸಂತೋಷದಿಂದಿದ್ದ ಜನಧನಕನಕಸಸ್ಯಗೋಮಹಿಷಜಾವಿಕುಲವನ್ನು ಒಳಗೊಂಡ ದೇಶವೊಂದಕ್ಕೆ ಬಂದಿತೆಂದೂ, ಇಲ್ಲಿ ಪ್ರಭಾಚಂದ್ರನೆಂಬ ಹೆಸರಿನ ಆಚಾರ್ಯನೊಬ್ಬನು ತನ್ನ ಅವಸಾನಕಾಲ ಸಮೀಪಿಸುತ್ತಿರುವುದನ್ನರಿತು ಸಮಾಧಿ ಹೊಂದಬೇಕೆಂಬ ಇಚ್ಛೆಯಿಂದ, ಸಂಘವನ್ನು ಸಂಪೂರ್ಣವಾಗಿ ಬೀಳ್ಕೊಟ್ಟು ಕೇವಲ ಒಬ್ಬನೇ ಒಬ್ಬ ಶಿಷ್ಯನೊಡಗೂಡಿ ವಿಸ್ತೀರ್ಣವಾದ ಶೀತಲಶಿಲೆಗಳ ಈ ಕಟವಪ್ರಗಿರಿಯಲ್ಲಿ ಜೀವವನ್ನು ತೊರೆದನು ಎಂದು ಈ ಶಾಸನ ತಿಳಿಸುತ್ತದೆ. ಈ ಶಾಸನದಲ್ಲಿ ಉಕ್ತರಾದವರಲ್ಲಿ ಭದ್ರಬಾಹುಸ್ವಾಮಿ, ಪ್ರಭಾಚಂದ್ರ ಹಾಗೂ ಅವನೊಡನೆ ಉಳಿದ ಒಬ್ಬನೇ ಶಿಷ್ಯ—ಇವರುಗಳು ಯಾರು ಎಂಬುದನ್ನು ಕುರಿತು ಅನೇಕ ಚರ್ಚೆಗಳಾಗಿವೆ.

ಈ ಶಾಸನಪಾಠವನ್ನು ರೈಸ್‌ರವರು ಭಿನ್ನವಾಗಿ ಓದಿದ್ದರು. ಶಾಸನದ ೬ನೆಯ ಸಾಲಿನಲ್ಲಿನ "ಆಚಾರ್ಯಃ ಪ್ರಭಾಚಂದ್ರೋನಾಮಾವನಿತಲಲಲಾಮಭೂತೇ" ಎಂಬುದನ್ನು ಅವರು "ಆಚಾರ್ಯ್ಯಃ ಪ್ರಭಾಚಂದ್ರೇಣಾಮಾವನಿತಲಲಲಾಮಭೂತೇ" ಎಂದು ಓದಿದ್ದರು.[3] ಇದರಂತೆ ಆಚಾರ್ಯ್ಯ ಎಂಬುದು ಭದ್ರಬಾಹುವಿಗೆ ಅನ್ವಯಿಸುವುದೆಂದೂ, ಪ್ರಭಾಚಂದ್ರ ಎಂಬುದು ಅವರೊಡನೆ ಉಳಿದ ಒಬ್ಬ ಶಿಷ್ಯನ ಹೆಸರೆಂದೂ ಸೂಚಿಸಿದರು. ಜೈನಸಾಹಿತ್ಯದಲ್ಲಿ ಮೂಡಿಬಂದಿರುವ ಕತೆಯಂತೆ ಭದ್ರಬಾಹುಸ್ವಾಮಿಯೊಡನಿದ್ದ ಶಿಷ್ಯನು ಚಂದ್ರಗುಪ್ತನು. ಶಾಸನದಲ್ಲಿ ಉಕ್ತನಾದ ಪ್ರಭಾಚಂದ್ರನೇ ಈ ಚಂದ್ರಗುಪ್ತನೆಂದೂ, ಈತನು ಸನ್ಯಾಸ ದೀಕ್ಷೆಯನ್ನು ಪಡೆಯುವ ಸಂದರ್ಭದಲ್ಲಿ ಪ್ರಭಾಚಂದ್ರನೆಂಬ ಹೆಸರನ್ನು ಧರಿಸಿದನೆಂದೂ ರೈಸ್‌ರವರು ಅಭಿಪ್ರಾಯಪಟ್ಟರು.[4] ಶ್ರುತಕೇವಲಿಗಳಲ್ಲೊಬ್ಬನಾದ ಭದ್ರಬಾಹುವೇ ಈ ಗುರುವೆಂದೂ, ಮೌರ್ಯವಂಶದಲ್ಲಿ ಪ್ರಸಿದ್ಧನಾದ ಚಂದ್ರಗುಪ್ತ ಮೌರ್ಯನೇ ಶ್ರವಣಬೆಳಗೊಳಕ್ಕೆ ಆತನೊಡನೆ ಬಂದ ಚಂದ್ರಗುಪ್ತ (ಪ್ರಭಾಚಂದ್ರ)ನೆಂದೂ ಇವರು ನಿರ್ಣಯಿಸಿದರು.

---

[1] Introduction, p. 1

[2] *Ibid* p. 32

[3] *Inscriptions from Sravanabelgola* (1889). ಚಿಕ್ಕಬೆಟ್ಟದ ಶಾಸನಗಳು ಪುಟ 1.

[4] "That Bhadrabāhu was the leader of the pilgrims and that he died at Śravaṇabeḷagoḷa there seems no reason to call in question . . . . . . that he was attended to the last by a disciple named Chandragupta may also be allowed . . . . . According to No. 1 he appears to have taken the clerical name of Prabhāchandra on retiring from the world, and it was the usual custom to change the name on such an occasion" (*ibid.*, Introduction, pp. 6–7).

ಈ ಅಭಿಪ್ರಾಯವನ್ನು ಕಟುವಾಗಿ ಟೀಕಿಸಿದ ಡಾ. ಫ್ಲೀಟ್‌ರವರು ಶಾಸನೋಕ್ತ ಭದ್ರಬಾಹು ಕ್ರಿ.ಪೂ. ೩೮೦ರಲ್ಲಿ ಗತಿಸಿದ ಶ್ರುತಕೇವಲಿ ಭದ್ರಬಾಹುವಲ್ಲ, ಆದರೆ ನಂತರ ಕ್ರಿ.ಪೂ. ೩೦ ಅಥವಾ ೩೧ರಲ್ಲಿ ಬಂದ ಇಮ್ಮಡಿ ಭದ್ರಬಾಹುವೆಂದೂ, ಚಂದ್ರಗುಪ್ತನು ಮೌರ್ಯರ ಸಾಮ್ರಾಟನಾದ ಚಂದ್ರಗುಪ್ತನಲ್ಲ, ಆದರೆ ಅರ್ಹದ್ಬಲಿ ಮತ್ತು ವಿಶಾಖಾಚಾರ್ಯನೆನಿಸಿಕೊಂಡ ಇಮ್ಮಡಿ ಭದ್ರಬಾಹುವಿನ ಶಿಷ್ಯನಾದ ಗುಪ್ತಿಗುಪ್ತನೆಂದೂ ಪ್ರತಿಪಾದಿಸಿದರು. ಈ ಶಾಸನದಲ್ಲಿ ಭದ್ರಬಾಹುವಿನ ಉಲ್ಲೇಖ ಎರಡು ಸಲ ಬರುತ್ತದೆ. ಮೊದಲನೆಯ ಬಾರಿ ಲೋಹಾರ್ಯ, ಜಮ್ಬು, ವಿಷ್ಣುದೇವ, ಅಪರಾಜಿತ, ಗೋವರ್ಧನ ಇವರೊಡನೆ ಬಂದಿದೆ. ನಂತರ ಭದ್ರಬಾಹುಸ್ವಾಮಿಯು ಹನ್ನೆರಡು ವರ್ಷಗಳ ಬರಗಾಲದ (ವೈಷಮ್ಯ) ಭವಿಷ್ಯವನ್ನು ನುಡಿದರೆಂದು ಹೇಳಿದೆ. ಆದ್ದರಿಂದ ನಂತರ ಉಲ್ಲೇಖಿತರಾದ ಭದ್ರಬಾಹುಸ್ವಾಮಿಗಳು ಶ್ರುತಕೇವಲಿಗಳಲ್ಲವೆಂಬುದು ಇವರು ನೀಡಿರುವ ಪ್ರಬಲವಾದ ಕಾರಣಗಳಲ್ಲೊಂದು.[1] ಗುಪ್ತಿಗುಪ್ತ ಎಂಬುವನ ಹೆಸರು ಫ್ಲೀಟ್‌ರವರು ಉಲ್ಲೇಖಿಸಿದ ಪ್ರಭೂತವರ್ಷನ ಕಡಬ ತಾಮ್ರಶಾಸನದಲ್ಲಿ ಬರುವುದಿಲ್ಲವಾದರೂ, ಅವರ ವಾದಕ್ಕೆ ಇದರಿಂದ ಧಕ್ಕೆಯೇನೂ ಉಂಟಾಗುವುದಿಲ್ಲವೆಂದು ಲ್ಯೂಡರ್ಸ್‌ರವರು ಹೇಳಿದರು.[2] ಈ ವಾದವಿವಾದಗಳನ್ನೆಲ್ಲಾ ಶ್ರೀ ಆರ್. ನರಸಿಂಹಾಚಾರ್ಯರು ಎರಡನೆಯ ಆವೃತ್ತಿಯ ತಮ್ಮ ಪೀಠಿಕೆಯಲ್ಲಿ ಕ್ರೋಢೀಕರಿಸಿದ್ದಾರೆ.[3]

ಭದ್ರಬಾಹು ಮತ್ತು ಚಂದ್ರಗುಪ್ತರು ದಕ್ಷಿಣಕ್ಕೆ ವಲಸೆ ಬಂದರೆಂಬ ವಿಷಯ ಜೈನರ ಸಾಂಪ್ರದಾಯಿಕ ಕತೆಗಳಲ್ಲೂ, ಸಾಹಿತ್ಯದಲ್ಲೂ ಇದೆ. ಶ್ರವಣಬೆಳಗೊಳದ ೨೫೧ನೆಯ ಶಾಸನ ಜಿನಚಂದ್ರನು ಭದ್ರಬಾಹುಸ್ವಾಮಿಯ ಪಾದಗಳಿಗೆ ವಂದಿಸಿದನೆಂದು ಹೇಳಿದೆ. ಇದು ೧೧ನೆಯ ಶತಮಾನದ ಶಾಸನ. ಭದ್ರಬಾಹುವಿನ ಗುಹೆಯಲ್ಲಿನ ಬಂಡೆಯೊಂದರ ಮೇಲೆ ಕೆತ್ತಿದೆ. ಚಿಕ್ಕಬೆಟ್ಟದ ಕುಂಭಿಯಮೇಲೆ ಬಿಡಿಸಲಾಗಿರುವ ಪಾದಗಳ ಚಿತ್ರದ ಕೆಳಗಡೆ ಸುಮಾರು ೧೩ನೆಯ ಶತಮಾನದ ಶ್ರೀ ಭದ್ರಬಾಹು ಭಲಿಸ್ವಾಮಿಯ ಪಾದ ಎಂಬ ಶಾಸನವಿದೆ (ನಂ. ೨೫೪). ಭದ್ರಬಾಹುವಿನ ಗುಹೆ ಎಷ್ಟು ಪ್ರಾಚೀನವೆಂದು ಹೇಳಲಾಗದು. ಅದರೊಳಗಿನ ಶಾಸನ ೧೧ನೆಯ ಶತಮಾನದ್ದಾದಕಾರಣ ಆ ವೇಳೆಗಾಗಲೇ ಭದ್ರಬಾಹು ಅಲ್ಲಿಗೆ ಬಂದು ನೆಲಸಿದ್ದನೆಂಬ ನಂಬಿಕೆ ಬಲವಾಗಿದ್ದಿತೆಂಬುದು ಸ್ಪಷ್ಟ.

ದೊಡ್ಡಬೆಟ್ಟದಲ್ಲಿ ಸಿದ್ಧರ ಬಸದಿಯ ಕಂಬವೊಂದರ ಮೇಲಿರುವ ಕ್ರಿ.ಶ. ೧೪೩೨ನೆಯ ವರ್ಷದ ಶಾಸನ (ನಂ. ೩೬೪) ದಲ್ಲಿಯೂ ಶ್ರುತಕೇವಲಿಯೆನಿಸಿದ ಭದ್ರಬಾಹು ಹಾಗೂ ಆತನ ಶಿಷ್ಯನಾದ ಚಂದ್ರಗುಪ್ತರ ಉಲ್ಲೇಖವಿದೆ.

ಕ್ರಿ.ಶ. ೧೧೨೯ ಹಾಗೂ ೧೧೬೩ನೆಯ ವರ್ಷಗಳ, ನಂ. ೭೭ ಮತ್ತು ೭೧ನೆಯ, ಶಾಸನಗಳಲ್ಲಿ ಭದ್ರಬಾಹು ಮತ್ತು ಚಂದ್ರಗುಪ್ತರ ಉಲ್ಲೇಖವಿದೆ. ೭೧ನೆಯ ಶಾಸನದಲ್ಲಿ ಭದ್ರಬಾಹುವನ್ನು ಶ್ರುತಕೇವಲಿ ಎಂದು ಕರೆದಿದೆ. ಎರಡು ಶಾಸನಗಳೂ ಚಂದ್ರಗುಪ್ತನು ಭದ್ರಬಾಹುವಿನ ಶಿಷ್ಯನೆಂದು ಹೇಳಿವೆ.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ದೊರೆತಿರುವ ಎರಡು ಶಾಸನಗಳಲ್ಲಿ ಕಟ್ಬಪ್ಪು ಭದ್ರಬಾಹು ಮತ್ತು ಚಂದ್ರಗುಪ್ತರ ಚರಣಮುದ್ರಾಂಕಿತ (ಲಾಞ್ಛನಾಞ್ಛಿತ)ವೆಂದು ಹೇಳಿದೆ.[4] ಈ ಎರಡು ಶಾಸನಗಳ ಕಾಲ ಸುಮಾರು ಕ್ರಿ.ಶ. ೯೦೦.

ಇದಕ್ಕೂ ಪೂರ್ವದ ಶಾಸನವೊಂದು ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿಯೇ ಇದೆ. ಪಾರ್ಶ್ವನಾಥ ಬಸದಿಯ ಬಲಗಡೆ ಬಂಡೆಯ ಮೇಲೆ ಕೆತ್ತಲಾಗಿರುವ ೧ನೆಯ ಶಾಸನದ ಸಮೀಪದಲ್ಲಿಯೇ ಇರುವ ಸುಮಾರು ೭ನೆಯ ಶತಮಾನದ ಈ ಶಾಸನ (ನಂ. ೨೪) ಭದ್ರಬಾಹು ಹಾಗೂ ಚಂದ್ರಗುಪ್ತ ಇವರೀರ್ವರನ್ನೂ ಹೆಸರಿಸುತ್ತದೆ. ಅವರಿಂದ 'ಭದ್ರಮಾಗಿದಧರ್ಮ', ಎಂದರೆ ಜೈನಧರ್ಮ, ನಂತರ ಸ್ವಲ್ಪ ಅಳುಕಿದಾಗ ಶಾನ್ತಿಸೇನಮುನಿ ಅದನ್ನು ಪುನಃ ಬಲಯುತವನ್ನಾಗಿ ಮಾಡಿದನೆಂದು ತಿಳಿಸುತ್ತದೆ.

ಇವುಗಳನ್ನು ಪರೀಕ್ಷಿಸಿದಾಗ ಭದ್ರಬಾಹು ಹಾಗೂ ಚಂದ್ರಗುಪ್ತರು ಶ್ರವಣಬೆಳಗೊಳದಲ್ಲಿನ ಚಿಕ್ಕಬೆಟ್ಟದ ಗುಹೆಯಲ್ಲಿ ವಾಸಿಸಿದ್ದು ಅಲ್ಲಿಯೇ ತಮ್ಮ ದೇಹವನ್ನು ತೊರೆದರೆಂಬ ನಂಬಿಕೆ ಸುಮಾರು ೭ನೆಯ ಶತಮಾನದ ವೇಳೆಗಾಗಲೇ ದೃಢವಾಗಿ ಬೇರೂರಿತ್ತು ಎಂಬುದು ಕಂಡುಬರುತ್ತದೆ. ಇವರಲ್ಲಿ ಚಂದ್ರಗುಪ್ತನು ಗುಪ್ತಿಗುಪ್ತನೆಂಬ ಫ್ಲೀಟ್‌ರವರ ಅಭಿಪ್ರಾಯವನ್ನು ಶ್ರೀ ನರಸಿಂಹಾಚಾರ್ಯರು ಒಪ್ಪಿಲ್ಲ. ಅದೇ ರೀತಿ ರೈಸ್‌ರವರು ಮೊದಲನೆಯ ಶಾಸನದ ೬ನೆಯ ಸಾಲಿನಲ್ಲಿ ಓದಿರುವ ಶಾಸನ ಪಾಠವನ್ನಾಗಲೀ, ಅದಕ್ಕೆ ಅವರು ಇತ್ತಿರುವ ಅರ್ಥ ವಿವರಣೆಯನ್ನಾಗಲೀ ಒಪ್ಪಿಲ್ಲ. ಫ್ಲೀಟ್‌ರವರ ಶಾಸನಪಾಠವನ್ನು ಒಪ್ಪಿದರೂ, ರೈಸ್‌ರವರು ಊಹಿಸಿದಂತೆ ಭದ್ರಬಾಹು ಹಾಗೂ ಚಂದ್ರಗುಪ್ತರು ಕ್ರಮವಾಗಿ ಶ್ರುತಕೇವಲಿ ಭದ್ರಬಾಹು ಮತ್ತು ಮೌರ್ಯ ಸಾಮ್ರಾಟನಾದ ಚಂದ್ರಗುಪ್ತರಾಗಿದ್ದರು ಎಂಬುದನ್ನು ಮಾನ್ಯಮಾಡಿದ್ದಾರೆ.

---

[1] *Epigraphia Indica*, Vol IV, pp. 22 ff

[2] *ibid*, p. 339

[3] p. 35–42

[4] *E.C.* III, Sr. 147, 148

ಆದರೆ ಇತ್ತೀಚೆಗೆ ಈ ವಿಷಯ ಪುನಃ ಚರ್ಚೆಗೀಡಾಗಿದೆ. ಶ್ರೀ ಹೀರಾಲಾಲ್ ಜೈನ್‌ರವರು ರೈಸ್‌ರವರು ಓದಿದಂತೆಯೇ ಶಾಸನ ಪಾಠವನ್ನು 'ಪ್ರಭಾಚಂದ್ರೇಣಾಮ'—ಎಂದು ಓದಬಹುದೆಂದು, ಆದರೆ ಅದನ್ನು ಪ್ರಭಾಚಂದ್ರೇಣ ನಾಮ' ಎಂದು ಕೆತ್ತುವ ಬದಲು 'ನ'ಕಾರವನ್ನು ಕೆತ್ತಲು ಮರೆತು ಅದರ ದೀರ್ಘಸೂಚಕ ಚಿಹ್ನೆಯನ್ನು ಮಾತ್ರ ಕೆತ್ತಿರುವುದರಿಂದ ಅದು 'ಪ್ರಭಾಚಂದ್ರೇಣಾಮ' ಎಂದು ಕೆತ್ತಲ್ಪಟ್ಟಿದೆ ಎಂದೂ, ಈ ಲಿಪಿಕಾರನ ತಪ್ಪನ್ನು ತಿದ್ದಿ 'ಪ್ರಭಾಚಂದ್ರೇಣನಾಮ' ಎಂದು ಶಾಸನ ಪಾಠವನ್ನು ಓದಿದಾಗ ಭದ್ರಬಾಹುವಿಗೆ ಪ್ರಭಾಚಂದ್ರನೆಂಬ ಹೆಸರಿನ ಶಿಷ್ಯನಿದ್ದನೆಂಬ, ಹಾಗೂ, ಅವನೊಡನೆ ಭದ್ರಬಾಹು ಕಟವಪ್ರದಲ್ಲಿಯೇ ಉಳಿದನೆಂಬ ವಿವರಣೆ ಕೊಡಲು ಸಾಧ್ಯವಾಗುತ್ತದೆಂದೂ, ಪ್ರಭಾಚಂದ್ರನೆಂಬುದು ಚಂದ್ರಗುಪ್ತನ ದೀಕ್ಷಾ ನಾಮವೆಂದು ಸ್ಪಷ್ಟವಾಗುತ್ತದೆಂದೂ ಹೇಳಿದ್ದಾರೆ.[1] ಆದರೆ ಶಾಸನದ ಪ್ರತಿಯನ್ನು ಎಚ್ಚರಿಕೆಯಿಂದ ಗಮನಿಸಿದಾಗ ರೈಸ್‌ರವರ 'ಪ್ರಭಾಚಂದ್ರೇಣಾಮ' ಎಂಬ ಶಾಸನ ಪಾಠ ಅಂಗೀಕಾರಾರ್ಹವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಶ್ರೀ ಯಂ. ಡಿ. ವಸಂತ್‌ರಾಜ್‌ರವರು ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸುತ್ತಾ, ಶ್ರುತಕೇವಲಿ ಭದ್ರಬಾಹುವಿನ ಸಮಕಾಲೀನನಾಗಿದ್ದವನು ನಂದವಂಶದ ಅರಸನಾದ ನಂದಚಂದ್ರಗುಪ್ತನೆಂದೂ, ಭದ್ರಬಾಹು ಎಂಬ ಹೆಸರಿನ ಇನ್ನೂ ಇಬ್ಬರು ಆಚಾರ್ಯರಿದ್ದರೆಂದೂ, ಅಷ್ಟಾಂಗಶ್ರುತಧರರಾದ ಭದ್ರಬಾಹುಗಳು ಎರಡನೆಯವರು ಮತ್ತು ಆಚಾರಾಂಗಶ್ರುತಧರರೆನಿಸಿದ ಅದೇ ಹೆಸರಿನ ಇನ್ನೊಬ್ಬ ಆಚಾರ್ಯರು ಮೂರನೆಯವರೆಂದೂ ಪ್ರತಿಪಾದಿಸಿದ್ದಾರೆ.[2] ತೃತೀಯ ಭದ್ರಬಾಹುಗಳ ಶಿಷ್ಯರು ಗುಪ್ತಿಗುಪ್ತರೆನಿಸಿದ ಅರ್ಹದ್ಬಲಿಗಳೆಂದೂ ಇವರು ವಾದಿಸಿದ್ದಾರೆ.

ಈ ವಾದವಿವಾದಗಳನ್ನೆಲ್ಲಾ ಕೂಲಂಕುಷವಾಗಿ ಪರಿಶೀಲಿಸಿದಾಗ ಒಂದು ಪ್ರಧಾನವಾದ ಅಂಶ ವ್ಯಕ್ತವಾಗುತ್ತದೆ. ಅದೆಂದರೆ ದಕ್ಷಿಣಭಾರತಕ್ಕೆ ಜೈನಧರ್ಮದ ಆಗಮನಕ್ಕೆ ಭದ್ರಬಾಹುಸ್ವಾಮಿಗಳು ಬಹುಮಟ್ಟಿಗೆ ಕಾರಣರೆಂಬುದು. ಈ ಭದ್ರಬಾಹುಗಳು ಶ್ರುತಕೇವಲಿಗಳೇ, ಅಷ್ಟಾಂಗಶ್ರುತಧರರೇ ಅಥವಾ ಆಚಾರಾಂಗಶ್ರುತಧರರೇ ಎಂಬುದನ್ನು ಕುರಿತ ವಾದವಿವಾದಗಳು ಇಲ್ಲಿ ಗೌಣ. ಇವುಗಳೆಲ್ಲಾ ಶತಮಾನಗಳ ನಂತರ ವಿರಚಿತವಾದ ದಿಗಂಬರ ಹಾಗೂ ಶ್ವೇತಾಂಬರ ಪಂಥಗಳ ಪಟ್ಟಾವಳಿಗಳನ್ನು ಆಧರಿಸಿ ಮುಂದಿಡಲ್ಪಟ್ಟ ವಾದಗಳು. ಖಚಿತವಾದ ಆಧಾರ ನಮಗೆ ಸಿಕ್ಕುವುದು ಶ್ರವಣಬೆಳಗೊಳದ ೧ನೆಯ ಶಾಸನ ಹಾಗೂ ಹೆಚ್ಚು ಸಮಕಾಲೀನವಾದ ಮೇಲೆ ಹೇಳಲ್ಪಟ್ಟ ಇತರ ಶಾಸನಗಳಿಂದ. ಮೊದಲನೆಯ ಶಾಸನದಲ್ಲಿ ಈ ವಿಷಯ ಸ್ಪಷ್ಟವಾಗಿ ಹೇಳದಿದ್ದರೂ ಶ್ರೀರಂಗಪಟ್ಟಣದ ಶಾಸನಗಳಲ್ಲೂ ಮತ್ತು ಶ್ರವಣಬೆಳಗೊಳದ ಇತರ ಶಾಸನಗಳಲ್ಲೂ ಈ ಭದ್ರಬಾಹು ಶ್ರುತಕೇವಲಿ ಭದ್ರಬಾಹುವಾಗಿದ್ದನೆಂದು ಹೇಳಿರುವುದನ್ನು ಗಮನಿಸಿದಲ್ಲಿ ಅದು ಹೆಚ್ಚು ಮನನೀಯವೆನಿಸುತ್ತದೆ. ದಕ್ಷಿಣಕ್ಕೆ ಬಂದ ಚಂದ್ರಗುಪ್ತನು ಮೌರ್ಯಚಂದ್ರಗುಪ್ತನೇ ಆಗಿರಬಹುದು. ಹೆಚ್ಚು ಪ್ರಮಾಣೀಭೂತವಾದ ಆಧಾರಗಳು ಲಭ್ಯವಾಗುವವರೆಗೆ, ಬಹುಕಾಲಾನಂತರದ ಪಟ್ಟಾವಳಿಗಳಲ್ಲಿನ ಐತಿಹ್ಯಗಳನ್ನು ಪ್ರಮಾಣಗಳೆಂದು ಸ್ವೀಕರಿಸುವುದು ಕಷ್ಟವಾಗುತ್ತದೆ.

ಗೊಮ್ಮಟ ಎಂಬ ಹೆಸರು

ಈ ಸಂಪುಟದಲ್ಲಿ ಪ್ರಕಟವಾಗಿರುವ ಶಾಸನಗಳಲ್ಲಿ ಗೊಮ್ಮಟ ಎಂಬ ಹೆಸರನ್ನು ದೊಡ್ಡಬೆಟ್ಟದಲ್ಲಿರುವ ಬೃಹನ್ಮೂರ್ತಿಗೆ ಮಾತ್ರವಲ್ಲದೆ ಅದನ್ನು ಪ್ರತಿಷ್ಠಾಪಿಸಿದ ಚಾಮುಂಡರಾಯನಿಗೂ ಬಳಸಲಾಗಿದೆ. ಈ 'ಗೊಮ್ಮಟ' ಪದದ ನಿಷ್ಪತ್ತಿಯ ಬಗೆಗೆ ವಿದ್ವಾಂಸರಲ್ಲಿ ಬಹಳಷ್ಟು ಜಿಜ್ಞಾಸೆ ನಡೆದಿದೆ. ಗೊಮ್ಮಟ ಎಂಬುದಕ್ಕೆ ಸುಂದರ, ಉತ್ತಮ ಅಥವಾ ಶ್ರೇಷ್ಠ ಎಂದು ಅರ್ಥ. ಈ ಪದ 'ಮನ್ಮಥ' ಎಂಬ ಪದದಿಂದ ನಿಷ್ಪನ್ನವಾಗಿದೆ ಎಂದು ಶ್ರೀ ಗೋವಿಂದ ಪೈಗಳು ಸೂಚಿಸುತ್ತಾರೆ. ಆದರೆ ಈ ಸೂಚನೆ ಅನುಮೋದಿತವಾಗಿಲ್ಲ. ನೇಮಿತೀರ್ಥಂಕರನ ಯಕ್ಷಿಯಾದ ಕೂಷ್ಮಾಂಡಿಯ ಕೃಪೆಯಿಂದ ಚಾಮುಂಡರಾಯನೇ ಗೊಮ್ಮಟ ಎಂದು ಪ್ರಸಿದ್ಧನಾದನೆಂದು ಊಹಿಸುವ ದಿವಂಗತ ಪ್ರೊ. ತೀ. ನಂ. ಶ್ರೀಕಂಠಯ್ಯನವರ ಸೂಚನೆಯೇ ಇತ್ತೀಚಿನದೆಂದು ತೋರುತ್ತದೆ. ಗುಮ್ಮಡಿ ಎಂಬುದು ಈ ಕೂಷ್ಮಾಂಡಿ ಎಂಬುದರ ಪ್ರಾಕೃತರೂಪ ಮತ್ತು ಗೊಮ್ಮಟ ಎಂಬುದು ಗುಮ್ಮಡಿಯಿಂದ ನಿಷ್ಪನ್ನವಾಗಿದೆ.[3] ಡಾ. ಆ. ನೇ. ಉಪಾಧ್ಯೆಯವರು ಗೊಮ್ಮಟ ಪದದ ನಿಷ್ಪತ್ತಿಯನ್ನು ಇನ್ನೂ ತೆರೆದ ಪ್ರಶ್ನೆಯಾಗಿಯೇ ಪರಿಗಣಿಸುವ ಮನೋಭಾವವನ್ನು ಹೊಂದಿದ್ದಾರೆ.[4] ಆದರೆ, ಇಲ್ಲಿ ನಮ್ಮ ಉದ್ದೇಶ ಗೊಮ್ಮಟ ಎಂಬ ಪದದ ನಿಷ್ಪತ್ತಿಯ ಬಗೆಗೆ

---

[1] ಜೈನ ಶಿಲಾಲೇಖ ಸಂಗ್ರಹ (ಹಿಂದಿ) ಸಂ. ೧, ಪೀಠಿಕೆ ಪು. ೬೩–೬೪

[2] ಸನ್ಮತಿ ಶ್ರೀವಿಹಾರ (೧೯೭೧).

[3] ಸಮಾಲೋಕನ, ಕನ್ನಡ ಪ್ರಬಂಧಗಳ ಒಂದು ಸಂಪುಟ, ತೀ. ನಂ. ಶ್ರೀಕಂಠಯ್ಯ, ಮೈಸೂರು (೧೯೫೮), ಪು. ೨೫೬

[4] ಆದೇ ಪು. ೨೬೩

ಚರ್ಚಿಸುವುದಲ್ಲ. ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತೆ ಆ ಪದದ ಅರ್ಥ ಸುಂದರ ಎಂಬುದನ್ನು ತಿಳಿಸುವುದು. ಜಿನಸೇನಾಚಾರ್ಯನ ಪೂರ್ವಪುರಾಣ ಮತ್ತು ಪಂಪನ ಆದಿಪುರಾಣಗಳಂಥ ಸಾಹಿತ್ಯ ಗ್ರಂಥಗಳಲ್ಲಿ ಸಹ ಬಾಹುಬಲಿಯನ್ನು ಮನ್ಮಥನೆಂದು ವರ್ಣಿಸಲಾಗಿದೆ. ಚಾವುಂಡರಾಯಪುರಾಣದಲ್ಲಿ ಆ ಕಾಲದಲ್ಲಿ ಬಾಹುಬಲಿಕುಮಾರನನ್ನು ಕಾಮದೇವನೆಂದು ಕರೆಯಲಾಗುತ್ತಿತ್ತೆಂದು ತಿಳಿಸಲಾಗಿದೆ.

ಈ ಕೊನೆಯ ಹೇಳಿಕೆ ಕುತೂಹಲಕರವಾದುದು ; ಏಕೆಂದರೆ ಈಚೆಗೆ ಕಂಡುಹಿಡಿಯಲಾದ ಕದಂಬ ದೊರೆ ರವಿವರ್ಮನ (ಸು. ಕ್ರಿ. ಶ. ೪೮೫–೫೧೯) ಗುಡ್ನಾಪುರದ ಶಾಸನವು ಅವನಿಂದ ನಿರ್ಮಿತವಾದ ಕಾಮಜಿನಾಲಯವೊಂದರ ಬಗೆಗೆ ಉಲ್ಲೇಖಿಸುತ್ತದೆ. ಇದನ್ನು ಮನ್ಮಥನ ವಾಸಸ್ಥಾನವೆಂದು ಸಹ ವರ್ಣಿಸಲಾಗಿದೆ. ಇದು ಬಾಹುಬಲಿಗಾಗಿ ನಿರ್ಮಿತವಾದ ದೇವಾಲಯವೇ ಹೊರತು ಬೇರೆಯಲ್ಲ ಎಂಬುದಾಗಿ ನಾನು ಬೇರೆಡೆ ಸೂಚಿಸಿದ್ದೇನೆ.[1] ಶ್ರವಣಬೆಳಗೊಳದಲ್ಲಿ ಚಾಮುಂಡರಾಯನಿಂದ ನಿರ್ಮಿತವಾದ ಬಾಹುಬಲಿ ದೇವಾಲಯವೇ ಇದುವರೆಗೆ ತಿಳಿದುಬಂದಿರುವ ಅತಿಪ್ರಾಚೀನ ಬಾಹುಬಲಿ ಜಿನಾಲಯ. ಈ ಶಾಸನದ 'ಮನ್ಮಥ'ನನ್ನು 'ಬಾಹುಬಲಿ' ಅಥವಾ 'ಗೊಮ್ಮಟ' ನೊಂದಿಗೆ ಸಮೀಕರಿಸುವುದಾದಲ್ಲಿ ಬಾಹುಬಲಿಯಾರಾಧನೆಯನ್ನು 6ನೆಯ ಶತಮಾನದಷ್ಟು ಹಿಂದಕ್ಕೆ ಒಯ್ಯಬಹುದಷ್ಟೆ ಅಲ್ಲ, ಮನ್ಮಥ ಎಂಬುದು ಮೂಲಶಬ್ದವಾಗಿದ್ದು ಪ್ರಾಯಶಃ ಅದರಿಂದ ಗೊಮ್ಮಟ ಎಂಬುದು ನಿಷ್ಪನ್ನವಾಗಿರಬಹುದೆಂದು ಸೂಚಿಸಬಹುದು. ಚಾಮುಂಡರಾಯನು ಈ ಬೃಹದ್ ಮೂರ್ತಿಯನ್ನು ನಿಲ್ಲಿಸಿದುದರಿಂದ ಅವನಿಗೂ ಗೊಮ್ಮಟ ಅಥವಾ ಗೊಮ್ಮಟರಾಯನೆಂಬ ಹೆಸರು ಬಂತು. ಆದ್ದರಿಂದ ಈ ಮೊದಲೇ ಡಾ. ಉಪಾಧ್ಯೆಯವರು ಸಂದೇಹಿಸಿರುವಂತೆ ಗೊಮ್ಮಟ ಎಂಬ ಶಬ್ದವನ್ನು ಕೂಷ್ಮಾಂಡಿನಿಯೊಂದಿಗೆ ಹೊಂದಿಸುವುದು ಕಷ್ಟವಾಗುತ್ತದೆ. ಗೊಮ್ಮಟ ಎಂಬ ಶಬ್ದವನ್ನು, ಅದರ ನಿಷ್ಪತ್ತಿಯ ಪ್ರಶ್ನೆಯೊಂದನ್ನು ಪ್ರತ್ಯೇಕವಾಗಿ ಬಿಟ್ಟು, ಮನ್ಮಥ ಎಂಬ ಶಬ್ದದೊಂದಿಗೆ ಹೊಂದಿಸುವುದು ಹೆಚ್ಚು ಸಮಂಜಸವೆನಿಸುತ್ತದೆ.

ಜೈನಯತಿಗಳು

ಈ ಸಂಪುಟದಲ್ಲಿ ಹೆಚ್ಚಿನವು ನಿಶಿಧಿ ಶಾಸನಗಳು ಮತ್ತು ಅವುಗಳಲ್ಲಿ ಅನೇಕವು ಜೈನಯತಿಗಳಿಗೆ ಸಂಬಂಧಿಸಿದವು. ಅವುಗಳಲ್ಲಿ ಕೆಲವು ಜೈನಗುರುಪರಂಪರೆಯ ವೃತ್ತಾಂತವನ್ನು ನೀಡುತ್ತವೆ. ಈ ದಾಖಲೆಗಳು ಆಳುವ ಅರಸರಿಗೆ ಮತ್ತು ಪ್ರಮುಖರಿಗೆ ಸಂಬಂಧಿಸಿದಂತೆ ಗತಕಾಲದ ಕೆಲವು ಘಟನೆಗಳನ್ನು ಉಲ್ಲೇಖಿಸುತ್ತಾ ಅವರು ಜೈನಮತಾನುಯಾಯಿಗಳಾಗಿದ್ದರೆಂಬುದನ್ನು ಸೂಚಿಸುತ್ತವೆ. ಇವು ತಮ್ಮ ಕೃತಿಗಳ ಮೂಲಕ ಪ್ರಸಿದ್ಧರಾದ ಅನೇಕ ಆಚಾರ್ಯರನ್ನು ಉಲ್ಲೇಖಿಸುತ್ತವೆಯಲ್ಲದೆ, ಬೇರಾವ ಮೂಲಗಳಿಂದಲೂ ನಮಗೆ ತಿಳಿದು ಬಾರದ ಜೈನಯತಿಗಳ ಅನೇಕ ಸಾಹಿತ್ಯಗ್ರಂಥಗಳ ಬಗೆಗೂ ಬೆಳಕು ಚೆಲ್ಲುತ್ತವೆ.

ದಕ್ಷಿಣ ಭಾರತದಲ್ಲಿ ಜೈನಮತದ ಪ್ರಸರಣಕಾರ್ಯದಲ್ಲಿ ಮಹತ್ತ್ವದ ಪಾತ್ರವಹಿಸಿದ ಕೊಂಡಕುಂದಾಚಾರ್ಯನು ಈ ಜೈನ ಆಚಾರ್ಯರಲ್ಲಿ ಅತಿ ಮುಖ್ಯನಾದವನು. ಈ ಆಚಾರ್ಯನು ಪ್ರಸಕ್ತ ಸಂಪುಟದ ಅನೇಕ ಶಾಸನಗಳಲ್ಲಿ ಕಂಡುಬರುತ್ತಾನೆ. ಇವನು ಅನೇಕ ಜೈನಗ್ರಂಥಗಳ ಕರ್ತೃವೆಂಬುದಾಗಿ ತಿಳಿದುಬರುತ್ತದೆ. ಪದ್ಮನಂದಿ ಎಂಬುದು ಅವನ ನಿಜನಾಮಧೇಯವಾಗಿದ್ದು ಅವನಿಗೆ ಸಾಂಪ್ರದಾಯಿಕವಾಗಿ ನೀಡಲಾಗಿರುವ ಹಲವು ಹೆಸರುಗಳಲ್ಲಿ ಕೊಂಡಕುಂದ ಎಂಬುದೂ ಒಂದಾಗಿರಬೇಕೆಂದು ತೋರುತ್ತದೆ. ಗೃಧ್ರಪಿಚ್ಛ ಎಂಬ ಹೆಸರು ಕೊಂಡಕುಂದನ ಇತರ ಹೆಸರುಗಳಲ್ಲಿ ಒಂದೆಂಬುದನ್ನು ಗಮನಿಸಬಹುದು. ವಕ್ರಗ್ರೀವ ಮತ್ತು ಏಲಾಚಾರ್ಯ ಎಂಬ ಇನ್ನೆರಡು ಹೆಸರುಗಳೂ ಈತನಿಗೆ ಇವೆ. ಈ ಎರಡು ಹೆಸರುಗಳು ಶಾಸನಗಳಲ್ಲಿ ಕಾಣಿಸಿಕೊಂಡರೂ ಅವು ಕೊಂಡಕುಂದ ಎಂಬುದರ ಪರ್ಯಾಯನಾಮಗಳೆಂಬುದನ್ನು ಸೂಚಿಸುವುದಿಲ್ಲ. ಆದರೆ ಗೃಧ್ರಪಿಚ್ಛ ಎಂಬ ಹೆಸರಿನ ಬಗ್ಗೆ ಸ್ವಲ್ಪ ಗೊಂದಲವಿದೆ. ಈ ಯತಿಯ ಪ್ರವಚನಸಾರ ಎಂಬ ಗ್ರಂಥವನ್ನು ಸಂಪಾದಿಸಿದ ಸಂದರ್ಭದಲ್ಲಿ ತಮ್ಮ ಪೀಠಿಕೆಯಲ್ಲಿ ಈ ಅಂಶವನ್ನು ಡಾ. ಆ. ನೇ. ಉಪಾಧ್ಯೆಯವರು ವಿಶದವಾಗಿ ಚರ್ಚಿಸಿದ್ದಾರೆ.[2]

ಕ್ರಮವಾಗಿ ಕ್ರಿ. ಶ. ೧೧೧೫, ೧೧೨೩, ೧೧೪೫, ೧೧೬೩ ಮತ್ತು ೧೧೭೬ನೆಯ ವರ್ಷಗಳ ೧೫೬, ೧೩೫, ೧೭೩, ೭೧ ಹಾಗೂ ೭೩ನೆಯ ಶಾಸನಗಳ ಆರಂಭದಲ್ಲಿ ಕೊಂಡಕುಂದನೆಂಬ ಉಪನಾಮವುಳ್ಳ ಪದ್ಮನಂದಿಯನ್ನೂ, ಆ ನಂತರ ಗೃಧ್ರಪಿಚ್ಛನೆಂಬ ಉಪನಾಮವುಳ್ಳ ಉಮಾಸ್ವಾತಿಯನ್ನೂ ಉಲ್ಲೇಖಿಸುವ ಎರಡು ಶ್ಲೋಕಗಳಿವೆ. ಆ ಶ್ಲೋಕಗಳು ಇಂತಿವೆ :

---

[1] *Śrīkaṇṭhikā*, Dr. S. Srikantha Sastry Felicitation Volume, pp. 61 ff,

[2] ಪು. ii–v

ತತ್ಸಂತತೌ ನನ್ದಿಗಣೇ ಬಭೂವ ‖
ಶ್ರೀ ಪದ್ಮನಂದೀತ್ಯನವದ್ಯನಾಮಾಹ್ಯಾಚಾರ್ಯ್ಯಶಬ್ದೋತ್ತರ ಕೊಂಡಕುಂದಃ ‖
ದ್ವಿತೀಯಮಾಸೀದಭಿಧಾನಮುದ್ಯಚ್ಚರಿತ್ರಸಂಜಾತಸುಚಾರಣರ್ದ್ಧಿಃ ‖
ಅಭೂದುಮಾಸ್ವಾತಿ ಮುನೀಶ್ವರೋಽಸಾವಾಚಾರ್ಯ್ಯ ಶಬ್ದೋತ್ತರ ಗೃದ್ಧ್ರಪಿಂಛಃ
ತದನ್ವಯೇ ತತ್ಸದೃಶೋಽಸ್ತಿ ನಾನ್ಯಸ್ತಾತ್ಕಾಳಿಕಾಶೇಷ ಪದಾರ್ಥವೇದೀ ‖

(ಶಾಸನ ೧೫೬).

ಶ್ರೀ ಆರ್. ನರಸಿಂಹಾಚಾರ್ಯರು ಕೊಂಡಕುಂದಾಚಾರ್ಯ, ಉಮಾಸ್ವಾತಿಮುನೀಶ್ವರ ಮತ್ತು ಗೃಧ್ರಪಿಂಛಾಚಾರ್ಯ ಎಂಬ ಹೆಸರುಗಳಿಂದ ಪದ್ಮನಂದಿಯು ಪ್ರಸಿದ್ಧನಾದನೆಂದು ಈ ಶ್ಲೋಕಗಳನ್ನು ಭಾಷಾಂತರಿಸಿದ್ದಾರೆ. ಆದರೆ ತಮ್ಮ ಪೀಠಿಕೆಯಲ್ಲಿ ಜೈನಗುರುಪರಂಪರೆಯನ್ನು ಕುರಿತು ಚರ್ಚಿಸುವಾಗ ಕೊಟ್ಟಿರುವ ವಂಶಾವಳಿಯಲ್ಲಿ ಗೃಧ್ರಪಿಚ್ಛನೆಂಬ ಉಪನಾಮವುಳ್ಳ ಉಮಾಸ್ವಾತಿ ಮತ್ತು ಕೊಂಡಕುಂದನೆಂಬ ಉಪನಾಮವುಳ್ಳ ಪದ್ಮನಂದಿ ಇವರು ಭಿನ್ನರು, ಹಾಗೂ ಉಮಾಸ್ವಾತಿಯು ಕೊಂಡಕುಂದರ ಸಂತತಿಗೆ ಸೇರಿದವನು ಎಂದು ಸೂಚಿಸಿದ್ದಾರೆ.[1] ಈ ಅಸಂಗತ ಏಕೆ ಉಂಟಾಯಿತೆಂಬುದು ತಿಳಿಯದು. ಕ್ರಿ. ಶ. ೧೩೯೮ರ ೩೬೦ನೆಯ ಶಾಸನದಲ್ಲಿ ಕೊಂಡಕುಂದನೇ ತತ್ವಾರ್ಥಸೂತ್ರದ ಕರ್ತೃವಾದ ಉಮಾಸ್ವಾತಿಯೆಂದು ಹೇಳಿದ್ದರೆ, ಕ್ರಿ. ಶ. ೧೪೩೨ನೆಯ ವರ್ಷದ ೩೬೪ನೆಯ ಶಾಸನದಲ್ಲಿ ಕೊಂಡಕುಂದ ಮತ್ತು ಉಮಾಸ್ವಾತಿ ಬೇರೆಬೇರೆಯವರೆಂದೂ ಉಮಾಸ್ವಾತಿಯು ಕೊಂಡಕುಂದನ ಸಂತತಿಯಲ್ಲಿ ಬಂದವನೆಂದೂ ಹೇಳಲಾಗಿದೆ ಶಾಸನದ ಈ ಭಾಗವನ್ನು ಭಾಷಾಂತರಿಸುವಾಗ ನರಸಿಂಹಾಚಾರ್ಯರು ಸಂಖ್ಯೆ ೬೪ ಮುಂತಾದ ಇತರ ಶಾಸನಗಳಲ್ಲಿ ಅವನು ಕೊಂಡಕುಂದನಿಂದ ಅನನ್ಯವೆನ್ನಲಾಗಿದೆ'' ಎಂಬ ಒಂದು ಅಡಿ ಟಿಪ್ಪಣಿಯನ್ನು ಕೊಟ್ಟಿರುವುದು ಸ್ವಾರಸ್ಯವಾದ ಸಂಗತಿಯಾಗಿದೆ.[2]

ಈ ಎಲ್ಲ ಅಂಶಗಳಿಂದ ಕೊಂಡಕುಂದಾಚಾರ್ಯನಿಗೆ ಪದ್ಮನಂದಿ, ಉಮಾಸ್ವಾತಿ ಮತ್ತು ಗೃಧ್ರಪಿಚ್ಛ ಎಂಬ ಇನ್ನೂ ಮೂರು ಹೆಸರುಗಳಿದ್ದುವೆಂದು ಐದು ಶಾಸನಗಳಲ್ಲಿ ಹೇಳಿದ್ದರೆ, ಒಂದು ಶಾಸನದಲ್ಲಿ ಪದ್ಮನಂದಿ ಮತ್ತು ಗೃಧ್ರಪಿಚ್ಛರೆಂಬ ಎರಡೂ ಹೆಸರುಗಳು ಕಂಡುಬರುವುದಿಲ್ಲ ಹಾಗೂ ಮತ್ತೊಂದರಲ್ಲಿ ಕೊಂಡಕುಂದನು ಗೃಧ್ರಪಿಚ್ಛನೆಂಬ ಹೆಸರನ್ನು ಹೊಂದಿದ್ದ ಉಮಾಸ್ವಾತಿಯಿಂದ ಬೇರೆಯವನೆಂದು ಪರಿಗಣಿಸಲ್ಪಟ್ಟಿದ್ದಾನೆಂಬುದು ಸ್ಪಷ್ಟಪಡುತ್ತದೆ.

ಕೊಂಡಕುಂದನಿಗೆ ಇತರ ಹೆಸರುಗಳೊಂದಿಗೆ ಗೃಧ್ರಪಿಚ್ಛ ಎಂಬ ಹೆಸರನ್ನೂ ಅನ್ವಯಿಸುವ ಸಾಂಪ್ರದಾಯಿಕ ಆಕರಗಳನ್ನು ಡಾ. ಉಪಾಧ್ಯೆಯವರು ಗಮನಿಸಿದ್ದಾರೆ. ಈ ಎರಡು ಹೆಸರುಗಳನ್ನೂ ಒಬ್ಬ ವ್ಯಕ್ತಿಗೆ ಅನ್ವಯಿಸುವ ಕ್ರಿ. ಶ. ೧೩೮೬ರ ಶಾಸನವೊಂದರ[3] ಹೇಳಿಕೆಯನ್ನು ಅವರು ಗಣನೆಗೆ ತೆಗೆದುಕೊಂಡಿದ್ದಾರೆ. ಪದ್ಮನಂದಿ ಎಂಬುದು ಕೊಂಡಕುಂದನ ಮೂಲ ನಾಮಧೇಯವೆಂಬುದು ಅನುಮೋದಿತವಾಗಿರುವ ಸಂಗತಿ. ಅಂತೆಯೇ ''ಗೃಧ್ರಪಿಚ್ಛ ಎಂಬುದು ಉಮಾಸ್ವಾತಿಯ ಹೆಸರಾಗಿತ್ತೆಂಬುದರಲ್ಲೂ ಸಂದೇಹವಿಲ್ಲವೆನ್ನಬಹುದು. ಸರಿಯಾದ ಅರಿವಿನ ಕೊರತೆ ಅಥವಾ ತಪ್ಪು ಅಭಿಪ್ರಾಯಗಳಿಂದಾಗಿ ಕುಂಡಕುಂದನಿಗೆ ಗೃಧ್ರಪಿಚ್ಛನೆಂಬ ಹೆಸರಿದ್ದಿತೆಂಬ ಸಂಪ್ರದಾಯವು ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಿಂದ ಪ್ರಚಲಿತವಾಗಿರಬೇಕೆಂದು ತೋರುತ್ತದೆ. ಪ್ರಾಚೀನ ಶಾಸನಾಧಾರಗಳು ಈ ಸಂಪ್ರದಾಯಕ್ಕೆ ವಿರುದ್ಧವಾಗಿವೆ''[4] ಎಂದು ಅವರು ನಿರ್ಣಯಿಸುತ್ತಾರೆ. ಆದರೆ, ಇದಕ್ಕೂ ಪ್ರಾಚೀನವಾದ ಹನ್ನೆರಡನೆಯ ಶತಮಾನದ ದಾಖಲೆಗಳಲ್ಲಿ ಉಲ್ಲೇಖವಾಗಿರುವ, ಮೇಲೆ ಗಮನಿಸಿದ, ಎರಡು ಶ್ಲೋಕಗಳನ್ನು ನಾವು ಗಣನೆಗೆ ತೆಗೆದುಕೊಂಡಲ್ಲಿ ಮತ್ತು ಅವುಗಳಿಗೆ ಕೊಟ್ಟಿರುವ ಭಾಷಾಂತರಗಳನ್ನು ಒಪ್ಪಿಕೊಂಡಲ್ಲಿ ಆಗ ಸಂಪ್ರದಾಯವು ಶಾಸನಾಧಾರಗಳಿಂದ ದೃಢಗೊಳ್ಳುತ್ತದೆಯೆಂಬುದನ್ನು ಕಾಣುತ್ತೇವೆ. ಸಂದರ್ಭೋಚಿತವಾಗಿ ಅರ್ಥೈಸಬಹುದಾದ ಸಂಸ್ಕೃತ ಭಾಷೆಯ ವಾಕ್ಯಸರಣಿಯಿಂದಾಗಿ ಕೊಂಡಕುಂದ ಮತ್ತು ಉಮಾಸ್ವಾತಿಯರು ಬೇರೆಬೇರೆಯವರೆಂಬ ಅರ್ಥ ಬರುವಂತೆ, ಭಿನ್ನ ರೀತಿಯಲ್ಲಿ ಈ ಎರಡು ಶ್ಲೋಕಗಳನ್ನು ಭಾಷಾಂತರಿಸಲೂ ಸಾಧ್ಯವೆಂದು ಹೇಳಬಹುದು. ಆದರೆ ತಾವೇ ನೀಡಿದ ಈ ಭಾಷಾಂತರವನ್ನು ಸ್ವತಃ ಭಾಷಾಂತರಕಾರರು ಹಾಗೂ ಇತರ ವಿದ್ವಾಂಸರು ಸಹ ಉಪೇಕ್ಷಿಸಿರುವುದು ಆಶ್ಚರ್ಯದ ಸಂಗತಿ. ಪ್ರಸ್ತುತ ಆವೃತ್ತಿಯಲ್ಲಿ ನಾವು ಮೂಲ ಭಾಷಾಂತರವನ್ನೇ ಉಳಿಸಿಕೊಂಡಿದ್ದೇವೆ.

ಈ ಮಹಾ ಆಚಾರ್ಯನ ಮೂಲಸ್ಥಳದ ಬಗೆಗೆ ಹೇಳುವುದಾದರೆ ಇವನು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಗುತ್ತಿ ತಾಲ್ಲೂಕಿನ ಕೊನಕೊಂಡ್ಲದಿಂದ ಬಂದವನೆಂಬುದನ್ನು ಡಾ. ದೇಸಾಯಿಯವರು ನಿರ್ಣಯಾತ್ಮಕವಾಗಿ ತೋರಿಸಿಕೊಟ್ಟಿದ್ದಾರೆ.

---

1 Introduction, p. 81

2 ದ್ವಿತೀಯ ಆವೃತ್ತಿ—ಭಾಷಾಂತರ, ಪು. ೧೧೭; ಅಡಿ ಟಿಪ್ಪಣಿ ೧

3 ಪ್ರವಚನಸಾರ, ಪೀಠಿಕೆ, ಪು. i

4 ಅದೇ, ಪು. v

ಈ ಸ್ಥಳವು ಮೂಲತಃ ಕೊಂಡಕುಂದ ಅಥವಾ ಕೊಂಡಕುಂದೆ ಎಂಬ ಅಚ್ಚಕನ್ನಡ ಹೆಸರಿನಿಂದ ಪರಿಚಿತವಾಗಿದ್ದಿತು. ಇಲ್ಲಿ ದೊರೆತಿರುವ ಶಾಸನವೊಂದರಲ್ಲಿ ಇದು ಪ್ರಖ್ಯಾತನಾದ ಆಚಾರ್ಯ ಪದ್ಮನಂದಿಭಟ್ಟಾರಕನ ಜನ್ಮಸ್ಥಳವಾಗಿತ್ತೆಂದು ಹೇಳಿದೆ. ಮೇಲೆ ಗಮನಿಸಿದಂತೆ ಈ ಪದ್ಮನಂದಿಭಟ್ಟಾರಕನು ಕೊಂಡಕುಂದಾಚಾರ್ಯನೇ ವಿನಹ ಬೇರೆಯಲ್ಲ. ಡಾ. ದೇಸಾಯಿಯವರು ಈ ಅಂಶವನ್ನು ಸಮರ್ಥಿಸಲು ಇತರ ಆಧಾರಗಳನ್ನೂ ಮುಂದಿಟ್ಟಿದ್ದಾರೆ.[1]

ಈ ಆಚಾರ್ಯನ ಕಾಲ ಯಾವುದು ? ಈ ಸಮಸ್ಯೆಯನ್ನು ಡಾ. ಉಪಾಧ್ಯೆಯವರು ವಿಶದವಾಗಿ ಚರ್ಚಿಸಿ ಕುಂದಕುಂದನ ಕಾಲ ಕ್ರಿಸ್ತಶಕಾರಂಭದ ವರ್ಷಗಳಾಗಿದ್ದಿರಬೇಕೆಂದು ಸೂಚಿಸಿದ್ದಾರೆ. ಈ ಅಭಿಪ್ರಾಯಕ್ಕೆ ವಿರುದ್ಧವಾಗಿ ನಾವು ಏನನ್ನೂ ಹೇಳದಿದ್ದರೂ ಇದಕ್ಕೆ ಚಿಕ್ಕದೊಂದು ಆಕ್ಷೇಪಣೆಯನ್ನು ಮಾತ್ರ ಇಲ್ಲಿ ಸೂಚಿಸಬಯಸುತ್ತೇವೆ. ಶಕ ೩೮೮ರ ಮಡಿಕೇರಿ ತಾಮ್ರಶಾಸನವು ಕುಂದಕುಂದಾನ್ವಯವನ್ನು ಉಲ್ಲೇಖಿಸುವುದರಿಂದ ಆತನ ಕಾಲದ ಈಚಿನ ಮಿತಿಯು ಕ್ರಿ. ಶ. ೨ನೆಯ ಶತಮಾನದ ಮಧ್ಯಭಾಗವಾಗಿರುವುದೆಂದೂ, ಕ್ರಿ. ಶ. ೩ನೆಯ ಶತಮಾನದ ಮಧ್ಯಭಾಗದಿಂದ ಈಚೆಗೆ ಆ ಕಾಲವನ್ನು ದೂಡುವುದು ಅಸಾಧ್ಯವಾಗುವುದೆಂದೂ ಅಭಿಪ್ರಾಯಪಡುತ್ತಾರೆ.[2] ಆದರೆ ಮಡಿಕೇರಿ ತಾಮ್ರಶಾಸನವು ನೈಜವಲ್ಲವೆಂಬುದನ್ನು ಮತ್ತು ಅದು ಸು. ಕ್ರಿ. ಶ. ೯ನೆಯ ಶತಮಾನಕ್ಕೆ ಸೇರುತ್ತದೆಂಬುದನ್ನು ತೋರಿಸಿಕೊಟ್ಟಿದ್ದೇವೆ.[3] ಆದ್ದರಿಂದ ಈ ವಿಷಯದ ಮಟ್ಟಿಗೆ ಮಡಿಕೇರಿ ತಾಮ್ರಶಾಸನದಲ್ಲಿ ಉಕ್ತವಾದ ಕಾಲವನ್ನು ಅವಲಂಬಿಸುವುದು ಅಷ್ಟು ಸಮಂಜಸವಾಗದು.

ಕಟವಪ್ರ ಸಾಕಷ್ಟು ಪ್ರಖ್ಯಾತವಾಗಿದ್ದಿತು. ಸಮೀಪದ ಮತ್ತು ದೂರದ ಪ್ರದೇಶಗಳಿಂದ ಅನೇಕ ಜೈನಯತಿಗಳು ಮತ್ತು ಲೌಕಿಕ ಶಿಷ್ಯರು ಸಹ ತಮ್ಮ ಜೀವನದ ಕೊನೆಯ ದಿನಗಳನ್ನು ಕಳೆಯಲು ಈ ಕ್ಷೇತ್ರಕ್ಕೆ ಬರುತ್ತಿದ್ದರು. ಮಹಾ ಆಚಾರ್ಯನಾದ ಅರಿಷ್ಟನೇಮಿಯು ತನ್ನ ಅನೇಕ ಶಿಷ್ಯರೊಡಗೂಡಿ ದಕ್ಷಿಣಕ್ಕೆ ಬಂದು ಇಲ್ಲಿ ಸಿದ್ಧಿ ಪಡೆದುದನ್ನು ೧೩ನೆಯ ಶಾಸನವು ಉಲ್ಲೇಖಿಸುತ್ತದೆ. ೧೬ನೆಯ ಶಾಸನದಲ್ಲಿ ಉಲ್ಲೇಖಿಸಲಾಗಿರುವ ಅರಿಷ್ಟನೇಮಿದೇವನು ಮೇಲೆ ಹೇಳಿದ ಅರಿಷ್ಟನೇಮಿಯಿಂದ ಭಿನ್ನನು. ಏಕೆಂದರೆ ೧೩ನೆಯ ಶಾಸನವು ಸು. ೭ನೆಯ ಶತಮಾನಕ್ಕೆ ಸೇರಿದರೆ, ಇದು ೮ನೆಯ ಶತಮಾನದ್ದಾಗಿದೆ. ೯ನೆಯ ಶತಮಾನದ ೬೭ನೆಯ ಶಾಸನದಲ್ಲಿ ಮತ್ತೊಬ್ಬ ಅರಿಷ್ಟನೇಮಿದೇವನು ಕಂಡುಬರುತ್ತಾನೆ. ಈ ಶಾಸನದಲ್ಲಿ ಅವನು ಯಾವುದನ್ನೊ ಮಾಡಿಸಿದನೆಂದು ಹೇಳಿದೆ. ಚಿಕ್ಕಬೆಟ್ಟದಲ್ಲಿ ಅಪೂರ್ಣಸ್ಥಿತಿಯಲ್ಲಿರುವ ಭರತೇಶ್ವರಮೂರ್ತಿಯ ಶಿಲ್ಪಿ ಪ್ರಾಯಶಃ ಇವನಾಗಿರಬಹುದೆಂಬ ಸೂಚನೆಯನ್ನು ಶ್ರೀ ನರಸಿಂಹಾಚಾರ್ಯರು ತಳ್ಳಿಹಾಕಿದ್ದಾರೆ.[4] ಲಿಪಿಸ್ವರೂಪದ ಆಧಾರದ ಮೇಲೆ ಈ ಶಾಸನವು ೯ನೆಯ ಶತಮಾನದ್ದೆಂದು ಹೇಳಬಹುದು. ಆದರೆ ಭರತೇಶ್ವರನ ಈ ವಿಗ್ರಹವು ಗೊಮ್ಮಟೇಶ್ವರನ ಕಾಲಕ್ಕಿಂತಲೂ ಈಚಿನದ್ದಾಗಿದೆ.

ನಾಗಮತಿಗಂತಿ ಎಂಬ ಜೈನಸನ್ಯಾಸಿನಿಯು ಅದೆಯರೆನಾಡಿನ ಚಿತ್ತೂರ ಮೋನಿಗುರವಡಿಗಳ ಶಿಷ್ಯೆ ಎಂದು ೨೩ನೆಯ ಶಾಸನದಲ್ಲಿ ಹೇಳಿದೆ. ಪಲ್ಲವ ಇಮ್ಮಡಿ ನಂದಿವರ್ಮನ ಉದಯೇಂದಿರಮ್ ತಾಮ್ರಶಾಸನದಲ್ಲಿ ಉಕ್ತವಾದ ಅಡೆಯುರ ರಾಷ್ಟ್ರವೇ ಈ ಅದೆಯರೆನಾಡು ಎಂದು ಗುರುತಿಸಲಾಗಿದೆ.[5] ಉತ್ತರ ಆರ್ಕಾಟು ಜಿಲ್ಲೆಯಲ್ಲಿ ವೆಲ್ಲೂರಿಗೆ ಸಮೀಪದಲ್ಲಿರುವ ಉದಯೇಂದಿರಮ್‌ನ ಸುತ್ತಲಿನ ಆಶ್ರಯನದೀವಿಷಯವೆಂದು ಕರೆಯಲಾದ ಪ್ರದೇಶವೇ ಈ ಅಡೆಯುರ ರಾಷ್ಟ್ರ. ಅದೇ ಗ್ರಾಮದಲ್ಲಿ ದೊರೆತ ಗಂಗ ಇಮ್ಮಡಿ ಪೃಥ್ವೀಪತಿಯ ತಾಮ್ರಶಾಸನದಲ್ಲಿ ಚೋಳಪರಾಂತಕ (I)ನ ಆಳಿಕೆಯ ೧೫ನೆಯ ವರ್ಷದ ತಮಿಳುಭಾಷೆಯಲ್ಲಿನ ಶಾಸನಭಾಗದಲ್ಲಿ ಅಡೆಯನ್ನಾಡಿನ ಉಲ್ಲೇಖವಿದೆ.[6] ಉದಯೇಂದಿರಮ್ ಗ್ರಾಮದಲ್ಲಿ ಮಾಡಿದ ಭೂಮಿದಾನದಲ್ಲಿ ಆ ಮೊದಲೇ ಜೈನಯತಿಗಳಿಗೆ ಬಿಡಲಾಗಿದ್ದ ಎರಡು 'ಪಟ್ಟಿ'ಗಳನ್ನು ಹೊರತುಪಡಿಸಲಾಗಿದೆ. ಎಂದು ಹೇಳಿದೆ. ಇದು ಅಂದು ಈ ಗ್ರಾಮಪ್ರದೇಶ ಜೈನರ ಮುಖ್ಯ ಬೀಡುಗಳಲ್ಲೊಂದಾಗಿತ್ತೆಂಬುದನ್ನು ಸೂಚಿಸುತ್ತದೆ. ನಮ್ಮ ಸಂಪುಟದ ೯೪ನೆಯ ಶಾಸನದಲ್ಲಿ ನದೀರಾಷ್ಟ್ರದ ಉಲ್ಲೇಖವಿದ್ದಂತಿದೆ. ಇದು ಗಮನಾರ್ಹ. ಮೇಲೆ ಹೇಳಲಾದ ನದೀವಿಷಯವೇ ಈ ನದೀರಾಷ್ಟ್ರವಾಗಿರಬಹುದು. ಚಂದ್ರದೇವಾಚಾರ್ಯನು ಈ ಪ್ರದೇಶದಿಂದ ಬಂದಿರಬಹುದು.

ದಕ್ಷಿಣದ ಮಧುರೆಯಿಂದ ಬಂದ, ಹಾವಿನಿಂದ ಕಚ್ಚಲ್ಪಟ್ಟ, ಅಕ್ಷಯಕೀರ್ತಿಯು ಚಿಕ್ಕಬೆಟ್ಟವನ್ನೇ ಮರಣಯೋಗ್ಯ

---

[1] *Jainism in South India and some Jaina Epigraphs*, pp. 153–57

[2] ಪ್ರವಚನಸಾರ, ಪೀಠಿಕೆ ಪು. xxii

[3] ಎ. ಕ. ಸಂಪುಟ ಒಂದು (ಪರಿಷ್ಕೃತ ಆವೃತ್ತಿ, 1972) ಪೀಠಿಕೆ ಪು. ix–xi

[4] ಪೀಠಿಕೆ ಪು. ೮–೯

[5] ಅದೇ. ಪು. ೭೨–೭೩

[6] *South Indian Inscriptions*, Vol. II, pt. 3, p. 368

ಸ್ಥಳವನ್ನಾಗಿ ಕಂಡುಕೊಂಡನು (ನಂ. ೨೪) ; ಕಳಂತೂರಿನಿಂದ ಬಂದ ಜೈನ ಗೊರವನು ಕಟವಪ್ರದಲ್ಲಿ ನೂರೆಂಟು ವರ್ಷಗಳ ಕಾಲ ತಪವನ್ನಾಚರಿಸಿ ಸಮಾಧಿ ಹೊಂದಿದನು (೨೫ನೆಯ ಶಾಸನ) ; ನೆಡುಬೊರೆ, ಕಿತ್ತೂರು, ಅಗಟಿ, ಇನಜ್ಞೂರು, ತಜ್ರಿಕಾಡು ಮುಂತಾದ ಇನ್ನೂ ಕೆಲವು ಸ್ಥಳಗಳಿಂದ ಜೈನಯತಿಗಳು ಈ ಪುಣ್ಯಸ್ಥಳಕ್ಕೆ ಬಂದರು—ಇತ್ಯಾದಿ ವಿಷಯಗಳು ನಮಗೆ ತಿಳಿದು ಬಂದಿವೆ.

ತಮಿಳ್ನಾಡಿನ ಮಧುರೈ ಜಿಲ್ಲೆಯ ಶಮಣರ್‌ಮಲೈ ಸಮೀಪದ ಕೀಟ್ಕುಯಿಲ್ಕುಡಿ (ಕೀಳಕ್ಕುಡಿ) ಎಂಬ ಗ್ರಾಮದಲ್ಲಿ ದೊರೆತ ೧೨ನೆಯ ಶತಮಾನದ ಶಾಸನವೊಂದನ್ನು ಇಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಬಹುದು.[1] ಮೂಲಸಂಘಕ್ಕೆ ಸೇರಿದ ಬೆಳಗುಳದ ಅರಿಯದೇವ ಮತ್ತು ಬ(ಬಾ)ಳಚಂದ್ರದೇವರ ಉಲ್ಲೇಖ ಇದರಲ್ಲಿದೆ. ಬೆಳಗುಳ ಎಂಬುದು ಶ್ರವಣಬೆಳಗೊಳವೇ ಸರಿ. ಇವರೊಡನೆ ನೇಮಿದೇವ, ಅಜಿತಸೇನದೇವ ಮತ್ತು ಗೋವರ್ಧನದೇವರು ಸಹ ಇದರಲ್ಲಿ ನಮೂದಿಸಲ್ಪಟ್ಟಿದ್ದಾರೆ. ಇವರಲ್ಲಿ ಬಾಳಚಂದ್ರದೇವನು ನಮ್ಮ ಸಂಪುಟದಲ್ಲಿ ಉಲ್ಲೇಖವಾದ ಸಮಕಾಲೀನನಾದ ಅದೇ ಹೆಸರಿನ ಯತಿಯಾಗಿರಬಹುದು. ಈ ಸ್ಥಳದಲ್ಲಿ ಕ್ರಿ.ಶ. ೯-೧೦ನೆಯ ಶತಮಾನಗಳಿಗೆ ಸೇರಿದ ಜೈನರ ಶಾಸನಗಳು ದೊರೆತಿವೆ.[2] ಬೆಳಗೊಳದ ಜೈನಯತಿಗಳು ಈ ಕೇಂದ್ರಗಳೊಡನೆ ಸಂಪರ್ಕ ಹೊಂದಿದ್ದರೆಂಬುದು ಇದರಿಂದ ತಿಳಿಯುತ್ತದೆ.

ಈ ಸಂಪುಟದ ಶಾಸನಗಳಲ್ಲಿ ಅನೇಕ ಜೈನಗುರುಗಳನ್ನು ಬಹುವಾಗಿ ಸ್ತುತಿಸಲಾಗಿದೆ ; ೧೧ನೆಯ ಶತಮಾನ ಮತ್ತು ಆ ನಂತರದ ಕಾಲದ ಶಾಸನಗಳಲ್ಲಿ ಅನೇಕವು ಅವರ ಸಾಧನೆಗಳನ್ನು ಕೊಂಡಾಡುತ್ತವೆ. ದೇವಕೀರ್ತಿ ಪಂಡಿತನು ಚಾರ್ವಾಕ, ಬೌದ್ಧ, ನೈಯಾಯಿಕ, ಕಾಪಾಲಿಕ ಮತ್ತು ವೈಶೇಷಿಕರನ್ನು ಪರಾಭವಗೊಳಿಸಿದನೆಂದು ೭೦ನೆಯ ಶಾಸನದಲ್ಲಿ ಹೇಳಿದೆ. ಇದರ ಕಾಲ ಕ್ರಿ.ಶ. ೧೧೬೩. ಹಾಗೆಯೇ ಇದೇ ಕಾಲದ ೭೧ನೆಯ ಶಾಸನ ಕನಕನಂದಿಯನ್ನೂ ಕ್ರಿ.ಶ. ೧೧೭೬ಕ್ಕೆ ಸೇರುವ ೭೩ನೆಯ ಶಾಸನವು ದಾಮನಂದಿತ್ರೈವಿದ್ಯಮುನೀಶ್ವರನನ್ನೂ ವರ್ಣಿಸುತ್ತವೆ. ಕ್ರಿ.ಶ. ೧೧೫೯ರ ೭೭ನೆಯ ಶಾಸನದಲ್ಲಿ ಮಹೇಶ್ವರ ಮುನಿಯು ಎಪ್ಪತ್ತು ಮಹಾಸಭೆಗಳಲ್ಲಿ ವಾದಮಾಡಿ ವಿಜಯಶಾಲಿಯಾದವನೆಂದೂ ದಿಗಂಬರ ವಿಮಲಚಂದ್ರನು ಶೈವ, ಪಾಶುಪತ, ಬೌದ್ಧ, ಕಾಪಾಲಿಕ ಮತ್ತು ಕಾಪಿಲರನ್ನುದ್ದೇಶಿಸಿದ ಎಚ್ಚರಿಕೆ ಪತ್ರವನ್ನು ಶತ್ರುಭಯಂಕರನೆಂಬ ಅರಸನ ವಿಶಾಲವಾದ ಅರಮನೆಯ ದ್ವಾರದಲ್ಲಿ ಹಾಕಿಸಿ ಅದರಿಂದ ವಾದಿಗಳ ಹೃದಯಗಳಲ್ಲಿ ದುಗುಡವನ್ನುಂಟುಮಾಡಿದನೆಂದೂ ಹೇಳಲಾಗಿದೆ. ಇದೇ ಶಾಸನದಲ್ಲಿ ಸಮಂತಭದ್ರನು ಪಾಟಲಿಪುತ್ರ, ಕಾಂಚೀಪುರ ನಗರಗಳನ್ನು ಹಾಗೂ ಮಾಳವ, ಸಿಂಧು, ಠಕ್ಕ ಮತ್ತು ವಿದಿಶ ಮುಂತಾದ ದೇಶಗಳನ್ನು ಸಂದರ್ಶಿಸಿ, ಅಲ್ಲಿಂದ ಮುಂದೆ ವಾದಾಕಾಂಕ್ಷಿಯಾಗಿ ಕರಹಾಟಕ್ಕೆ[3] ಬಂದನೆಂದು ಹೇಳಿದೆ. ''ವಾದಿ ಸಮಂತಭದ್ರನು ನಿನ್ನ ಆಸ್ಥಾನದಲ್ಲಿ ನಿಂತಾಗ, ಸ್ಪಷ್ಟವಾಗಿ ಮತ್ತು ಚತುರತೆಯಿಂದ ಮಾತನಾಡುವ ಧೂರ್ಜಟಿಯ (ಶಿವ) ನಾಲಿಗೆಯೂ ಆಗ ಬೇಗನೆ ಹೆಡಕಿನೊಳಗೆ ಸೇರಿಹೋಗುತ್ತದೆ'' ಎಂದು ಶಾಸನವು ತಿಳಿಸುತ್ತದೆ. ಚಾರ್ವಾಕನು ತನ್ನ ಗರ್ವವನ್ನೂ, ಸಾಂಖ್ಯನು ತನ್ನ ಬಿರುದಾವಳಿಗಳನ್ನೂ, ಭಾಟ್ಟನು ಆಶ್ರಯವನ್ನೂ, ಕಾಣಾದನು ಅಹಂಕಾರವನ್ನೂ ಬಿಟ್ಟುಕೊಡುವಷ್ಟು ಚಾರುಕೀರ್ತಿಯ ಕೀರ್ತಿ ಪ್ರಸಿದ್ಧವಾಯಿತು ಎನ್ನುವ ೩೬೦ನೆಯ ಶಾಸನದ ಕಾಲ ಕ್ರಿ. ಶ. ೧೫೩೮.

ಕ್ರಿ.ಶ. ೧೧ನೆಯ ಶತಮಾನ ಮತ್ತು ಆ ನಂತರದ ಕಾಲದಲ್ಲಿ ಜೈನಮತವು ತೀವ್ರ ವಿರೋಧವನ್ನೆದುರಿಸಬೇಕಾಯಿತೆಂದು ಈ ಅಂಶಗಳಿಂದ ವಿದಿತವಾಗುತ್ತದೆ. ಈ ಕಾಲವು ವೈಷ್ಣವ ಮತ್ತಿತರ ಧಾರ್ಮಿಕ ಪಂಥಗಳ ಏಳಿಗೆಯ ಕಾಲವೆಂಬುದು ನಮಗೆ ತಿಳಿದಿದೆ. ಜೈನರು ರಾಷ್ಟ್ರಕೂಟರ ಮತ್ತು ಅವರಿಗೂ ಮೊದಲು ಕದಂಬ ಹಾಗೂ ಗಂಗರ ಆಶ್ರಯವನ್ನು ಹೊಂದಿದ್ದರು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಜೈನಮತಕ್ಕೆ ವಿಶೇಷವಾದ ಪ್ರೋತ್ಸಾಹವೇನೂ ದೊರೆಯದಿದ್ದರೂ ಆ ರಾಜವಂಶದ ಆಳರಸರು ಅನುಸರಿಸಿದ ಧಾರ್ಮಿಕಸಹಿಷ್ಣುತೆಯ ನೀತಿಯು ಪ್ರಬಲವಾದ ನೆಲೆಯನ್ನು ಹೊಂದಿದ್ದ ಜೈನಮತವು ಕರ್ನಾಟಕದಲ್ಲಿ ಇನ್ನೂ ವಿಶೇಷವಾಗಿ ಹರಡಲು ಸಹಾಯಕವಾಯಿತು. ಪ್ರಾಚೀನ ಇತಿಹಾಸವುಳ್ಳ ಇನ್ನೊಂದು ಪಂಥವೆಂದರೆ ವೈಷ್ಣವಮತ. ಕರ್ನಾಟಕದಲ್ಲಿ ಹರಿ ಹಾಗೂ ಹರರನ್ನು ಒಂದೇ ಮೂರ್ತಿಯಲ್ಲಿ ಏಕೀಕರಿಸುವ ಶಿಲ್ಪನಿರ್ಮಾಣಗಳ ಮುಖಾಂತರ ಶೈವ ಹಾಗೂ ವೈಷ್ಣವ ಪಂಥಗಳ ನಡುವೆ ಸಾಮರಸ್ಯವನ್ನು ಸಾಧಿಸಲಾಗಿತ್ತು. ಕರ್ನಾಟಕದ ದಕ್ಷಿಣ ಭಾಗದಲ್ಲಿ ವೈಷ್ಣವಮತ, ಅದರಲ್ಲಿಯೂ ವಿಶೇಷವಾಗಿ ರಾಮಾನುಜರು ಪ್ರತಿಪಾದಿಸಿದ ವಿಶಿಷ್ಟಾದ್ವೈತ ಪಂಥವು ಅನುಕೂಲ ನೆಲೆಯನ್ನು ಕಂಡುಕೊಂಡು, ಸ್ವಲ್ಪಮಟ್ಟಿಗೆ ಹೊಯ್ಸಳರ ರಾಜಾಶ್ರಯವನ್ನೂ ಪಡೆಯಿತು. ಆದರೆ, ಉತ್ತರದಲ್ಲಿ ಪಾಶುಪತ, ಕಾಲಾಮುಖ, ಕಾಪಾಲಿಕ ಮುಂತಾದ

---

[1] *Annual Report on Indian Epigraphy*, 1950-51 No. B. 244 and Introduction, p. 3.

[2] *Annual Report on South Indian Epigraphy*, 1910, Nos. 63-69.

[3] ನರಸಿಂಹಾಚಾರ್ಯರು ಕರಹಾಟಕವನ್ನು ಕೊಲ್ಹಾಪುರದೊಡನೆ ಗುರುತಿಸಿದ್ದಾರೆ (Introduction, p. 83). ಆದರೆ ಕರಹಾಟಕವು ಈಗಿನ ಕರಹಾಡ್ ಎಂಬ ಊರು ಎಂದು ನಮಗೆ ಈಗ ತಿಳಿದಿದೆ.

ವಿಶಿಷ್ಟ ಪಂಥಗಳನ್ನೊಳಗೊಂಡ ಶೈವಮತದ ಸ್ಥಾನಮಾನವನ್ನು ಈ ಕಾಲದಲ್ಲಿ ಅಭಿನವ ಶೈವಮತವೆಂದು ಕೆಲವೊಮ್ಮೆ ವರ್ಣಿತವಾಗಿರುವ ವೀರಶೈವಮತವು ಪಡೆದುಕೊಂಡಿತ್ತು. ಏಕಾಂತದ ರಾಮಯ್ಯ, ವಿರುಪರಸ, ಗೊಗ್ಗಿದೇವ ಮುಂತಾದ ಇತರ ಶೈವ ಮತಾನುಯಾಯಿಗಳು ಜೈನಮತದ ಆಕ್ರಮಣಗಳಿಂದ ಅದನ್ನು ರಕ್ಷಿಸಲು ಯತ್ನಿಸಿದರು. ಈ ಹೊಸಮತದ ಮಹತ್ತ್ವವನ್ನು ಎತ್ತಿಹಿಡಿಯಲು ಯತ್ನಿಸಿದವರಲ್ಲಿ ಬಸವೇಶ್ವರ ಕೊನೆಯ ಮಹಾನ್‌ವ್ಯಕ್ತಿ. ಈ ಮಹಾಪುರುಷರು ಸಾಮಾಜಿಕ–ಧಾರ್ಮಿಕ ಸುಧಾರಣೆಯೊಂದನ್ನು ಆಚರಣೆಗೆ ತರಲು ತೊಡಗಿದಾಗ, ಜೈನರು ಸ್ವಾಭಾವಿಕವಾಗಿ ತಮ್ಮ ಹಿತಾರ್ಥಗಳನ್ನು ರಕ್ಷಿಸಿಕೊಳ್ಳಬೇಕಾಯಿತು. ಪ್ರತಿಯೊಂದು ಪಂಥದ ಅನುಯಾಯಿಗಳೂ ತಮ್ಮ ತತ್ವಪ್ರಸಾರಕ್ಕಾಗಿ ಹಲವು ಸಾಧನಗಳನ್ನು ಅಳವಡಿಸಿಕೊಳ್ಳುತ್ತಿದ್ದುದಕ್ಕೆ ಸ್ಪಷ್ಟ ಆಧಾರಗಳು ಈ ಕಾಲದ ಶೈವ ಮತ್ತು ಜೈನ ಶಾಸನಗಳೆರಡರಲ್ಲೂ ನಮಗೆ ದೊರೆಯುತ್ತವೆ. ಅನ್ಯಧರ್ಮಾನುಯಾಯಿಗಳನ್ನು ವಾದಗಳಲ್ಲಿ ಸೋಲಿಸಿ ಪಲಾಯನಮಾಡುವಂತೆ ಮಾಡಿದ ಜೈನಯತಿಗಳು ಆ ಇತರರಿಗಿಂತ ಬಹಳ ಉತ್ಕೃಷ್ಟರೆಂದು ತೋರಿಸುವ ಈ ಕಾಲದ ಪ್ರವೃತ್ತಿಯನ್ನು ಮೇಲೆ ಉಲ್ಲೇಖಿಸಿದ ಶಾಸನಗಳಲ್ಲಿ ಗಮನಿಸಬಹುದು. ಜೈನರು ತಮ್ಮ ಹಿಂದಿನ ಸ್ಥಾನಮಾನವನ್ನು ಮತ್ತೆ ಪಡೆಯಲು ಮಾಡಿದ ಪ್ರಯತ್ನಗಳನ್ನು ನಾವಿಲ್ಲಿ ನೋಡಬಹುದು.[1]

ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೩೬೮ಕ್ಕೆ ಸೇರುವ ಬುಕ್ಕರಾಯನ (I) ಶಾಸನವನ್ನು (ನಂ. ೪೭೫) ನಾವು ಪರೀಕ್ಷಿಸಬೇಕಾಗುತ್ತದೆ. ಭವ್ಯರೆಂದು ಉಲ್ಲೇಖಿತರಾಗಿರುವ ಜೈನರು ಹಾಗೂ ಭಕ್ತರೆಂದು ಕರೆಯಲಾಗಿರುವ ಶ್ರೀ ವೈಷ್ಣವರ ನಡುವೆ ವೈಷಮ್ಯ ತಲೆದೋರಿದಾಗ, ಜೈನರು ಶ್ರೀವೈಷ್ಣವರಿಂದ ತಮಗುಂಟಾಗುತ್ತಿದ್ದ ಅನ್ಯಾಯಗಳ ಬಗೆಗೆ ಅರಸನಿಗೆ ದೂರಿತ್ತರು. ಜೈನ ಮತ್ತು ವೈಷ್ಣವಮತಗಳ ನಡುವೆ ಯಾವ ಭೇದವೂ ಇಲ್ಲ ಮತ್ತು ಅವೆರಡನ್ನು ಬೇರೆ ಬೇರೆಯೆಂದು ಪರಿಗಣಿಸಕೂಡದು ಎಂದು ತಿಳಿಸಿ ಅರಸನು ಅವರಿಬ್ಬರ ನಡುವೆ ಶಾಂತಿಯನ್ನೇರ್ಪಡಿಸಿದನು. ಶ್ರೀವೈಷ್ಣವರಲ್ಲಿ ಪ್ರಮುಖನಾದ ತಿರುಮಲೆ ತಾತಯ್ಯನು ಭವ್ಯರ ಅನುಮತಿಯೊಂದಿಗೆ ಬೆಳಗೊಳತೀರ್ಥದ ವೈಷ್ಣವರಿಗೆ ಅಂಗರಕ್ಷೆಯನ್ನೊದಗಿಸಲು ರಾಜ್ಯದಲ್ಲಿ ಪ್ರತಿ ಜೈನದ್ವಾರ (ಮನೆ?) ದಿಂದಲೂ ಒಂದು ಹಣವನ್ನು ಸಂಗ್ರಹಿಸಿ ದೇವರಿಗೆ ೨೦ ಅಂಗರಕ್ಷೆಯನ್ನಿತ್ತನಂತರ ಉಳಿದ ಮೊತ್ತದಿಂದ ಪಾಳುಬಿದ್ದ ಜಿನಾಲಯಗಳ ಜೀರ್ಣೋದ್ಧಾರ ಮಾಡಿಸಬೇಕೆಂದು ನಿರ್ಣಯಿಸಲಾಯಿತು. ಜೈನರು ಪ್ರಾಯಶಃ ಹೆಚ್ಚಿನ ಸೌಲಭ್ಯಗಳನ್ನು ಪಡೆಯಲು ಯತ್ನಿಸಿದರಾದರೂ ಅವರಿಗೆ ಸಲ್ಲಬೇಕಾದುದಷ್ಟನ್ನೇ ಪಡೆದರು ಹಾಗೂ ಅರಸನು ಧಾರ್ಮಿಕ ಸಹಿಷ್ಣುತೆಯ ನೀತಿಯನ್ನು ಮೆರೆಸುವ ಅವಕಾಶವನ್ನುಪಯೋಗಿಸಿಕೊಂಡನೆಂದು ಇದರಿಂದ ವಿದಿತವಾಗುತ್ತದೆ.

ಪ್ರಸ್ತುತ ಸಂಪುಟದಲ್ಲಿರುವ ಶಾಸನಗಳಿಂದ ಜೈನಗುರುಗಳಲ್ಲಿ ಅನೇಕರು ಮಹಾ ಗ್ರಂಥಗಳನ್ನು ರಚಿಸಿದರೆಂದು ನಮಗೆ ತಿಳಿದುಬರುತ್ತದೆ. ಕೊಂಡಕುಂದನೆನಿಸಿದ ಉಮಾಸ್ವಾತಿಯು 'ತತ್ವಾರ್ಥಸೂತ್ರ'ದ ಕರ್ತೃವೆಂಬುದನ್ನು ಹಿಂದೆ ನೋಡಿದ್ದೇವೆ. ಈ ಕೃತಿಗೆ ಶಿವಕೋಟಿಸೂರಿ ಎಂಬಾತನು ಟೀಕೆಯನ್ನು ರಚಿಸಿದನೆಂದು ಶಾಸನವೊಂದು (ನಂ. ೩೬೦) ತಿಳಿಸುತ್ತದೆ. ಕ್ರಿ.ಶ. ೧೧೨೯ನೆಯ ೭೭ನೆಯ ಶಾಸನವು ಜೈನಯತಿಗಳ ಅನೇಕ ಕೃತಿಗಳನ್ನು ಹೆಸರಿಸುತ್ತದೆ. ವಜ್ರನಂದಿಮುನಿಯು 'ನವಸ್ತೋತ್ರ'ವನ್ನು, ಸುಮತಿದೇವನು 'ಸುಮತಿಶತಕ'ವನ್ನು, ಚಿಂತಾಮಣಿಯು ಎಲ್ಲ ಮನೆಗಳಲ್ಲೂ ದೈನಂದಿನ ಉಪಯೋಗಕ್ಕಾಗಿ 'ಚಿಂತಾಮಣಿ' ಎಂಬ ಗ್ರಂಥವನ್ನು, ಶ್ರೀವರ್ಧದೇವನು 'ಚೂಳಾಮಣಿ'ಯನ್ನು, ಚಂದ್ರಕೀರ್ತಿಗಣಿಯು 'ಶ್ರುತಬಿಂದು' ವನ್ನು, ದಯಾಪಾಲನು 'ರೂಪಸಿದ್ಧಿ'ಯನ್ನೂ ರಚಿಸಿದರೆಂದು ಹೇಳಲಾಗಿದೆ. ದೇವನಂದಿ ಮತ್ತು ಜಿನೇಂದ್ರಬುದ್ಧಿ ಎಂಬ ಹೆಸರುಗಳಿಂದಲೂ ಪರಿಚಿತನಾಗಿದ್ದ ಪೂಜ್ಯಪಾದನು 'ಸರ್ವಾರ್ಥಸಿದ್ಧಿ' 'ಜೈನಾಭಿಷೇಕ' ಮತ್ತು 'ಸಮಾಧಿಶತಕ' ಮುಂತಾದ ಕೃತಿಗಳನ್ನಲ್ಲದೆ 'ಜೈನೇಂದ್ರ' ಎಂಬ ವ್ಯಾಕರಣಗ್ರಂಥವನ್ನೂ ರಚಿಸಿದ್ದನೆಂದು ತಿಳಿದುಬರುತ್ತದೆ (ಕ್ರಿ.ಶ. ೧೧೬೩ರ ೭೧ನೆಯ ಶಾಸನ). ಮುಂದಿನಿಂದ ಹಿಂದಕ್ಕೂ, ಹಿಂದಿನಿಂದ ಮುಂದಕ್ಕೂ ಓದಲು ಸಾಧ್ಯವಾಗುವ ರೀತಿಯಲ್ಲಿ ಶ್ರುತಕೀರ್ತಿತ್ರೈವಿದ್ಯನು 'ರಾಘವಪಾಂಡವೀಯ' ಎಂಬ ಕೃತಿಯನ್ನು ರಚಿಸಿದನೆಂದು ಇದೇ ಶಾಸನ ತಿಳಿಸುತ್ತದೆ. ಶ್ರೀಪಾಲತ್ರೈವಿದ್ಯದೇವನು 'ವಿಜಯವಿಳಾಸದ' ಕರ್ತೃವಾಗಿದ್ದನೆನ್ನಲಾಗಿದೆ (ನಂ. ೫೬೯). ಕ್ರಿ.ಶ. ೧೪೩೨ರ ೩೬೪ನೆಯ ಶಾಸನವು ಚಾರುಕೀರ್ತಿಮುನಿಯ 'ಸಾರತ್ರಯ'ವನ್ನು ಮತ್ತು ಸಿದ್ಧಾಂತಯೋಗಿಯ 'ಸಿದ್ಧಶಾಸ್ತ್ರ'ವನ್ನು ಉಲ್ಲೇಖಿಸುತ್ತದೆ.

ಜೈನಗುರುಗಳಲ್ಲಿ ಕೆಲವರು ಪವಾಡಗಳನ್ನು ಮಾಡಿ ತೋರಿಸಿದರು. ಕೊಂಡಕುಂದಾಚಾರ್ಯನು ಗಾಳಿಯಲ್ಲಿ ಸಂಚರಿಸುವ ಸಿದ್ಧಿಯನ್ನು ಪಡೆದಿದ್ದನೆಂದು ಹೇಳಿದೆ. ಅವನು ಬಾಹ್ಯ ಮತ್ತು ಆಂತರಿಕ ಕಲ್ಮಶಗಳಿಂದ ವಿಮುಕ್ತನಾಗಿದ್ದನೆಂಬುದನ್ನು ತೋರಿಸಲು ಭೂಮಿಯಿಂದ ಕೇವಲ ನಾಲ್ಕು ಅಂಗುಲಗಳಷ್ಟು ಮೇಲೇರಿ ನಡೆಯುತ್ತಿದ್ದ. ಜೀವಿಗಳ ಸಂರಕ್ಷಣೆಯ ಉದ್ದೇಶವುಳ್ಳವನಾಗಿ ಆ ಜೈನಯತಿಯು ಗೃಧ್ರದ ಪಕ್ಷಗಳನ್ನು ಧರಿಸಿದುದರಿಂದ ಗೃಧ್ರಪಿಂಛನೆಂಬ ಹೆಸರಿನಿಂದ ಕರೆಯಲ್ಪಟ್ಟನು (ಶಾಸನ ೩೬೪). ಪೂಜ್ಯಪಾದನನ್ನು ಉಲ್ಲೇಖಿಸುತ್ತ ಇದೇ ಶಾಸನವು ಅವನ "ಪಾದಗಳನ್ನು ತೊಳೆದ ನೀರು ಸ್ಪರ್ಶಮಾತ್ರ

[1] ವಿವರಗಳಿಗೆ ಡಾ. ಪಿ. ಬಿ. ದೇಸಾಯರ *Basavēśvara and his times* ಎಂಬ ಗ್ರಂಥದ ಎರಡನೆಯ ಭಾಗ, ಹತ್ತನೆಯ ಅಧ್ಯಾಯ ಮುಂತಾದವುಗಳನ್ನು ನೋಡಬಹುದು.

ದಿಂದಲೇ ಕಬ್ಬಿಣವನ್ನು ಬಂಗಾರವನ್ನಾಗಿ ಬದಲಾಯಿಸುವ ಶಕ್ತಿಯನ್ನು ಹೊಂದಿತ್ತು'' ಎಂದು ತಿಳಿಸುತ್ತದೆ. ''ರಹಸ್ಯವಾಗಿ ಕಲಿಯು ಕಳುಹಿಸಿದ'' ರೋಗವೊಂದು ಶ್ರುತಮುನಿ ಮಹಾಯೋಗಿಯ ಶಕ್ತಿಯನ್ನು ಕ್ರಮೇಣ ಕುಗ್ಗಿಸಿತು. ಈ ರೋಗದಿಂದ ತಾನು ಪಾರಾಗಲಾರೆನೆಂಬುದನ್ನು ಮನಗಂಡ ಆ ಮುನಿಯು ತನ್ನ ಸೋದರ ಶಿಷ್ಯನಾದ ಪಂಡಿತೇಂದ್ರ ಯೋಗಿರಾಜನಿಂದ ಸಲ್ಲೇಖನವನ್ನು ಸ್ವೀಕರಿಸಿ ಕ್ರಿ.ಶ. ೧೪೩೨, ಜುಲೈ ೭ರಂದು ಮೃತನಾದನು. ಈ ಶಾಸನವು (ನಂ. ೩೬೪) ಅವನ ನೆನಪಿಗಾಗಿ ಸ್ಥಾಪಿಸಿದ ನಿಶಿಧಿ. ಕ್ರಿ.ಶ. ೧೧೧೯ನೆಯ ವರ್ಷದ ೪೮೪ನೆಯ ಶಾಸನವು ದಿವಾಕರನಂದಿಯ ಶಿಷ್ಯನಾದ ಮಲಧಾರಿದೇವನು ಸಾಧಿಸಿದ ಮನಸ್ಸಿನ ಪರಿಪೂರ್ಣತೆಯನ್ನು ಶ್ಲಾಘಿಸುತ್ತದೆ :

ನೆಱೆಯೆ ತನುತ್ರಮಿಕ್ಕಿದವೊಲಿರ್ದ್ದ ಮಲಂ ತಿನೆ ಮೆಯ್ಯನೊರ್ಮ್ಮೆಯುಂ
ತುಱಿಸುವುದಿಲ್ಲ ನಿದ್ದೆವರೆ ಮಗ್ಗುಲನಿಕ್ಕುವುದಿಲ್ಲ ಬಾಗಿಲಂ
ಕಿಱಿತೆಱೆಯೆಂಬುದಿಲ್ಲುಗುಳ್ವುದಿಲ್ಲ ಮಲಂಗುವುದಿಲ್ಲಹೀಂದ್ರನುಂ
ನೆಱೆವನೆ ಬಣ್ಣಿಸಲ್ಗುಣಗಣಾವಳಿಯಂ ಮಳಧಾರಿದೇವರಂ

ಎನ್ನುತ್ತದೆ ಶಾಸನ. ಕ್ರಿ.ಶ. ೧೧೨೩ರ ೧೩೫ನೆಯ ಶಾಸನದಲ್ಲಿ ಅವನಿಗೆ ಗಂಡವಿಮುಕ್ತದೇವನೆಂಬ ಹೆಸರನ್ನು ನೀಡಲಾಗಿದ್ದು, ಕುಕ್ಕುಟಾಸನ ಎಂದು ಪರಿಚಿತವಾಗಿರುವ ಆಸನದಿಂದ ಅವನು ಎಂದೂ ಬಳಲಿರಲಿಲ್ಲವಾದುದರಿಂದ ಕುಕ್ಕುಟಾಸನಮಲಧಾರಿ ಎಂಬ ಹೆಸರೂ ಅವನಿಗೆ ಬಂದಿತೆಂದೂ ತಿಳಿಸಲಾಗಿದೆ.

ಕುಲಚಂದ್ರದೇವರ ಶಿಷ್ಯನಾದ ಮಾಘನಂದಿಯನ್ನು ಕೊಲ್ಲಾಪುರತೀರ್ಥದ ಸಂಸ್ಥಾಪಕನೆಂಬುದಾಗಿ ೭೧ನೆಯ ಶಾಸನವು ಉಲ್ಲೇಖಿಸುತ್ತದೆ. ಈ ವಿಷಯವನ್ನು ಕ್ರಿ.ಶ. ೧೧೨೩ಕ್ಕೆ ಸೇರಿದ ಚಾಲುಕ್ಯ ವಿಕ್ರಮಾದಿತ್ಯನ ತೇರದಾಳ ಶಾಸನವು ಸಮರ್ಥಿಸುತ್ತದೆ. ಈ ಶಾಸನವು ತೇರದಾಳಿನ ಪ್ರಮುಖನಾದ ಮಾಂಡಲಿಕ ಗೊಂಕದೇವನು ಅಲ್ಲಿ ತನ್ನ ಹೆಸರಿನಲ್ಲಿ ಜಿನಾಲಯವೊಂದನ್ನು ಕಟ್ಟಿಸಿದ ವಿಷಯವನ್ನು ನಿರೂಪಿಸುತ್ತದೆ. ಈ ಜಿನಾಲಯದ ನಿರ್ಮಾಣ ಪೂರ್ಣಗೊಂಡ ನಂತರ ಅಲ್ಲಿ ಮೂರ್ತಿ ಪ್ರತಿಷ್ಠಾಪನೆಯ ಶುಭಸಂದರ್ಭದಲ್ಲಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಲು ಅವನು ಕೊಲ್ಲಗಿರಿ (ಕೊಲ್ಲಾಪುರ)ಯಿಂದ ದೇಶಿಗಣ, ಪೊಸ್ತಕ ಗಚ್ಛ ಮತ್ತು ಕೊಂಡಕುಂದಾನ್ವಯಕ್ಕೆ ಸೇರಿದ ಮಾಘನಂದಿಸೈದ್ಧಾಂತಿಕನನ್ನು ಆಹ್ವಾನಿಸಿದನು. ಈ ಮಾಘನಂದಿಯು ಸಾಮಂತ ನಿಂಬದೇವನ ಗುರುವಾಗಿದ್ದನೆಂದು ಈ ಶಾಸನವಲ್ಲಿ ಹೇಳಲಾಗಿದ್ದು, ಇದೇ ರೀತಿಯಲ್ಲಿ ಶ್ರವಣಬೆಳಗೊಳದ ಶಾಸನವೊಂದರಲ್ಲೂ ನಿಂಬದೇವನು ಮಾಘನಂದಿಯ ಶಿಷ್ಯನಾಗಿದ್ದನೆಂದು ಹೇಳಿದೆ. ಈ ಶಾಸನದ ಅನಂತರದ ಭಾಗ ಕ್ರಿ.ಶ. ೧೧೮೧ಕ್ಕೆ ಸೇರಿದುದಾಗಿದ್ದು, ಸಾಮಂತ ನಿಂಬದೇವನು ಕೊಲ್ಲಾಪುರದ ರೂಪನಾರಾಯಣ ಬಸದಿಯನ್ನು ಮಾಡಿಸಿದನೆಂದು ತಿಳಿಸುತ್ತದೆ.[1] ಪ್ರಸ್ತುತ ನಾವು ಪರಿಶೀಲಿಸುತ್ತಿರುವ ಶ್ರವಣಬೆಳಗೊಳದ ಶಾಸನವು ಸಾಮಂತ ನಾಕರಸ ಮತ್ತು ಸಾಮಂತ ಕಾಮದೇವ ಎಂಬ ಮಾಘನಂದಿಯ ಇನ್ನಿಬ್ಬರು ಶಿಷ್ಯರನ್ನು ಸಹ ಉಲ್ಲೇಖಿಸುತ್ತದೆ. ಆದ್ದರಿಂದ ಮಾಘನಂದಿಯ ಕಾಲ ಕ್ರಿ.ಶ. ೧೨ನೆಯ ಶತಮಾನದ ಮೊದಲ ದಶಕವೆಂದು ಹೇಳಬಹುದು. ಗಂಡವಿಮುಕ್ತದೇವ ಮತ್ತು ಮೇಲೆ ಗಮನಿಸಿದ 'ರಾಘವಪಾಂಡವೀಯ'ದ ಕರ್ತೃವಾದ ಶ್ರುತಕೀರ್ತಿಯು ಮಾಘನಂದಿಯ ಶಿಷ್ಯರಾಗಿದ್ದರು. ಶ್ರುತಕೀರ್ತಿಯು ಮಾಘನಂದಿಯ ಶಿಷ್ಯನಾಗಿ ತೇರದಾಳದ ಶಾಸನದಲ್ಲಿ ಸಹ ಕಂಡುಬರುತ್ತಾನೆ. ಆದ್ದರಿಂದ ಶ್ರುತಕೀರ್ತಿಯ ಕಾಲ ೧೨ನೆಯ ಶತಮಾನದ ಮಧ್ಯಭಾಗವೆಂದು ಹೇಳಬಹುದು. ಕೆಲ್ಲಂಗೆರೆಯ ಪ್ರತಾಪಪುರವನ್ನು ಪುನರೂರ್ಜಿತಗೊಳಿಸಿ ಕೊಲ್ಲಾಪುರದ ರೂಪನಾರಾಯಣ ಬಸದಿಗೆ ದಾನನೀಡಲಾಯಿತು. ಜಿನನಾಥ ಪುರದಲ್ಲಿ ನಿರ್ಮಿಸಲಾದ ಕಲ್ಲಬಸದಿಯನ್ನು ಸಹ ಪ್ರಾಯಶಃ ರೂಪನಾರಾಯಣಬಸದಿಗೆ ಪ್ರತಿಬದ್ಧವಾಗಿ ಮಾಡಲಾಯಿತೆಂದು ತೋರುತ್ತದೆ. ಕೊಲ್ಲಾಪುರದಲ್ಲಿಯೇ ಇರುವ ಕ್ರಿ.ಶ. ೧೧೩೫ಕ್ಕೆ ಸೇರಿದ ಶಾಸನವೊಂದು[2] ಮಾಘನಂದಿಯನ್ನು ಉಲ್ಲೇಖಿಸಿ ಈ ಮೊದಲು ರೂಪನಾರಾಯಣ ಬಸದಿಯನ್ನು ನಿರ್ಮಿಸಿದ ಮಹಾಸಾಮಂತ ನಿಂಬದೇವನಿಂದಲೇ ನಿರ್ಮಿತವಾದ ಪಾರ್ಶ್ವನಾಥ ಬಸದಿಯ ನಿರ್ವಹಣೆಯನ್ನು ಮಾಘನಂದಿಯ ಶಿಷ್ಯನಾದ ಶ್ರುತಕೀರ್ತಿತ್ರೈವಿದ್ಯನಿಗೆ ವಹಿಸಿದ ವಿಷಯವನ್ನು ನಿರೂಪಿಸುತ್ತದೆ. ಈ ನಿಂಬದೇವನು ರೂಪನಾರಾಯಣನೆಂಬ ಬಿರುದನ್ನು ಧರಿಸಿದ ಶಿಲಾಹಾರ ಮನೆತನಕ್ಕೆ ಸೇರಿದ ಗಂಡರಾದಿತ್ಯನ ಕೈಕೆಳಗಿನ ಅಧಿಕಾರಿಯಾಗಿದ್ದನು.

೧೫೬ನೆಯ ಶಾಸನವು ನೂತ್ನಚಂದಿಲ ಮನೆತನಕ್ಕೆ ಸೇರಿದ ಗೊಲ್ಲದೇಶದ ಅರಸನೊಬ್ಬ ಸನ್ಯಾಸವನ್ನು ಸ್ವೀಕರಿಸಿ ಗೊಲ್ಲಾಚಾರ್ಯನೆಂದು ನಾಮಾಂಕಿತನಾದ ವಿಷಯವನ್ನು ತಿಳಿಸುತ್ತದೆ. ಇವನನ್ನು ಗುರುತಿಸಲು ಸಾಧ್ಯವಿಲ್ಲವಾಗಿದೆ. ಹಾಗೆಯೇ ೭೩ನೆಯ ಶಾಸನದಲ್ಲಿ ಹೇಳಿರುವ ನಯಕೀರ್ತಿಯ ಶಿಷ್ಯನಾದ ಇರುಂಗೋಳನನ್ನೂ ಗುರುತಿಸಲು ಸಾಧ್ಯವಾಗುವುದಿಲ್ಲ. ಒಬ್ಬ

---

[1] B. R. Gopal : *Karnatak Inscriptions*, Vol. V, Nos. 21 and 98; Introduction, pp. xxxiv–xxxv

[2] *Ep. Ind.*, Vol. XIX, pp. 30 ff

ಇಮ್ಮಡಿ ಇರುಂಗೋಳಚೋಳನು ನಿಡುಗಲ್ಲಿನ ಚೋಳರ ಮಾಂಡಲಿಕ ಮನೆತನಕ್ಕೆ ಸೇರಿದವನಾಗಿದ್ದು, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹೆಂಜೇರುವಿನ ಸುತ್ತಮುತ್ತಲ ಪ್ರದೇಶವನ್ನಾಳುತ್ತಿದ್ದನು.[1] ಈತನು ಹೊಯ್ಸಳ ವಿಷ್ಣುವರ್ಧನನಿಂದ ಪರಾಜಿತನಾದನೆಂದು ಹೇಳಿದೆ. ಒಂದನೆಯ ರಾಚಮಲ್ಲನ ಮಗನಾದ ಇನ್ನೊಬ್ಬ ಇರುಂಗೋಳನು ಸಹ ನಮಗೆ ಪರಿಚಿತನಾಗಿದ್ದಾನೆ.[2] ಆದರೆ, ನಮ್ಮ ಶಾಸನದಲ್ಲಿ ಉಕ್ತನಾದ ಇರುಂಗೋಳನನ್ನು ಗುರುತಿಸಲು ಸಾಧ್ಯವಿಲ್ಲವಾಗಿದೆ.

ಇದೇ ಶಾಸನವು ಅಣ್ಣಿತಟಾಕದ ನಿವಾಸಿಯಾದ ಮಲಧಾರಿಸ್ವಾಮಿ ಎಂಬ ಇನ್ನೊಬ್ಬ ಜೈನಯತಿಯನ್ನೂ ಉಲ್ಲೇಖಿಸುತ್ತದೆ. ಈ ಅಣ್ಣಿತಟಾಕವು ಗಂಗಪೆರ್ಮಾಡಿ ಇಮ್ಮಡಿ ಬೂತುಗನು ತನ್ನ ಹೆಸರಿನಲ್ಲಿ ಪೆರ್ಮಾಡಿ ಜಿನಾಲಯವೆಂದು[3] ಕಟ್ಟಿಸಿರುವ ಪ್ರಸಿದ್ಧ ಜೈನ ಬಸದಿ ಇರುವ ಅಣ್ಣಿಗೆರೆಯೆ ಆಗಿದೆ. ಮಲಧಾರಿ ಸ್ವಾಮಿಯು ಈ ಸ್ಥಳದ ಪೆರ್ಮಾಡಿ ಜಿನಾಲಯದ ನಿವಾಸಿಯಾಗಿರುವ ಸಾಧ್ಯತೆ ಇದೆ.

ಇನ್ನೊಬ್ಬ ಯತಿ ವಾದಿರಾಜನು ಚಾಲುಕ್ಯ ಅರಸ ಜಯಸಿಂಹನಿಂದ ಸನ್ಮಾನಿತನಾದನೆಂದು ಹೇಳಿದರೆ, ಶಾಂತಿದೇವನು ಮತ್ತೊಬ್ಬ ಚಾಲುಕ್ಯ ಅರಸ ಆಹವಮಲ್ಲ (ಪ್ರಾಯಶಃ ಸೋಮೇಶ್ವರ I) ನಿಂದ ಶಬ್ದಚತುರ್ಮುಖ ಎಂಬ ಬಿರುದನ್ನು ಪಡೆದನೆಂದು ಹೇಳಿದೆ (ಶಾಸನ ೭೭). ಬಲಿಪುರದಲ್ಲಿ ಮಲ್ಲಿಕಾಮೋದ ಎಂಬ ಬಿರುದುಳ್ಳ ಚಾಲುಕ್ಯ ಅರಸ ಜಯಸಿಂಹನ ಹೆಸರಿನಲ್ಲಿ ಪ್ರಾಯಶಃ ಸ್ಥಾಪಿತವಾದ ಮಲ್ಲಿಕಾಮೋದಶಾಂತೀಶಬಸದಿ ಎಂಬ ಬಸದಿಯೊಂದಿದ್ದು ಇಲ್ಲಿ ಗುಣಚಂದ್ರನೆಂಬ ಹೆಸರನ್ನು ಹೊಂದಿದ್ದ ಮಲಧಾರಿಮುನಿಯು ವಾಸವಾಗಿದ್ದನೆಂದು ಹೇಳಿದೆ (ಶಾಸನ ೭೯).

ಹೀಗೆ ಈ ಸಂಪುಟದ ಶಾಸನಗಳಲ್ಲಿ ಆಳರಸರ ಹಾಗೂ ಜೈನಯತಿಗಳೊಂದಿಗೆ ಅವರ ಸಂಬಂಧದ ಬಗೆಗೆ ಅನೇಕ ಪರೋಕ್ಷ ಉಲ್ಲೇಖಗಳು ದೊರೆಯುತ್ತವೆ. ಆದರೆ, ಹೆಚ್ಚಿನ ಸಂದರ್ಭಗಳಲ್ಲಿ ಇಂತಹ ಉಲ್ಲೇಖಗಳು ಕೇವಲ ಪ್ರಾಸಂಗಿಕವಾಗಿ ಬಂದಿರುವುದರಿಂದ ಯತಿಗಳ ಕಾಲಾನುಪೂರ್ವಿಯನ್ನಾಗಲೀ ಅಥವಾ ಆಳರಸರ ಗುರುತನ್ನಾಗಲೀ ಖಚಿತವಾಗಿ ನಿರ್ಧರಿಸಲು ಸಾಧ್ಯವಿಲ್ಲವಾಗಿದೆ.

ಗಂಗರು

೧೪೦ನೆಯ ಶಾಸನವೇ ಈ ಸಂಪುಟದಲ್ಲಿರುವ ಗಂಗರ ಅತ್ಯಂತ ಪ್ರಾಚೀನ ಶಾಸನವೆಂದು ಹೇಳಲಾಗಿದೆ. ಅದು ಚಂದ್ರನಾಥ ಬಸದಿಯ ಬಳಿಯ ಬಂಡೆಯೊಂದರ ಮೇಲಿರುವ ಸಿವಮಾರನ ಬಸದಿ ಎಂದು ತಿಳಿಸುವ ಒಂದು ಚಿಕ್ಕ ಪಟ್ಟಿಕೆಯ ಶಾಸನ. ಇಲ್ಲಿ ತಿಳಿಸಿರುವ ಬಸದಿಯು ಚಂದ್ರಪ್ರಭ ಬಸದಿಯಿರಬೇಕೆಂದೂ ಆದ್ದರಿಂದ ಅದನ್ನು ಸುಮಾರು ಕ್ರಿ. ಶ. ೮೦೦ರ ಕಾಲಕ್ಕೆ ಕಟ್ಟಿರಬೇಕೆಂದೂ ಶ್ರೀ ನರಸಿಂಹಾಚಾರ್ಯರು ಸೂಚಿಸಿದ್ದಾರೆ. ಆದರೆ ಈ ರೀತಿಯ ನಿರ್ಧಾರಕ್ಕೆ ಬರಲು ಈ ಶಾಸನವು ಯಾವ ರೀತಿಯಲ್ಲಿಯೂ ಸಹಾಯಕವಾಗಿರುವುದಿಲ್ಲವಾದ್ದರಿಂದ ಈ ಹೇಳಿಕೆಯನ್ನು ಒಪ್ಪುವುದು ಕಷ್ಟ. ಗಂಗರಾಜನೇ ಈ ಬಸದಿಯನ್ನು ಕಟ್ಟಿಸಿದ್ದಲ್ಲಿ ಮತ್ತು ಶಾಸನವು ಗಂಗರಾಜ ಇಮ್ಮಡಿ ಶಿವಮಾರನದೇ ಆಗಿದ್ದಲ್ಲಿ ಅದು ಆತನಿಗೆ ಸಂಬಂಧಿಸಿದ ಯಾವ ಇತರ ವಿವರಗಳನ್ನೂ, ಕಡೆಗೆ ಶಿವಮಾರನ ಬಿರುದುಗಳಾಗಲಿ ಅಥವಾ ಅವನು ಯಾವ ವಂಶಕ್ಕೆ ಸೇರಿದವನೆಂಬುದನ್ನಾಗಲಿ ತಿಳಿಸದಿರುವುದು ಆಶ್ಚರ್ಯ. ಕೇವಲ ಹೆಸರಿನ ಆಧಾರದ ಮೇಲೆ ಈತನು ಗಂಗವಂಶದ ಅರಸನೆಂದು ತೀರ್ಮಾನಿಸುವುದು ಸಾಧಾರವಾಗದು. ಅದರಲ್ಲಿನ ವಾಸ್ತು ಮತ್ತು ಮೂರ್ತಿಶಿಲ್ಪಗಳನ್ನು ಕೂಲಂಕಷವಾಗಿ ವಿವೇಚಿಸಿದಾಗ ಈ ಬಸದಿಯನ್ನು ಈಚಿನ ಕಾಲಕ್ಕೆ, ಎಂದರೆ ಸುಮಾರು ೯–೧೦ನೆಯ ಶತಮಾನಕ್ಕೆ, ಸೇರಿಸಬೇಕಾಗುತ್ತದೆ.

ಆದ್ದರಿಂದ ಗಂಗರ ಅರಸನಾದ ಸತ್ಯವಾಕ್ಯ ಪೆರ್ಮಾನಡಿಯ ಕಾಲಕ್ಕೆ ಖಚಿತವಾಗಿ ಸೇರಬಹುದಾದ ೫೪೪ನೆಯ ಶಾಸನವೇ ಅತ್ಯಂತ ಪ್ರಾಚೀನವಾದುದಾಗುತ್ತದೆ. ಲಿಪಿಯ ಆಧಾರದಿಂದ ಇದನ್ನು ೯ನೆಯ ಶತಮಾನದ ಶಾಸನವೆಂದು ಪರಿಗಣಿಸಿ ಇದರಲ್ಲಿ ತಿಳಿಸಿರುವ ರಾಜನು ಕ್ರಿ. ಶ. ೮೭೦ರಿಂದ ೯೧೯ರ ವರೆಗೆ ಆಳಿದ ಇಮ್ಮಡಿ ರಾಚಮಲ್ಲನೆಂದು ಗುರುತಿಸಬಹುದು. ಆದ್ದರಿಂದ ಈ ದೊರೆಯ ೧೫ನೆಯ ಆಳಿಕೆಯ ವರ್ಷವೆಂದು ತಿಳಿಸುವ ಶಾಸನದ ಕಾಲ ಕ್ರಿ. ಶ. ೮೮೪–೮೫ ಆಗುತ್ತದೆ.

ಚಿಕ್ಕಬೆಟ್ಟದ ಮೇಲಿರುವ ಸುಮಾರು ೧೦ನೆಯ ಶತಮಾನದ ವೀರಗಲ್ಲಿನ ಶಾಸನ (ನಂ. ೧೭೧) ಗಂಗವಜ್ರನ ಲೆಂಕ

---

1 R. Sewell and S. K. Iyengar: *Historical Inscriptions of Southern India*, p. 369

2 *Ibid.* p. 393

3 *Ep. Ind.*, Vol. XV, pp. 337 ff

ಬೋಯಿಗನು ರಕ್ಕಸಮಣಿಗೂ ವದ್ದೆಗ ಮತ್ತು ಕೋಣೆಯಗಂಗರಿಗೂ ನಡುವೆ ನಡೆದ ತುಮುಲ ಯುದ್ಧದಲ್ಲಿ ಸತ್ತುದನ್ನು ತಿಳಿಸುತ್ತದೆ. ಈ ಶಾಸನಕ್ಕೆ ಕ್ರಿ. ಶ. ಸುಮಾರು ೯೪೦ರ ಕಾಲವನ್ನು ಕೊಟ್ಟಿದೆ.[1] ಇಲ್ಲಿ ತಿಳಿಸಿರುವ ವದ್ದೆಗನನ್ನು ರಾಷ್ಟ್ರಕೂಟರ ಮುಮ್ಮಡಿ ಅಮೋಘವರ್ಷನೆಂದು ಗುರುತಿಸಲಾಗಿದೆ. ಮುಮ್ಮಡಿ ಕೃಷ್ಣನ ದೇವೋಲಿ ತಾಮ್ರ ಶಾಸನದಿಂದ ಅವನು ಇನ್ನೂ ಯುವರಾಜನಾಗಿದ್ದಾಗಲೇ ಗಂಗರ ರಾಚಮಲ್ಲನ ಮೇಲೆ ಯುದ್ಧಕ್ಕೆ ಹೋಗಿ ಅವನನ್ನು ಪಕ್ಕಕ್ಕೆ ದೂಡಿ ಅವನ ತಮ್ಮನಾದ ಇಮ್ಮಡಿ ಬೂತುಗನನ್ನು ಗಂಗ ಸಿಂಹಾಸನದ ಮೇಲೆ ಕೂಡಿಸಿದುದಾಗಿ ತಿಳಿಸಿದೆ. ಪ್ರಕೃತ ಶಾಸನದಲ್ಲಿ ಕೋಣೆಯಗಂಗನಿಗೆ ವದ್ದೆಗನು ನೆರವು ನೀಡಿದುದನ್ನು ತಿಳಿಸಿದೆ. ವದ್ದೆಗನನ್ನು ಮುಮ್ಮಡಿ ಅಮೋಘವರ್ಷನೆಂದಿಟ್ಟುಕೊಂಡಲ್ಲಿ ಈ ಯುದ್ಧವು ಮುಮ್ಮಡಿ ರಾಚಮಲ್ಲನು ಕೋಣೆಯಗಂಗನ ಮೇಲೆ ನಡೆಸಿದ ಯುದ್ಧವಾಗಿದ್ದು ಕೋಣೆಯಗಂಗನನ್ನು ಇಮ್ಮಡಿ ಬೂತುಗನೆಂದು ಗುರುತಿಸಬೇಕಾಗುತ್ತದೆ. ಈಗ ತಿಳಿದಿರುವಂತೆ ರಾಚಮಲ್ಲನ ಆಳಿಕೆಯಲ್ಲಿ ಕೊನೆಯ ವರ್ಷ ಸುಮಾರು ಕ್ರಿ. ಶ. ೯೩೩. ಆದ್ದರಿಂದ ಈ ಶಾಸನದ ಕಾಲ ಅದಕ್ಕಿಂತ ಒಂದೆರಡು ವರ್ಷಗಳು ಈಚಿನದು ಎಂದರೆ ಕ್ರಿ. ಶ. ಸು. ೯೩೫ ಎಂದಿಟ್ಟುಕೊಳ್ಳಬಹುದು. ಕೋಣೆಯಗಂಗನೇ ಬೂತುಗನೆಂದು ಖಚಿತವಾಗಿ ಗುರುತಿಸಲು ಬಾರದೆಂಬುದನ್ನು ನಾವು ನೆನಪಿನಲ್ಲಿಡಬೇಕು. ಇದನ್ನು ಒಪ್ಪಿದಲ್ಲಿ ಮುಮ್ಮಡಿ ರಾಚಮಲ್ಲನಿಗೆ ಗಂಗವಜ್ರನೆಂಬ ಬಿರುದಿದ್ದಿತೆಂದು ನಾವು ಹೇಳಬಹುದು. ವದ್ದೆಗ ಎಂಬುದು ಮುಮ್ಮಡಿ ಅಮೋಘವರ್ಷನ ಇನ್ನೊಂದು ಹೆಸರಾಗಿದೆ ಎಂಬುದೇ[2] ಹೀಗೆ ಗುರುತಿಸುವುದಕ್ಕೆ ಪೋಷಕವಾದ ವಿಷಯ. ಮುಂದೆ ಇಮ್ಮಡಿ ಮಾರಸಿಂಹನೂ ಇದೇ ಬಿರುದನ್ನೆ ಹೊಂದಿದ್ದನು.

೧೦ನೆಯ ಶತಮಾನಕ್ಕೆ ಸೇರಿದ ೧೯೦ನೆಯ ಶಾಸನವು ರಾಚಮಲ್ಲನ ಜಂಗಿನ ಸೇನಬೋವ ಸುಭಕರಯ್ಯನು ಮಂದಿಸಿದಂತೆ ತಿಳಿಸುತ್ತದೆ. ಇಲ್ಲಿ ಬರುವ ರಾಚಮಲ್ಲನು ಗಂಗವಂಶಕ್ಕೆ ಸೇರಿದ ಇಮ್ಮಡಿ ರಾಚಮಲ್ಲನಿರಬಹುದೇ ಎನ್ನಿಸುತ್ತದೆ. ಆದರೆ ಹೆಸರಿನ ಸಾದೃಶ್ಯ ಮತ್ತು ಕಾಲದ ಸರಿಹೊಂದಿಕೆಯನ್ನು ಬಿಟ್ಟರೆ ಇದಕ್ಕೆ ಬೇರೆ ಯಾವ ಆಧಾರಗಳೂ ಇಲ್ಲ.

ನಂ. ೧೮೬ ಒಂದು ತುಂಡು ಶಾಸನ. ಇದರಲ್ಲಿ ಗಂಗರಾಜ್ಯ ಮತ್ತು ಎಱೆಗಂಗನ ಮಹಾಮಾತ್ಯನಾದ ಗುಱಿಪಾಳನ ಹೆಸರುಗಳಿವೆ. ಈ ಶಾಸನದ ಕಾಲವಾದ ೧೦ನೆಯ ಶತಮಾನದಲ್ಲಿ ಒಂದನೆಯ ಬೂತುಗನ (ಸುಮಾರು ಕ್ರಿ.ಶ. ೮೮೩–೯೨೦) ಮಗ ಎಱೆಗಂಗನು ರಾಜನಾಗಿದ್ದನು. ಗುಱಿಪಾಳನ ಅಳಿಯನಾದ ನಾಗವರ್ಮನ ಮಗನನ್ನು ಕುರಿತಾದ ಈ ಶಾಸನದಲ್ಲಿ ಗುಱಿಪಾಳನು ನರಸಿಂಹಮಂತ್ರಿಯ ಅಳಿಯನೆಂದೂ ತಿಳಿಸಿದೆ. ಹೀಗೆ ಈ ಶಾಸನದಲ್ಲಿ ಗಂಗರಾಜನ ಇಬ್ಬರು ಮಂತ್ರಿಗಳ ಹೆಸರುಗಳು ತಿಳಿದುಬರುತ್ತವೆ.

ಇಮ್ಮಡಿ ಮಾರಸಿಂಹನನ್ನು ಬಹುವಾಗಿ ಹೊಗಳಿರುವ ೭೪ನೆಯ ಶಾಸನದ ಕೆಲಭಾಗ ಮುಕ್ಕಾಗಿದೆ. ಮಾರಸಿಂಹನ ಸಾಧನೆಗಳ ವಿವರ ಇದರಲ್ಲಿದೆ. ತನ್ನ ಅಧಿರಾಜನಾದ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಗೂರ್ಜರರ ಮೇಲೆ ನಡೆಸಿದ ಯುದ್ಧಗಳಲ್ಲಿ ಭಾಗವಹಿಸಿ ಗೂರ್ಜರಾಧಿರಾಜ ಎನ್ನಿಸಿಕೊಂಡನು ; ಅಲ್ಲನ ದರ್ಪವನ್ನಡಗಿಸಿದನು ; ಶಬರನಾಯಕನೆನಿಸಿದ ನರಗ ಮತ್ತು ವನವಾಸಿದೇಶದ ರಾಜನನ್ನೂ ಸೋಲಿಸಿದನು. ತನ್ನ ಶತ್ರುಗಳ ವಿರುದ್ಧ ಗೋಣೂರು, ಉಚ್ಚಂಗಿ, ಬನವಾಸಿ, ಪಾಭಸೆಯಕೋಟೆ ಮುಂತಾದ ಕಡೆಗಳಲ್ಲಿ ನಡೆಸಿದ ಯುದ್ಧಗಳಲ್ಲಿ ಜಯಗಳಿಸಿದನು ; ಚಾಲುಕ್ಯ ರಾಜಾದಿತ್ಯನನ್ನು ನಿರ್ಮೂಲಮಾಡಿದನು ; ಇಂದ್ರರಾಜನಿಗೆ ಪಟ್ಟಗಟ್ಟಿದನು ; ಮತ್ತು ವಜ್ಜಳನನ್ನು ಸೋಲಿಸಿದನು. ಈ ಎಲ್ಲ ಸಾಧನೆಗಳಲ್ಲೂ ಈತನಿಗೆ ಮಂತ್ರಿಯಾಗಿದ್ದ ಚಾಮುಂಡರಾಯನ ನೆರವು ಬಹಳವಾಗಿ ಲಭಿಸಿತ್ತು.

ಮುಮ್ಮಡಿ ಕೃಷ್ಣನ ಮೈದುನನೂ ಮಾಂಡಲಿಕನೂ ಆಗಿದ್ದ ಮಾರಸಿಂಹನು, ಆತನ ಮರಣಾನಂತರ—ಇಮ್ಮಡಿ ಕಕ್ಕನು ಚಾಲುಕ್ಯ ಇಮ್ಮಡಿ ತೈಲಪನಿಂದ ಸೋಲನ್ನನುಭವಿಸಿದ ಮೇಲೆ—ರಾಷ್ಟ್ರಕೂಟರ ಅರಸೊತ್ತಿಗೆಯನ್ನುಳಿಸಲು ವ್ಯರ್ಥಪ್ರಯತ್ನ ನಡೆಸಿದುದು ವಿದಿತವೇ ಇದೆ. ಬಂಕಾಪುರದಲ್ಲಿ ನಾಲ್ಪಡಿ ಇಂದ್ರನಿಗೆ ಪಟ್ಟಗಟ್ಟಿದನು. ಆದರೆ ಅವನ ಪ್ರಯತ್ನ ಸಾಗಲಿಲ್ಲ.

ಚಾಮುಂಡರಾಯ

ಚಾಮುಂಡರಾಯನು ಗೊಮ್ಮಟೇಶ್ವರ ಬೃಹನ್ಮೂರ್ತಿಯನ್ನು ಶ್ರವಣಬೆಳಗೊಳದಲ್ಲಿನ ದೊಡ್ಡಬೆಟ್ಟದ ಮೇಲೆ ಸ್ಥಾಪಿಸಿದುದರ ಮೂಲಕ ಖ್ಯಾತಿವೆತ್ತ ಪುರುಷನು. ಈತನು ಇಮ್ಮಡಿ ಮಾರಸಿಂಹನಿಗೂ, ನಾಲ್ಪಡಿ ರಾಚಮಲ್ಲನಿಗೂ

[1] Introduction, p. 43

[2] A. S. Altekar ; *Rāshṭrakūṭas and their times* (2nd Ed. 1967) p. 114–15 ; ಎಂ. ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ ; ಕರ್ನಾಟಕದ ಇತಿಹಾಸ ದರ್ಶನ (1970) ಪು. 57-58

ಮಂತ್ರಿಯಾಗಿದ್ದನೆಂಬುದು ತಿಳಿದಿದೆ. ಈತನ 'ಚಾಮುಂಡರಾಯ ಪುರಾಣ'ದಿಂದ ಈತನಿಗೆ ಸಂಬಂಧಿಸಿದ ಹಲವಾರು ವಿವರಗಳೂ ತಿಳಿದಿವೆ. ಈತನು ಬ್ರಹ್ಮಕ್ಷತ್ರ ಕುಲೋತ್ಪನ್ನನೆಂಬುದು ೩೮೮ನೆಯ ಶಾಸನದಿಂದ ಸ್ಪಷ್ಟವಾಗುತ್ತದೆ. ನಾಲ್ವಡಿ ಇಂದ್ರನ ಪರವಾಗಿ ತನ್ನ ಸ್ವಾಮಿಯಾದ ಇಮ್ಮಡಿಮಾರಸಿಂಹನು ಪಾತಾಳಮಲ್ಲಾನುಜನಾದ ವಜ್ವಳ, ನೊಳಂಬರು, ರಣಸಿಂಗ ರಾಜ ಮುಂತಾದವರ ವಿರುದ್ಧ ಹೂಡಿದ ಕದನಗಳಲ್ಲಿ ಪಾಲ್ಗೊಂಡ ಈತನು ಶೂರಸೇನಾನಿಯೆಂದು ಶಾಸನದಲ್ಲಿ ವರ್ಣಿತನಾಗಿದ್ದಾನೆ.

ಈ ಶತ್ರುಗಳಲ್ಲಿ ವಜ್ವಳ ಎಂಬಾತನು ಶಿಲಾಹಾರ ಮನೆತನಕ್ಕೆ ಸೇರಿದ ಒಬ್ಬ ಮಾಂಡಲಿಕನೆಂದು ಹೇಳಲಾಗಿದೆ. ಆದರೆ ಇದಕ್ಕೆ ಬದಲಾಗಿ ಚಿತ್ತೂರು ಜಿಲ್ಲೆಯ ಪುಂಗನೂರಿನ ಸುತ್ತಲಿನ ಪುಲಿನಾಡನ್ನು ಆಳುತ್ತಿದ್ದ ಅದೇ ಹೆಸರಿನ ಒಬ್ಬ ನಾಯಕನಿವನೆಂದೂ, ಮೊದಲು ಈತನು ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಸಾಮಂತನಾಗಿದ್ದು, ತದನಂತರ ಸ್ವಾತಂತ್ರ್ಯವನ್ನು ಘೋಷಿಸಿದ ಕಾರಣ ಮಾರಸಿಂಹನಿಂದ ಸದೆಬಡೆಯಲ್ಪಟ್ಟನೆಂದೂ ಹುಲ್ಷ್‌ರವರು ಅಭಿಪ್ರಾಯ ಪಟ್ಟಿದ್ದಾರೆ.[1] ನೊಳಂಬರ ಮಾಂಡಲಿಕನು ಇಮ್ಮಡಿ ಪೊಳಲ್ಚೋರನೋ, ವೀರಮಹೇಂದ್ರನೋ ಆಗಿರಬಹುದು.

ಚಾಮುಂಡರಾಯನು ಇವರುಗಳಲ್ಲದೆ ಗಂಗಮಾರಸಿಂಹನು ಸೋಲಿಸಿದನೆನ್ನಲಾದ ಮೇಲೆ ಹೇಳಿದ ಇತರರ ವಿರುದ್ಧವೂ ಕದನವನ್ನು ಹೂಡಿದನು. ಅವರಲ್ಲಿ ಅಲ್ಲ ಮತ್ತು ರಾಜಾದಿತ್ಯರೆಂಬಿಬ್ಬರು ನಾಯಕರನ್ನು ಇದುವರೆಗೂ ಖಚಿತವಾಗಿ ಗುರುತಿಸಲಾಗಿಲ್ಲ. ಅಲ್ಲನು ಯಾರೆಂಬುದನ್ನು ಫ್ಲೀಟ್‌ರವರು ಹೇಳಲಾರದೆ ಹೋದರು.[2] ರೈಸ್‌ರವರು ಆ ಹೆಸರನ್ನು 'ದಲ್ಲ' ಎಂದು ಓದಿದ್ದಾರೆ. ಆದರೆ ರನ್ನನ ಅಜಿತಪುರಾಣವು ಇವನನ್ನು ಗುರುತಿಸುವಲ್ಲಿ ನೆರವಾಗುವ ಸೂಚನೆ ಇದೆ.[3] ಮಲ್ಲಪನ ಮಗಳಾದ ಅತ್ತಿಮಬ್ಬೆಯು ವಾಜಿವಂಶದ ದಲ್ಲಪನ ಮಗನಾದ ನಾಗದೇವನನ್ನು ಮದುವೆಯಾಗಿದ್ದುದಾಗಿ ಆ ಗ್ರಂಥದಿಂದ ತಿಳಿದುಬರುತ್ತದೆ. ಕ್ರಿ. ಶ. ೧೦೦೭ರ ಲಕ್ಕುಂಡಿ ಶಾಸನದಲ್ಲಿ[4] ಅತ್ತಿಮಬ್ಬೆಯ ಪತಿ ನಾಗದೇವನು ವಾಜಿಕುಲದ ಧಲ್ಲನ ಮಗನೆಂದು, ಚಾಲುಕ್ಯ ಇಮ್ಮಡಿ ತೈಲನ ಭುಜಾದಣ್ಡನೆಂದೂ ಹೇಳಿರುವುದು ಇದನ್ನು ಸ್ಥಿರಪಡಿಸುತ್ತದೆ. ಈ ಧಲ್ಲನೇ ಪ್ರಕೃತ ಶಾಸನದ ಅಲ್ಲನಾಗಿರಬಹುದು. ತೈಲನಿಗೆ ಒತ್ತಾಸೆಯಾಗಿ ನಿಂತ ಧಲ್ಲನು ಮುಮ್ಮಡಿ ಕೃಷ್ಣನ ಕಡುವಿರೋಧಿಯಾಗಿದ್ದುದು ಸ್ಪಷ್ಟ. ಮುಮ್ಮಡಿ ಕೃಷ್ಣನ ಕಡೆಯ ವರ್ಷಗಳಲ್ಲಿ ರಾಷ್ಟ್ರಕೂಟರ ಬಲ ಕುಂದುತ್ತಿದ್ದು. ರಾಜ್ಯದೊಳಗೇ ವಿರೋಧಿಗಳ ಬಲ ತಲೆಯೆತ್ತುತ್ತಿದ್ದಾಗ ಕೃಷ್ಣನ ಅತ್ಯಂತ ನಿಷ್ಠಾವಂತ ಸಾಮಂತನಾಗಿದ್ದ ಮಾರಸಿಂಹನು ಇವರ ದಂಗೆಗಳನ್ನು ಅಡಗಿಸಲು ಶಕ್ತಿಮೀರಿ ಪ್ರಯತ್ನಿಸಿದುದು ಸ್ವಾಭಾವಿಕವೇ. ತನ್ನ ಸ್ವಾಮಿಯ ಪರವಾಗಿ ಚಾಮುಂಡರಾಯನು ಈ ಕದನಗಳಲ್ಲಿ ಭಾಗವಹಿಸಿದನು.

ಮಾರಸಿಂಹನು ಸೋಲಿಸಿದ ಇನ್ನೊಬ್ಬ ವ್ಯಕ್ತಿ ಚಾಲುಕ್ಯವಂಶಚೂಡಾಮಣಿ ಎನಿಸಿಕೊಂಡ ರಾಜಾದಿತ್ಯ. ರಾಜಾದಿತ್ಯನ ಕ್ರಿ. ಶ. ೯೬೧ರ ಹಿರೇಕೋಗಿಲೂರು ತಾಮ್ರಶಾಸನದಿಂದ[5] ಅವನು ಮುಮ್ಮಡಿ ಕೃಷ್ಣನ ಸಾಮಂತನೆಂದೂ ಚೋಳ, ಚೇರ ಮತ್ತು ಪಾಂಡ್ಯರ ಮೇಲಿನ ಯುದ್ಧಗಳಲ್ಲಿ ಭಾಗವಹಿಸಿದ್ದನೆಂದೂ ತಿಳಿದುಬರುತ್ತದೆ. ಮೇಲ್ಪಾಟಿಯಲ್ಲಿ ಬೀಡು ಬಿಟ್ಟಿದ್ದಾಗ ಅವನು ದತ್ತಿ ಬಿಟ್ಟುದನ್ನು ಈ ಶಾಸನ ತಿಳಿಸುತ್ತದೆ. ಈ ಇಮ್ಮಡಿ ರಾಜಾದಿತ್ಯನು ಚಾಲುಕ್ಯ ವಂಶಕ್ಕೆ ಸೇರಿದವನು; ಅವನಿಗೆ ಇಬ್ಬರು ರಾಣಿಯರು–ಹಿರಿಯವಳು ಚಕ್ರವರ್ತಿಯ ಮಗಳು, ಕಿರಿಯವಳು ಗಂಗಗಾಂಗೇಯನ ಮಗಳು. ಆದ್ದರಿಂದ ಈತನು ಕ್ರಿ. ಶ. ೯೫೧ರವರೆಗೂ ರಾಷ್ಟ್ರಕೂಟರ ನಿಷ್ಠಸಾಮಂತನಾಗಿದ್ದನೆಂಬುದು ವ್ಯಕ್ತವಾಗುತ್ತದೆ. ಕ್ರಿ. ಶ. ೯೫೭ರಲ್ಲಿ ಪಶ್ಚಿಮ ಚಾಲುಕ್ಯರ ಇಮ್ಮಡಿ ತೈಲಪನೇ ಮುಮ್ಮಡಿ ಕೃಷ್ಣನ ಸಾಮಂತನಾಗಿದ್ದುದು ವ್ಯಕ್ತಪಟ್ಟಿದೆ.[6] ಆಗ ರಾಜನು ಮೇಲ್ಪಾಟಿಯಲ್ಲಿ ಆಳುತ್ತಿದ್ದನು. ಆದರೆ ಮುಮ್ಮಡಿ ಕೃಷ್ಣನು ಗತಿಸುತ್ತಿದ್ದಂತೆಯೇ ಈ ಸಾಮಂತನು ದಂಗೆಯೆದ್ದು ಕಡೆಗೆ ರಾಷ್ಟ್ರಕೂಟರನ್ನು ಮೂಲೆಗೊತ್ತಿದನು. ಈ ದಂಗೆಯಲ್ಲಿ ಮೇಲೆ ತಿಳಿಸಿದ ರಾಜಾದಿತ್ಯನು ಇವನಿಗೆ ಸಹಾಯ ಮಾಡಿದ್ದಿರಬೇಕು; ಮಾರಸಿಂಹನು ಅವನನ್ನೆದುರಿಸಿದುದು ಸ್ವಾಭಾವಿಕ. ಆದ್ದರಿಂದ ಪ್ರಕೃತ ಶಾಸನದ ರಾಜಾದಿತ್ಯನು ಹಿರೇಕೋಗಿಲೂರು ತಾಮ್ರ ಶಾಸನದ ರಾಜಾದಿತ್ಯನೇ ಆಗಿರುವಂತೆ ತೋರುತ್ತದೆ.

---

[1] ನೆಲಮಂಗಲ ಲಕ್ಷ್ಮೀನಾರಾಯಣರಾವ್ ಮತ್ತು ಆರ್. ಎಸ್. ಪಂಚಮುಖಿ: ಕರ್ಣಾಟಕದ ಅರಸು ಮನೆತನಗಳು, ಪು. ೧೯೭, ಟಿಪ್ಪಣಿ ೭

[2] *Ep. Ind.*, Vol. V, p. 170, note 2

[3] ಆಶ್ವಾಸ ೩೮ನೆಯ ಪದ್ಯದ ಮುಂದಿನ ಗದ್ಯಭಾಗ

[4] *S. I. I.*, Vol. XI, pt. I, Nos. 52–53

[5] *Mysore Archaeological Reports*, 1935, p 114

[6] *A. R. S. I. E.*, 1933-34, Bk. 172

೧೫೦ನೆಯ ಶಾಸನದಿಂದ ಚಾಮುಂಡರಾಯನಿಗೆ ಜಿನದೇವಣನೆಂಬ ಒಬ್ಬ ಮಗನಿದ್ದನೆಂದು ತಿಳಿದುಬರುತ್ತದೆ. ಈತನು ಅಜಿತಸೇನಮುನಿಯ ಶಿಷ್ಯನು. ಬೆಳ್ಗೊಳದಲ್ಲಿ ಜಿನಗೃಹವೊಂದನ್ನು ಈತನು ಕಟ್ಟಿಸಿದನೆಂದು ಆ ಶಾಸನ ತಿಳಿಸಿದೆ.

ಹತ್ತನೆಯ ಶತಮಾನದ ೨೭೨, ೨೭೩ ಮತ್ತು ೨೭೬ನೆಯ ಶಾಸನಗಳು ಬಾಹುಬಲಿಮೂರ್ತಿಯನ್ನು 'ಚಾಮುಣ್ಡರಾಜಂ ಮಾಡಿಸಿದಂ' ಎಂದು ಹೇಳುತ್ತವೆ. ೧೨ನೆಯ ಶತಮಾನಕ್ಕೆ ಸೇರಿದ ಬೊಪ್ಪಣಪಂಡಿತನ 'ಗೊಮ್ಮಟಜಿನೇಂದ್ರಸ್ತವಶಾಸನ' (ನಂ. ೩೩೬)ದಲ್ಲಿ ಈ ಮೂರ್ತಿಯನ್ನು ಚಾಮುಣ್ಡರಾಯನು ಸ್ಥಾಪಿಸಿದನೆಂದು ಸ್ಪಷ್ಟವಾಗಿ ಹೇಳಿದೆ. ಆದರೆ, ಚಿಕ್ಕಬೆಟ್ಟದ ಮೇಲಿನ ಚಾಮುಂಡರಾಯ ಬಸದಿಯನ್ನು ಸಹ ಈತನೇ ಕಟ್ಟಿಸಿದನೆಂಬ ವಿಷಯದಲ್ಲಿ ಮಾತ್ರ ಶ್ರೀ ನರಸಿಂಹಾಚಾರ್ಯರು ಹೊಂದಿದಷ್ಟು ಖಚಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲ.[1] ೨೭೨, ೨೭೩, ೨೭೬ರ ಶಾಸನಗಳಂತಹುದೇ ಶಾಸನ ಈ ಬಸದಿಯ ಮುಂಭಾಗದ ಜಗತಿಯ ಉಭಯಪಾರ್ಶ್ವಗಳ ಗೋಡೆಯ ಕೆಳಗಣ ದಿಂಡಿನ ಮೇಲಿದೆ. 'ಶ್ರೀ ಚಾಮುಣ್ಡರಾಜಂ ಮಾಡಿಸಿದಂ' ಎಂಬ ಈ ಶಾಸನವನ್ನು ಇತರ ಶಾಸನಗಳಂತೆ ಕ್ರಿ. ಶ. ೯೮೨ಕ್ಕೆ ಅನ್ವಯಿಸಲಾಗದು. ಈ ಶಾಸನದ ಲಿಪಿ ಅವುಗಳಿಗಿಂತ ನಂತರದ ಕಾಲದ್ದು. ಬಹುಶಃ ೧೧ನೆಯ ಶತಮಾನಕ್ಕೆ ಸೇರಬಹುದಾದದ್ದು. ಇದೇ ಬಸದಿಯ ಪಾರ್ಶ್ವತೀರ್ಥಂಕರನ ವಿಗ್ರಹದ ಪೀಠದ ಮೇಲಿನ ೧೫೦ನೆಯ ಶಾಸನದಿಂದ ಬೆಳ್ಗೊಳದಲ್ಲಿ ಚಾಮುಂಡರಾಯನ ಮಗನಾದ ಜಿನದೇವಣನು ಜಿನಗೃಹವನ್ನು ಕಟ್ಟಿದ ವಿಷಯ ತಿಳಿದಿದೆ ಎಂದು ಮೊದಲೇ ಹೇಳಿದ್ದೇವೆ. ಈ ಶಾಸನ ಸಹ ೧೧ನೆಯ ಶತಮಾನದ್ದೇ. ಆತನು ಕಟ್ಟಿಸಿದ ಜಿನಗೃಹ ಯಾವುದು ಎಂಬುದು ತಿಳಿಯದು. ಈ ಬಸದಿಯೊಳಗಡೆಯೇ ಇರುವ ನೇಮೀಶ್ವರನ ವಿಗ್ರಹದ ಪೀಠದಲ್ಲಿ ಸುಮಾರು ೧೨ನೆಯ ಶತಮಾನಕ್ಕೆ ಸೇರಿದ ಶಾಸನವೊಂದನ್ನು ಕೆತ್ತಲಾಗಿದೆ. ಗಂಗರಾಜನ ಮಗನಾದ ಏಚಣನು ಬೊಪ್ಪಣ ಚೈತ್ಯಾಲಯವೆಂಬ ಜಿನಾಲಯವನ್ನು ಕಟ್ಟಿಸಿದನೆಂದು ಇದು ಹೇಳುತ್ತದೆ. ಈ ಶಾಸನದ ಮೊದಲೆರಡು ಸಾಲುಗಳು ಮಾತ್ರ ನರಸಿಂಹಾಚಾರ್ಯರ ದೃಷ್ಟಿಗೆ ಬಿದ್ದಿತ್ತು. ಅವರಿಗೆ ಕಾಣದಿದ್ದ ಮೂರನೆಯ ಸಾಲಿನಲ್ಲಿ 'ಬಿರುದರೂವಾರಿ ಮುಖತಿಳಕ' ನೆಂಬ ಬಿರುದನ್ನು ಪಡೆದಿದ್ದ ರೂವಾರಿ ಹೊಯ್ಸಳಾಚಾರಿಯ ಮಗ ಗಙ್ಗಾಚಾರಿವರ್ಧಮಾನಾಚಾರಿಯ ಹೆಸರಿದೆ (ಶಾಸನ ೧೪೯).

ಇದೇ ರೂವಾರಿಯು ಕಾಲಸೂಚಿತವಾಗಿರುವ ಕೆಲವು ಶಾಸನಗಳಲ್ಲಿ ಉಲ್ಲೇಖಗೊಂಡಿದ್ದಾನೆ. ಕ್ರಿ.ಶ. ೧೧೨೯, ೧೧೧೫ ಮತ್ತು ೧೧೧೯ನೆಯ ವರ್ಷಗಳ ಕ್ರಮವಾಗಿ ೭೭,೧೫೬ ಮತ್ತು ೫೪೭ನೆಯ ಶಾಸನಗಳಲ್ಲಿ ಈತನನ್ನು ಗಂಙ್ಗಾಚಾರಿ ಎಂದೂ ೮೨, ೧೩೫ ಮತ್ತು ೧೩೬ನೆಯ, ಕ್ರಿ.ಶ. ೧೧೧೮, ೧೧೨೩ ಮತ್ತು ೧೧೨೦ನೆಯ ವರ್ಷಗಳ ಶಾಸನಗಳಲ್ಲಿ ವರ್ಧಮಾನಾಚಾರಿ ಎಂದೂ ಕರೆಯಲಾಗಿದೆ. ಆದರೆ ೧೪೯ನೆಯ ಶಾಸನದಲ್ಲಿ ಗಂಙ್ಗಾಚಾರಿ ವರ್ಧಮಾನಾಚಾರಿಯು ಹೊಯ್ಸಳಾಚಾರಿಯ ಮಗನೆಂದೂ, ೧೩೬ನೆಯ ಶಾಸನದಲ್ಲಿ ವರ್ಧಮಾನಾಚಾರಿಯು ಇದೇ ಹೊಯ್ಸಳಾಚಾರಿಯ ಮಗನೆಂದೂ ಹೇಳಿದೆ. ಇವೆಲ್ಲವುಗಳಲ್ಲಿಯೂ ಈತನಿಗೆ ಒಂದೇ ಬಿರುದು ಇದೆ. ಆದ್ದರಿಂದ ಗಂಗಾಚಾರಿ ಎಂಬುದು ವರ್ಧಮಾನಾಚಾರಿಯ ಇನ್ನೊಂದು ಹೆಸರೆಂಬುದು ಸ್ಪಷ್ಟ. ಇವುಗಳಿಂದೆಲ್ಲ ಚಾಮುಂಡರಾಯ ಬಸದಿಯ ಕೆಲವು ಭಾಗಗಳಾದರೂ, ನಂತರ, ಸುಮಾರು ೧೨ನೆಯ ಶತಮಾನದಲ್ಲಿ ಕಟ್ಟಲಾದವುಗಳೆಂದು ತೀರ್ಮಾನಿಸಬಹುದು.

ಚಾಮುಂಡರಾಜ ಎಲ್ಲಿಯವರೆಗೆ ಜೀವಿಸಿದ್ದನೆಂಬುದು ತಿಳಿಯದು. ಹತ್ತನೆಯ ಶತಮಾನದ ಅಂತ್ಯದವರೆವಿಗೂ ಬದುಕಿದ್ದನೆಂದು ಭಾವಿಸಬಹುದು. ೧೧ನೆಯ ಶತಮಾನದ ಮೊದಲ ದಶಕದಲ್ಲಿ ಈತನ ಮಗನಾದ ಜಿನದೇವಣನು ಚಾಮುಂಡ ರಾಯ ಬಸದಿಯ ಗರ್ಭಗೃಹವನ್ನು ಕಟ್ಟಿಸಿರಬಹುದೆಂಬುದು ೧೫೦ನೆಯ ಶಾಸನದಿಂದ ವ್ಯಕ್ತವಾಗುತ್ತದೆ. ಇದಕ್ಕೆ ನಂತರ ಇತರ ಭಾಗಗಳನ್ನು ಸೇರಿಸಿರಬೇಕು. ಆದ್ದರಿಂದ ಸಾಂಪ್ರದಾಯಿಕವಾಗಿ ಕರೆಯಲಾದ ಚಾಮುಂಡರಾಜ ಬಸದಿಯನ್ನು ಕಟ್ಟಿಸಿದಾತನು ಚಾಮುಂಡರಾಯನಲ್ಲ. ೧೫೧ನೆಯ ಪಟ್ಟಿಕೆಯ ಶಾಸನಗಳನ್ನು, ೧೨ನೆಯ ಶತಮಾನದಲ್ಲಿನ ಯಾರೋ ಬರೆದಿರಬೇಕು. ಆ ವೇಳೆಗೆ ಚಾಮುಂಡರಾಯನ ಕೀರ್ತಿ ಅಮರವಾಗಿತ್ತು.

ರಾಷ್ಟ್ರಕೂಟರು

ಈ ಸಂಪುಟದಲ್ಲಿ ರಾಷ್ಟ್ರಕೂಟರ ಎರಡು ಶಾಸನಗಳಿವೆ. ಶ್ರೀವಲ್ಲಭಮಹಾರಾಜನ ಮಗ ರಣಾವಲೋಕ ಕಂಬಯ್ಯನ ಆಳ್ವಿಕೆಗೆ ಸೇರಿದ ೩೮ನೆಯ ಶಾಸನ ತೃಟಿತವಾಗಿದೆ. ಭೂಮಿದಾನವನ್ನು ಈ ಶಾಸನ ಸೂಚಿಸುವಂತೆ ತೋರುತ್ತದೆ. ಕ್ರಿ.ಶ. ೮ನೆಯ ಶತಮಾನದ ಈ ಶಾಸನದಲ್ಲಿ ಭೂಮಿಯ ಎಲ್ಲೆಯನ್ನು ಹೇಳಿದೆ....ಸೇನ ಅಡಿಗಳ್ ಎಂಬ ಜೈನಯತಿಯು ಈ ದಾನವನ್ನು ಪಡೆದಂತೆ ತೋರುತ್ತದೆ. ಗಂಗವಾಡಿಯನ್ನು ಗೆದ್ದು ಶಿವಮಾರನನ್ನು ಸೆರೆಯಲ್ಲಿಟ್ಟಮೇಲೆ ಧೃವನು ತನ್ನ ಮಗ ಕಂಬಯ್ಯನನ್ನು

[1] Introduction, p. 6

ಈ ಪ್ರಾಂತಕ್ಕೆ ಅಧಿಪತಿಯನ್ನಾಗಿ ನೇಮಿಸಿದುದು ವಿದಿತ. ಸ್ತಂಭನೆಂದು ಹೆಸರಿರುವ ಈ ರಾಜಕುಮಾರನಿಗೆ ಸೇರಿದುದು ಈ ಶಾಸನ. ಈ ಶಾಸನದಲ್ಲಿ ಮನಸಿಜನ ರಾಣಿ–ಬಹುಶಃ ಬೆನೆಎತ್ತಿ–ಯನ್ನು ಉಲ್ಲೇಖಿಸಿದೆ. ಆದರೆ ಈ ಮನಸಿಜ ಯಾರೆಂಬುದು ತಿಳಿಯದು.

ಇನ್ನೊಂದು ಶಾಸನ (ನಂ. ೧೬೩) ರಾಷ್ಟ್ರಕೂಟ ಯುವರಾಜ ನಾಲ್ಕನೆಯ ಇಂದ್ರನಿಗೆ ಸೇರಿದುದು. ಇಂದ್ರನ ನೆನಪಿಗಾಗಿ ನಿಲ್ಲಿಸಿರುವ ಈ ಶಾಸನದಲ್ಲಿ ಅವನ ಪ್ರಶಸ್ತಿ ಇದೆ. ಅವನು ಕೃಷ್ಣರಾಜೇಂದ್ರನ ಮಗನ ಮಗ, ಗಂಗಗಾಂಗೇಯನ ಮಗಳ ಮಗ ಮತ್ತು ರಾಜಚೂಡಾಮಣಿಯ ಅಳಿಯ. ಕಂದುಕಕ್ರೀಡೆಯಲ್ಲಿ ಈ ರಾಜನು ನಿಷ್ಣಾತನೆಂದು ಶಾಸನ ಸಾರುತ್ತದೆ. ಶಾಸನದಲ್ಲಿ ಸುಕರ, ದುಷ್ಕರ, ವಿಷಮ, ವಿಷಮದುಷ್ಕರ ಮೊದಲಾದ ಚಾರಣೆಗಳನ್ನು, ಒಳಗೂ–ಹೊರಗೂ, ಬಲಕ್ಕೂ–ಎಡಕ್ಕೂ ಚಾರಿಸುವುದರಲ್ಲಿ ಇಂದ್ರರಾಜನು ನಿಷ್ಣಾತನೆಂದೂ ನಾಲ್ಕು ಕಡೆಯೂ ನಡೆಸಿದ ಇಂಥ ಚಾರಣೆಗಳು ಒಟ್ಟು ೩೩೮ ಆಗುವುದೆಂದೂ ತಿಳಿಸಿದೆ. ಮಂಡಲಮಾಲೆ, ತ್ರಿಮಂಡಲ, ಯಾಮುಕಮಂಡಲ, ಅರ್ಧಚಂದ್ರ, ಸರ್ವತೋಭದ್ರ, ಉದ್ದವಳ, ಚಕ್ರವ್ಯೂಹ ಮೊದಲಾದ ಚಾರಣೆಗಳಲ್ಲಿಯೂ ಇಂದ್ರರಾಜನು ನುರಿತವನೆಂದೂ ಶಾಸನ ವಿಶದಪಡಿಸುತ್ತದೆ. ಇದರಿಂದ ೧೦ನೆಯ ಶತಮಾನದ ಹೊತ್ತಿಗೆ ಈ ಕಂದುಕಕ್ರೀಡೆಯು (ಪೋಲೋ) ರಾಜಮನೆತನಗಳಲ್ಲಿ ಅತಿ ಮೆಚ್ಚಿಕೆಯ ಆಟವಾಗಿತ್ತೆಂದೂ, ಅದರಲ್ಲಿ ಹಲವು ಬಗೆಯ ಕೌಶಲ್ಯವನ್ನು ಅಳವಡಿಸಲಾಗಿತ್ತೆಂದೂ ತಿಳಿಯಬಹುದು. ಇಂದ್ರನು ಕ್ರಿ.ಶ. ೯೮೨ ಮಾರ್ಚ್ ೨೦ರಂದು ಸಲ್ಲೇಖನವನ್ನು ಆಚರಿಸಿ ಗತಿಸಿದುದಾಗಿ ಶಾಸನವು ತಿಳಿಸುತ್ತದೆ.

ಇಮ್ಮಡಿ ಮಾರಸಿಂಹನು ಈ ರಾಜಕುಮಾರನನ್ನು ರಾಷ್ಟ್ರಕೂಟ ಸಿಂಹಾಸನದ ಮೇಲೆ ಕೂಡಿಸಲು ಸರ್ವಪ್ರಯತ್ನ ಮಾಡಿದುದು, ಆದರೆ ಅವೆಲ್ಲವೂ ವಿಫಲವಾದುದೂ ವಿದಿತ. ಬಂಕಾಪುರದಲ್ಲಿ ಈತನಿಗೆ ಕ್ರಮಬದ್ಧವಾದ ಪಟ್ಟಾಭಿಷೇಕೋತ್ಸವವೇನೋ ನೆರವೇರಿತು. ಆದರೆ ಮಾರಸಿಂಹನು ಕ್ರಿ.ಶ. ೯೭೪ರಲ್ಲಿ ಬಂಕಾಪುರದಲ್ಲಿ ಕಾಲವಾದರೆ ಇಂದ್ರನು ಕ್ರಿ.ಶ. ೯೮೨ರಲ್ಲಿ ಶ್ರವಣಬೆಳಗೊಳದಲ್ಲಿ ತೀರಿಕೊಂಡುದಾಗಿ ಹೇಳಲಾಗಿದೆ. ಆದರೆ ಶಾಸನದಲ್ಲಿ ಇಂದ್ರನು ಎಲ್ಲಿ ತೀರಿಕೊಂಡನೆಂದು ತಿಳಿಸಿಲ್ಲ. ಡಾ. ದೇಸಾಯಿಯವರು ಬಂಕಾಪುರವು ೧೨ನೆಯ ಶತಮಾನದಲ್ಲಿಯೂ ಇಂದ್ರವಲ್ಲಭನ ರಾಜಧಾನಿಯೆಂದು ಪ್ರಸಿದ್ಧವಾಗಿದ್ದುದರಿಂದ ಇಂದ್ರನು ತನ್ನ ಕೊನೆಗಾಲದವರೆಗೂ ಅಲ್ಲಿಯೇ ಇದ್ದಿರಬೇಕೆಂದು ಸೂಚಿಸಿದ್ದಾರೆ.[1] ಶ್ರವಣಬೆಳಗೊಳದ ಶಾಸನದಲ್ಲಿ ಅವನು ಎಲ್ಲಿ ತೀರಿಕೊಂಡನೆಂದು ತಿಳಿಸಿಲ್ಲ. ಈ ಶಾಸನಗಂಬದ ಪಶ್ಚಿಮ ಮುಖದ ಮೇಲಿರುವ ಕೊನೆಯ ಭಾಗವು ಹೇಮಾವತಿಯಲ್ಲಿರುವ ಒಂದು ಕಲ್ಲಿನ ಮೇಲೂ ಇರುವುದು ಕುತೂಹಲಕಾರಿಯಾಗಿದೆ.[2] ಇದು ಇಂದ್ರನು ಹೇಮಾವತಿಯಲ್ಲಿ ತೀರಿಕೊಂಡಿರಬೇಕೆಂಬ ಒಂದು ಊಹೆಗೆ ಎಡೆಕೊಟ್ಟಿದೆ. ಶಾಸನದ ಪ್ರತಿಯೊಂದು ಅಲ್ಲಿ ದೊರೆತಿರುವುದೇ ಈ ಊಹೆಗೆ ಕಾರಣ. ಆದರೆ ಇದು ಸಹೇತುಕವಾಗಿಲ್ಲ.

೧೬೪ನೆಯ ಶಾಸನವೂ ಕ್ರಿ. ಶ. ೯೮೨ನೆಯ ವರ್ಷದ್ದೆಂದೇ ಹೇಳಬಹುದು. ಇದರಲ್ಲಿ ನಮೂದಿಸಲಾದ ರಾಜಚೂಡಾಮಣಿಯು ಇಂದ್ರನ ಶಾಸನದಲ್ಲಿ (ನಂ. ೧೬೩) ತಿಳಿಸಿರುವವನೇ ಆಗಿರಬಹುದು. ಆದರೆ ಇದು 'ಮಾವನಗಂಧಹಸ್ತಿ' ಮತ್ತು 'ಅಹವಶೌಂಡ' ಎಂದು ವರ್ಣಿತನಾದ ಪಿಟ್ಟುಗ (ಅಥವಾ ಪಿಟ್ಟ)ನ ಸಾವನ್ನು ತಿಳಿಸುತ್ತದೆ. ಇವರಿಬ್ಬರ ನಡುವೆ ಏನಾದರೂ ಸಂಬಂಧವಿದ್ದಿತೇ, ಹಾಗಿದ್ದಲ್ಲಿ ಅದೆಂತಹುದು ಎಂದು ಹೇಳಲು ಸಾಧ್ಯವಿಲ್ಲ.

ಚಾಲುಕ್ಯರು

೧೦ನೆಯ ಶತಮಾನಕ್ಕೆ ಸೇರಿದ ೧೮೮ನೆಯ ಶಾಸನವು ಚಗಭಕ್ಷಣ ಚಕ್ರವರ್ತಿ ಎಂಬ ಬಿರುದುಳ್ಳ ಗೊಗ್ಗಿ ಎಂಬುವನ ಹೆಸರನ್ನು ಹೇಳುತ್ತದೆ; ಬಹುಶಃ ಅವನಸಾವನ್ನು ಅದು ತಿಳಿಸಬಹುದು. ಹಿಂದಿನ ಅವೃತ್ತಿಯಲ್ಲಿ ಈತನು 'ಬಹುಶಃ ವರುಣದಲ್ಲಿರುವ ಎ. ಕ. III ಮೈಸೂರು ೩೦ನೆಯ ಶಾಸನದಲ್ಲಿ ಬರುವ ಅದೇ ಹೆಸರಿನ ಚಾಲುಕ್ಯನಾಯಕನೇ ಇರಬೇಕು' ಎಂದು ತಿಳಿಸಿದೆ. ಆದರೆ ಹೆಸರಿನ ಸಾದೃಶ್ಯವೊಂದನ್ನು ಬಿಟ್ಟರೆ ಈ ಹೇಳಿಕೆಗೆ ಬೇರೆ ಆಧಾರವಿಲ್ಲ. ಹೀಗೆ ಗುರುತಿಸುವುದಕ್ಕೆ ಇದು ಯಾವ ರೀತಿಯಲ್ಲಿಯೂ ಆಧಾರವಾಗಲಾರದು.

ಚಾಲುಕ್ಯವಂಶದ ರಾಜರಾದ ಜಯಸಿಂಹ ಮತ್ತು ಆಹವಮಲ್ಲರು ಜೈನ ಆಚಾರ್ಯರನ್ನು ಗೌರವಿಸಿದರೆಂದು ಹಿಂದೆಯೇ ತಿಳಿಸಿದೆ.

---

[1] *S. I. I.*, Vol. XV, Introduction; pp. ii–iii

[2] *E. C.*, Vol. XII, Si. 27

ಈ ಸಂಪುಟದಲ್ಲಿರುವ ಚಾಲುಕ್ಯರ ಶಾಸನಗಳೆಂದರೆ ನಂ. ೫೩೨, ೫೬೩ ಮತ್ತು ೫೬೮. ಇವು ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದುದಾದರೂ ಇವರ ಸಾಮಂತರಾಗಿದ್ದ ಹೊಯ್ಸಳ ಎಱೆಯಂಗ, ವಿಷ್ಣುವರ್ಧನ ಮತ್ತು ಒಂದನೆಯ ನರಸಿಂಹನಿಗೆ ಸೇರಿದುವು. ಇವರು ಎಲ್ಲರೀತಿಯಲ್ಲಿಯೂ ಸ್ವತಂತ್ರರಾಗಿದ್ದರೂ ಹೆಸರಿಗೆ ಮಾತ್ರ ಚಾಲುಕ್ಯರಿಗೆ ವಿಧೇಯರಾಗಿದ್ದರು. ಆದ್ದರಿಂದ ಈ ಶಾಸನಗಳ ವಿಷಯವು ಮುಂದೆ ಬರುತ್ತದೆ.

ಪ್ರಾಸಂಗಿಕವಾಗಿ ಇಲ್ಲಿ ಕ್ರಿ. ಶ. ೧೦೭೯ನೆಯ ವರ್ಷದ ಬೆಕ್ಕ ಗ್ರಾಮದಲ್ಲಿ ದೊರೆತ ೫೬೩ನೆಯ ಶಾಸನವನ್ನು ಗಮನಿಸಬಹುದು. ವಿದ್ವಾಂಸರ ಗಮನಕ್ಕೆ ಬಹುಮಟ್ಟಿಗೆ ಬಾರದ ಚಾಲುಕ್ಯವಂಶದ ಮಾಂಡಲಿಕನೊಬ್ಬನ ಪ್ರಸ್ತಾಪವಿದರಲ್ಲಿದೆ. ಈತನು ವಿಷ್ಣುವರ್ಧನ ಜಗದೇಕಮಲ್ಲ ನರಸಿಂಹ ಹೊಯ್ಸಳದೇವನ ಅಧೀನನಾಗಿದ್ದಂತೆ ತೋರುತ್ತದೆ. ಶಾಸನದಲ್ಲಿ ಈತನ ವಂಶಾವಳಿಯನ್ನು ಕೊಟ್ಟಿದೆ.

ಮುದ್ದರಸ
├── ಬಾಚರಸ
└── ನಾಗರಸ
  └── ಹುಳ್ಳರಸ

ಈ ಹುಳ್ಳರಸನು ತನ್ನ ಅಯ್ಯಂದಿರು ಕಟ್ಟಿಸಿದ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದನು. ಅಲ್ಲದೆ ಸೋಮೇಶ್ವರ ಮತ್ತು ಮುದ್ದೇಶ್ವರ ದೇವಾಲಯಗಳಿಗೆ ಭೂಮಿದಾನವನ್ನು ಮಾಡಿದನು. 'ತಂದೆಮೂವರುಂ' ಮಾಡಿಬಿಟ್ಟ ದತ್ತಿ ಎಂದಿರುವುದರಿಂದ ಈ ದಾನದಲ್ಲಿ ಈತನ ತಂದೆ ಹಾಗೂ ದೊಡ್ಡಪ್ಪಂದಿರು ಸಹ ಭಾಗಿಗಳಾಗಿದ್ದಂತೆ ತೋರುತ್ತದೆ. ಈ ಶಾಸನದಲ್ಲಿ ಕಾಲನಿರ್ದೇಶವಿದೆ. ಇದು ಶಕವರ್ಷ ೧೦೦೧ನೆಯ ವರ್ಷದ್ದೆಂದು ಹೇಳಿದೆ. ಇದು ಕ್ರಿ. ಶ. ೧೦೭೯ಕ್ಕೆ ಸರಿಹೋಗುತ್ತದೆ. ಆದರೆ ಈ ವೇಳೆಗೆ ಮೊದಲನೆಯ ನರಸಿಂಹನು ಇನ್ನೂ ಅಧಿಕಾರಕ್ಕೆ ಬಂದಿರಲಿಲ್ಲ. ಆತನು ಆಳತೊಡಗಿದುದು ಕ್ರಿ. ಶ. ೧೧೫೨ರಿಂದ. ಶಕಕಾಲವನ್ನು ನಮೂದಿಸುವುದರಲ್ಲಿ ತಪ್ಪಿದ್ದು ಅದು ೧೦೬೧ (ಕ್ರಿ. ಶ. ೧೧೩೯) ಆಗುವುದಾದಲ್ಲಿ, ಅಂದು ಚಾಲುಕ್ಯ ವಿಕ್ರಮಾದಿತ್ಯ (VI)ನ ಮಗನಾದ ಮುಮ್ಮಡಿ ಸೋಮೇಶ್ವರನು ಆಳುತ್ತಿದ್ದನೇ ಹೊರತು ವಿಕ್ರಮಾದಿತ್ಯನಲ್ಲ. ಸೋಮೇಶ್ವರನಿಗೂ ತ್ರಿಭುವನಮಲ್ಲನೆಂಬ ಬಿರುದಿದ್ದಿತೆಂದು ಭಾವಿಸಬೇಕಾಗುತ್ತದೆ. ಈ ವಿಷಯದಲ್ಲಿ ಖಚಿತವಾಗಿ ಏನನ್ನೂ ಹೇಳಲು ಸದ್ಯದಲ್ಲಿ ಸಾಧ್ಯವಿಲ್ಲ.

ಹೊಯ್ಸಳರು

ಪ್ರಸ್ತುತ ಸಂಪುಟದಲ್ಲಿರುವ ಹೊಯ್ಸಳವಂಶದ ಅರಸರ ಶಾಸನಗಳು ರಾಜಕೀಯ ಘಟನೆಗಳ ಮೇಲೆ ಹೆಚ್ಚಿನ ಯಾವ ಬೆಳಕನ್ನೂ ಬೀರುವುದಿಲ್ಲ. ಹೊಯ್ಸಳರ ವಿಷ್ಣುವರ್ಧನನು ಚಾಲುಕ್ಯ ಅರಸನಾದ ಆರ್ಮಡಿ ವಿಕ್ರಮಾದಿತ್ಯನನ್ನು ಕಣ್ಣೆಗಾಲದಲ್ಲಿ ಸೋಲಿಸಿದನೆಂಬುದು ಬಹಳ ಪ್ರಮುಖವಾಗಿ ಹೇಳಲಾದ ಘಟನೆ. ಮಾಂಡಲಿಕನಾಗಿದ್ದ ಈ ಹೊಯ್ಸಳನು ವಿಕ್ರಮಾದಿತ್ಯನ ಆಳಿಕೆಯ ಅಂತಿಮ ವರ್ಷಗಳಲ್ಲಿ ಬಂಡೆದ್ದು ಸ್ವಾತಂತ್ರ್ಯಘೋಷಣೆ ಮಾಡಲು ಹವಣಿಸಿದನು. ಈ ಸಂದರ್ಭದಲ್ಲಿ ಕ್ರಿ. ಶ. ೧೧೧೭–೧೮ರಲ್ಲಿ ನಡೆದ ಕದನದಲ್ಲಿ ಚಾಲುಕ್ಯರ ಸೇನೆಯನ್ನು ಸೋಲಿಸಿದನು. ಈ ಕದನಗಳಲ್ಲಿ ಈತನ ದಂಡನಾಯಕನಾಗಿದ್ದ ಗಂಗರಾಜನು ಮಹತ್ವದ ಪಾತ್ರವನ್ನು ವಹಿಸಿದ್ದನು. ಇದರಿಂದ ಈ ಗಂಗರಾಜನ ಯಶೋದುಂದುಭಿ ಮೊಳಗಿದಂತಾಗಿ, ಹಾನುಗಲ್ಲಿನ ಕದಂಬರನ್ನು ಸೋಲಿಸಿ ಅಲ್ಲಿಂದ ಮುಂದುವರಿದು ತುಂಗಭದ್ರೆಯನ್ನು ದಾಟಿ ಕುಮ್ಮಟದ ಕೋಟೆಯನ್ನು ಸಹ ಈತನು ವಶಪಡಿಸಿಕೊಂಡನು. ಆ ನಂತರದ ಘಟನೆಗಳೊಡನೆ ನಮಗೆ ಪ್ರಸ್ತುತ ಸಂಬಂಧವಿಲ್ಲ. ಈ ಸಂಪುಟದಲ್ಲಿ ದಂಡನಾಯಕ ಗಂಗರಾಜನ ಈ ಸಾಧನೆಗಳಿಂದ ಸಂತುಷ್ಟಿಗೊಂಡು ಪರಮ ಎಂಬ ಗ್ರಾಮವನ್ನು ಅರಸನು ಆತನಿಗೆ ದಾನವಾಗಿ ಕೊಟ್ಟನು. ಆ ಗ್ರಾಮ ಆತನಿಂದ ಶ್ರವಣಬೆಳಗೊಳದ ಬಸದಿಗಳಿಗೆ ಪುನರ್ದತ್ತಿಮಾಡಲ್ಪಟ್ಟಿತು ಎಂಬುದಷ್ಟು ಇಲ್ಲಿ ತಿಳಿಯಬೇಕಾದ ವಿಷಯ.

ಶಾಸನಗಳಿಂದ ಗಂಗರಾಜನ ಮನೆತನಕ್ಕೆ ಸೇರಿದ ಹಲವಾರು ವಿವರಗಳು ತಿಳಿದುಬಂದಿವೆ. ಅವನ ವಂಶಾವಳಿಯನ್ನು ಹೀಗೆ ರೂಪಿಸಬಹುದು :

ನಾಗವರ್ಮ

ಮಾರಮಯ್ಯ ಪತ್ನಿ ಮಾಕಣಬ್ಬೆ

ಏಚ I ಪತ್ನಿ ಪೋಚಿಕಬ್ಬೆ

ಬಮ್ಮಣಯ್ಯ ಪತ್ನಿ ಬಾಗಣಬ್ಬೆ × ಪತ್ನಿ ಜಕ್ಕಣಬ್ಬೆ — ಬೊಪ್ಪ

ಗಂಗರಾಜ (ಗಂಗದಂಡಾಧಿಪ) ಪತ್ನಿ ನಾಗಲದೇವಿ (ಇನ್ನೊಬ್ಬಪತ್ನಿ ಲಕ್ಷ್ಮಿ) — ಬೊಪ್ಪ

ಏಚಿರಾಜ II ಪತ್ನಿ ಏಎಚಲದೇವಿ

೧೩೫ನೆಯ ಶಾಸನದಲ್ಲಿ ಗಂಗರಾಜನ ಅತ್ತಿಗೆಯ ಪ್ರಶಂಸೆ ಇದೆ. ೫೦೩ ಮತ್ತು ೫೦೪ನೆಯ ಶಾಸನಗಳಿಂದ ಈ ಜಕ್ಕಣಬ್ಬೆಗೆ ಬೊಪ್ಪದೇವನೆಂಬೊಬ್ಬ ಮಗನಿದ್ದನೆಂದು, ಮೋಕ್ಷತಿಲಕವೆಂಬ ವ್ರತವನ್ನು ನೋನ್ತು ಈಕೆ ನಯಣದದೇವರನ್ನು ಮಾಡಿಸಿದಳೆಂದು ಹೇಳಿದೆ. ೫೫೦ನೆಯ ಶಾಸನದಲ್ಲಿ ಈಕೆಯನ್ನು ದಂಡನಾಯಕಿತಿ ಎಂದು ಕರೆದಿದೆ. ಈಕೆಯ ಪತಿಯ ಹೆಸರನ್ನು ಎಲ್ಲಿಯೂ ಹೇಳಿಲ್ಲ. ಗಂಗರಾಜನ ಅಣ್ಣನೊಬ್ಬ ಬಮ್ಮಣಯ್ಯನೆಂಬುದು ತಿಳಿದಿದೆ. ಆತನ ಪತ್ನಿ ಬಾಗಣಬ್ಬೆ. ಆದರೆ ಜಕ್ಕಣಬ್ಬೆ ಆತನ ಇನ್ನೊಬ್ಬ ಪತ್ನಿಯೋ, ಅಥವಾ ಗಂಗರಾಜನ ಇನ್ನೊಬ್ಬ ಅಣ್ಣನ ಪತ್ನಿಯೋ ಎಂದು ಖಚಿತವಾಗಿ ತಿಳಿಯದಾಗಿದೆ. ಗಂಗರಾಜನ ಮಗನಾದ ಬೊಪ್ಪನು ನಾಗಲದೇವಿಯ ಮಗ. ಲಕ್ಷ್ಮಿ ಎಂಬುವವಳು ಆತನ ಇನ್ನೊಬ್ಬ ಪತ್ನಿ.

ಏಚ ಅಥವಾ ಏಚಿರಾಜ (I)ನ ಪತ್ನಿಯಾದ ಪೋಚಿಕಬ್ಬೆಯೂ, ಆಕೆಯ ಸೊಸೆ ಲಕ್ಷ್ಮಿಯೂ ಜಿನಾಲಯವೊಂದನ್ನು ಕಟ್ಟಿಸಿದರೆಂದು ಹೇಳಿದೆ (ಶಾಸನ ೮೨). ಇದು ಶಾಸನಬಸದಿಯಾಗಿರಬಹುದು. ಗಂಗರಾಜನ ಪತ್ನಿಯಾದ ಈಕೆಯನ್ನು ದಂಡನಾಯಕಿತಿ ಲಕ್ಕಲೆ ಎಂದು ಕರೆಯಲಾಗಿದೆ. ಈಕೆಯು ನಾಗಲೆಯ ಮಗಳು. ಕ್ರಿ.ಶ. ೧೧೦೩ರಲ್ಲಿ ಈಕೆಯ ಸೋದರನಾದ ಬೂಚಿರಾಜ(ಬೂಚಣ)ನು ನಿಧನಹೊಂದಿದಾಗ ಅವನ ನೆನಪಿನಲ್ಲಿ ನಿಶಿದಿಯೊಂದನ್ನು ಈಕೆ ನೆಲೆಗೊಳಿಸಿದಳು (೧೫೫ನೆಯ ಶಾಸನ,) ಎರಡುವರ್ಷಗಳ ನಂತರ, ೧೧೧೫ರಲ್ಲಿ, ಈಕೆಯ ಗುರುವಾದ ಪ್ರಭಾಚಂದ್ರಸಿದ್ಧಾಂತದೇವರ ಗುರುಗಳಾದ ಮೇಘಚಂದ್ರ ತ್ರೈವಿದ್ಯದೇವರು ದಿವಂಗತರಾದರು (೧೫೬). ೧೧೨೦ರಲ್ಲಿ ಈಕೆಯ ಹಿರಿಯ ಸೋದರಿಯೂ, ಚಾಮುಂಡನೆಂಬ ರಾಜಶ್ರೇಷ್ಠಿಯ ಪತ್ನಿಯೂ ಆದ ದೇಮವ್ವೆ ಸಂನ್ಯಾಸನ ವಿಧಿಯಿಂ ಮುಡಿಪಿದಳು (೧೫೮). ಒಂದಾದ ಬಳಿಕ ಒಂದರಂತೆ ಈಕೆಯ ಮನೆತನದಲ್ಲಿನ ಈ ವಿಯೋಗಗಳ ಬಳಿಕ ಈಕೆಯೇ ೧೧೨೧ ಅಥವಾ ೧೧೨೨ರಲ್ಲಿ ಸಮಾಧಿವೆರಸಿ ದೇವಲೋಕಕ್ಕೆ ಸಂದಳು (೧೫೭). ಎರಡುಕಟ್ಟೆ ಬಸದಿಯಲ್ಲಿನ ಆದೀಶ್ವರಸ್ವಾಮಿಯ ಸಿಂಹಪೀಠದಲ್ಲಿನ ಶಾಸನದಲ್ಲಿ (೧೬೦) ಈಕೆ ನೂತನ ಬಸದಿಯೊಂದನ್ನು ಕಟ್ಟಿಸಿದಳೆಂದು ಹೇಳಿದೆ. ಆ ಬಸದಿ ಯಾವುದೆಂಬುದು ತಿಳಿಯದು.

ಚಂದ್ರಮೌಳಿ ಈ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಇನ್ನೊಬ್ಬ ಮಂತ್ರಿ (ಶಾಸನ ೪೪೪, ೫೭೧). ಈತನು ಶಿವಭಕ್ತ; 'ತನಗಾರಾಧ್ಯಂ ಹರಂ' ಎಂದುಕೊಂಡಿದ್ದಾನೆ (ಶಾಸನ ೪೪೪). ಆದರೆ ಶ್ರವಣಬೆಳಗೊಳದ ಅಕ್ಕನ ಬಸದಿಯನ್ನು ಕಟ್ಟಿಸಿದಾಕೆ ಈತನ ಪತ್ನಿಯಾದ ಆಚಲದೇವಿ. ಆಕೆಯ ಮನೆತನದ ವಿವರಗಳನ್ನು ಶಾಸನದಲ್ಲಿ ಕೊಟ್ಟಿದೆ.

ಚಂದ್ರಮೌಳಿಯ ತಂದೆ ಶಂಭುದೇವ, ತಾಯಿ ಅಕ್ಕವ್ವೆ. ಆಚಲದೇವಿಯ ಹಿರಿಯ ಅತ್ತಿಗೆಯಾದ ದೋಚವ್ವೆಯು ಮಲ್ಲಿಸೆಟ್ಟಿ ಮತ್ತು ಮಾಚವೆಸೆಟ್ಟಿಕವ್ವೆಯರ ಮಗಳು. ಪತಿ ಶಿವಭಕ್ತನಾದರೂ ಜಿನಭಕ್ತೆಯಾದ ಆಚಲದೇವಿಗೆ ತನ್ನ ಧರ್ಮವನ್ನು ಅವಲಂಬಿಸಲು ಅನುಕೂಲಮಾಡಿಕೊಟ್ಟ ಚಂದ್ರಮೌಳಿಯ ಆಚರಣೆ ಶ್ಲಾಘನೀಯವಾಗಿದೆ.

ಮಾಸವಾಡಿನಾಡ ಶಿವೆಯ ನಾಯಕ

ಪತ್ನಿ ಚಂದವ್ವೆ

ಬಮ್ಮದೇವ ಹೆಗ್ಗಡೆ | ಬಾವೆಯನಾಯಕ | ಕಾಳವ್ವೆ | ಆಚಲದೇವಿ ಪತಿ ಮಾಸವಾಡಿಯರಸನಾದ ಹೆಮ್ಮಾಡಿಯರಸ | ಸೋವಣನಾಯಕ ಪತ್ನಿ ಬಾಚವ್ವೆ

ಸೋವಣನಾಯಕ

ಬಮ್ಮಯನಾಯಕ | ಮಾರ | ಆಚಲದೇವಿ | ಚಂದವ್ವೆ | ಕಾಮ

ಬಮ್ಮಯನಾಯಕ ಪತ್ನಿ ದೋಚವ್ವೆ

ಆಚಲದೇವಿ ಪತಿ ಚಂದ್ರಮೌಳಿ

ಸೋಮ

ವಿಷ್ಣುವರ್ಧನನ ಪ್ರಸಿದ್ಧರಾಣಿಯಾದ ಶಾಂತಲದೇವಿಯ ಉಲ್ಲೇಖ ಈ ಸಂಪುಟದ ಶಾಸನಗಳಲ್ಲಿದೆ. (೧೬೧, ೧೬೨, ೧೭೩, ೧೭೪, ೧೭೬ನೆಯ ಶಾಸನಗಳು). ಸವತಿಗಂಧವಾರಣ ಬಸದಿಯನ್ನು ಕಟ್ಟಿಸಿ ಅದಕ್ಕೆ ಕಲ್ಕಣಿನಾಡಿನಲ್ಲಿನ ಮೊಟ್ಟೆನವಿಲೆ ಎಂಬ ಗ್ರಾಮವನ್ನು ದತ್ತಿಯಾಗಿ ಬಿಟ್ಟು, ಅದನ್ನು ಮೇಘಚಂದ್ರತ್ರೈವಿದ್ಯದೇವರ ಶಿಷ್ಯರಾದ ಪ್ರಭಾಚಂದ್ರಸಿದ್ಧಾಂತದೇವರಿಗೆ ಆಕೆ ಧಾರೆಯನ್ನೆರೆದಿದ್ದಾಳೆ. ಗಂಗರಾಜನ ಪತ್ನಿಯಾದ ಲಕ್ಷ್ಮೀಮತಿ ಸಹ ಮೇಘಚಂದ್ರತ್ರೈವಿದ್ಯದೇವರ ಶಿಷ್ಯೆ ಎಂಬುದನ್ನು ಗಮನಿಸಬೇಕು. ಶಾಂತಲೆಯ ಮನೆತನದ ವಿವರ ಇಂತಿದೆ.

ನಾಗವರ್ಮ್ಮ ಪತ್ನಿ ಚಂದಿಕಬ್ಬೆ

ಬಲದೇವ ಪತ್ನಿ ಬಾಚಿಯಕ್ಕ

ಮಾಚಿಕಬ್ಬೆ | ನಾಗದೇವ | ಸಿಂಗಣ (ಸಿಂಗಿಮಯ್ಯ)

ಮಾಚಿಕಬ್ಬೆ ಪತಿ ಮಾರಸಿಂಗ — ಶಾಂತಲೆ

ನಾಗದೇವ ಪತ್ನಿ ನಾಗಿಯಕ್ಕ — ಬಲ್ಲ | ಏಚಿಯಕ್ಕ | ಬಲದೇವ

ಸಿಂಗಣ (ಸಿಂಗಿಮಯ್ಯ) ಪತ್ನಿ ಶ್ರಿಯಾದೇವಿ

ಶಾಂತಲದೇವಿಯು ೧೧೩೧ರಲ್ಲಿ ಶಿವಗಂಗೆಯಲ್ಲಿ ಮರಣಹೊಂದಿದಳು. ಈ ಸಮಾಚಾರವನ್ನರಿತ ಆಕೆಯ ತಾಯಿ ಮಾಚಿಕಬ್ಬೆಯು ಒಂದು ತಿಂಗಳಕಾಲ ಸನ್ಯಸನ ವ್ರತವನ್ನು ಕೈಗೊಂಡು ಪಂಡಿತಮರಣವನ್ನೈದಿದಳು. ಈ ವಂಶದಲ್ಲಿಯೂ ನಾವು ಧರ್ಮಸಹಿಷ್ಣುತೆಯನ್ನು ಕಾಣುತ್ತೇವೆ. ಶಾಂತಲೆಯ ತಂದೆಯಾದ ಪೆರ್ಗ್ಗಡೆ ಮಾರಸಿಂಗಯ್ಯನು ಶೈವಮತಾನುಯಾಯಿ. ಆದರೆ ಆತನ ಪತ್ನಿಯಾದ ಮಾಚಿಕಬ್ಬೆಯು ಜಿನಭಕ್ತೆ.

ಈ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಇನ್ನೊಬ್ಬ ಹಿರಿಯ ಅಧಿಕಾರಿ ದಂಡನಾಯಕ ಹುಳ್ಳ–ಹುಳ್ಳರಸ. ಸವಣೇಱು, ಬೆಕ್ಕ ಮತ್ತು ಕೆಗ್ಗೆಱೆ ಗ್ರಾಮಗಳನ್ನು ಗೊಮ್ಮಟೇಶ್ವರನಿಗೆ ದತ್ತಿಯಾಗಿ ಬಿಟ್ಟ ಹಿರಿಯ ದಾನಿ. ಇವುಗಳನ್ನು ಈತನು ಹೊಯ್ಸಳ ನರಸಿಂಹದೇವ (I)ನಿಂದ ಪಡೆದನು. ಈತನ ಗುರು ನಯಕೀರ್ತ್ತಿಸಿದ್ಧಾಂತದೇವ. ೭೭ನೆಯ ಶಾಸನದಿಂದ ಈತನ ಪತ್ನಿಯ ಹೆಸರು ಪದ್ಮಾವತಿ ಎಂದು ತಿಳಿದುಬರುತ್ತದೆ. ವಾಜಿವಂಶಕ್ಕೆ ಸೇರಿದ ಈತನು ಯಕ್ಷರಾಜನ ಪುತ್ರ. ತಾಯಿ ಲೋಕಾಂಬಿಕೆ. ಅಜ್ಜ ಚಂದಿರಾಜ (೫೬೪); ಮಗ ನರಸಿಂಹ (೫೬೫). ಬಂಕಾಪುರದಲ್ಲಿನ ಮಹಾಜಿನೇಂದ್ರಾಲಯವನ್ನೊಳಗೊಂಡು ಅನೇಕ ಬಸದಿಗಳನ್ನು ಈತನು ಜೀರ್ಣೋದ್ಧಾರಗೊಳಿಸಿದನು (೪೭೬). ಬಂಕಾಪುರದಲ್ಲಿ ಘೋರ ಜಿನಾಲಯವೆಂಬುದೊಂದಿದ್ದಿತೆಂಬುದು ನಮಗೆ ಅಸುಂಡಿಯ ಶಾಸನದಿಂದ ತಿಳಿದಿದೆ.[1] ಹುಳ್ಳನು ದುರಸ್ತಿಗೊಳಿಸಿದುದು ಇದೇ ಆಗಿರಬಹುದು. ಕಲಿವಿಟನೆಂಬಾತನ ಜಿನಾಲಯವನ್ನು ಈತನು ಸರಿಗೊಳಿಸಿದನೆಂದು ಹೇಳಿದೆ. ಈ ಕಲಿವಿಟನು ರಾಷ್ಟ್ರಕೂಟ ಮುಮ್ಮಡಿಕೃಷ್ಣನ ಅಧೀನನಾಗಿ ಬನವಾಸಿ ಪ್ರಾಂತವನ್ನಾಳುತ್ತಿದ್ದ ಚೆಲ್ಲಕೇತನ ಮನೆತನದ ಕಲಿವಿಟನಾಗಿರಬಹುದು[2]. ಅಂತೆಯೇ ಕೆಲ್ಲಂಗೆಱೆಯಲ್ಲಿನ ಆದಿತೀರ್ತ್ಥವೆನಿಸಿದ ಗಂಗರಿಂದ ಕಟ್ಟಲ್ಪಟ್ಟ ಜಿನಾಗಾರವನ್ನೂ ಸಹ ಹುಳ್ಳನು ಆಕಲ್ಪಸ್ಥಿರವಾಗಿ ಮಾಡಿಸಿದನು. ೫೭೨ನೆಯ ಶಾಸನದಲ್ಲಿ ಈತನ ಮಯ್ದುನ ಅಶ್ವಾಧ್ಯಕ್ಷದ ಹೆಗ್ಗಡೆ ಹರಿಯಣ್ಣನ ಉಲ್ಲೇಖವಿದೆ.

---

[1] *S. I. I.*, Vol XI pt. I, No. 34

[2] *Bomb. Gaz.*, Vol. I, pt. II, pp. 420

೧೧೭೬ನೆಯ ವರ್ಷದ ೭೩ನೆಯ ಶಾಸನ ನಯಕೀರ್ತಿದೇವನ ಸ್ಮಾರಕ ನಿಶಿಧಿ ಶಾಸನ. ಹುಳ್ಳರಸನ ಅಧೀನಾಧಿಕಾರಿಯಾಗಿ ಸಚಿವನೂ, ಶ್ರೀಕರಣಾಧಿಪನೂ ಆಗಿದ್ದ ನಾಗದೇವನು ಇದನ್ನು ನಿಲ್ಲಿಸಿದನು. ಆತನ ವಂಶದ ನಿರೂಪಣೆ ಇದರಲ್ಲಿದೆ:

ಬಮ್ಮದೇವ ಪತ್ನಿ ಜೋಗಾಂಬಾ
|
ನಾಗದೇವ ಪತ್ನಿ ಚಂದಾಂಬಿಕೆ (ಚಂದವ್ವೆ)
|
ಮಲ್ಲಿನಾಥ (ಮಲ್ಲಿದೇವ) — ಕಾಮಲತಾ (ಕಾಮಲದೇವಿ)

ಚಂದಾಂಬಿಕೆಯು ಪಟ್ಟಣಸ್ವಾಮಿ ಮಲ್ಲಿಸೆಟ್ಟಿ ಹಾಗೂ ಮಾಚವ್ವೆಸೆಟ್ಟಿಕವ್ವೆಯ ಮಗಳು. ಚಂದ್ರಮೌಳಿಯ ಪತ್ನಿಯಾದ ಅಚಲದೇವಿಯ ಅತ್ತಿಗೆ ದೋಚವ್ವೆಯ ತಂದೆತಾಯಿಗಳ ಹೆಸರೂ ಇದೇ ಆಗಿರುವುದನ್ನು ಮೇಲೆ ನೋಡಿದ್ದೇವೆ. ಎಂದ ಬಳಿಕ ಚಂದಾಂಬಿಕೆಯು ದೋಚವ್ವೆಯ ಸೋದರಿಯಾಗಿರಬಹುದು!

೪೫೫ನೆಯ ಶಾಸನದಲ್ಲಿ ತೇದಿಯನ್ನು ಕೊಟ್ಟಿಲ್ಲ. ಇದು ಹೊಯ್ಸಳ ಇಮ್ಮಡಿ ವೀರಬಲ್ಲಾಳದೇವನ ಆಳ್ವಿಕೆಯ ಕಾಲಕ್ಕೆ ಸೇರಬಹುದಾದ ಶಾಸನ. ಗೊಮ್ಮಟಪುರದ ನಗರಂಗಳಿಗೆ ಕೊಟ್ಟ ಶಾಸನ ಪತ್ಥಳಿಯ ವಿವರಗಳು ಇದರಲ್ಲಿವೆ. ಇದನ್ನು ಹಿರಿಯ ಮಾಣಿಕ್ಯಭಂಡಾರಿ ರಾಮದೇವನಾಯಕನ ಸಂನಿಧಿಯಲ್ಲಿ ಕೊಡಲಾಯಿತು. ಈತನು ವೀರಬಲ್ಲಾಳದೇವರ ಕುಮಾರನಾದ ಸೋಮೇಶ್ವರದೇವನ ಪ್ರಧಾನನೆಂದು ಹೇಳಿದೆ. ಕ್ರಿ.ಶ. ೧೨೨೦ರಲ್ಲಿ ಬಲ್ಲಾಳದೇವನ ಮಗ ನರಸಿಂಹ (II)ನು ಪಟ್ಟಕ್ಕೆ ಬಂದನೆಂಬುದು ತಿಳಿದ ವಿಷಯವೇ. ಬಲ್ಲಾಳನಿಗೆ ಬೇರಾವ ಮಕ್ಕಳೂ ಇದ್ದುದು ತಿಳಿದಿಲ್ಲ. ಆದಕಾರಣ ಈ ಶಾಸನವನ್ನು ಗಮನಿಸಿದ ಫ್ಲೀಟ್‌ರವರು ಶಾಸನಪಾಠದಲ್ಲಿಯೋ ಮೂಲದಲ್ಲಿಯೋ ಏನಾದರೂ ತಪ್ಪಿರಬಹುದೆಂದು ಹೇಳಿ ಕುಮಾರ ಸೋಮೇಶ್ವರನನ್ನು ಪ್ರಸ್ತಾಪಿಸುವ ಇದನ್ನು ಬದಿಗೊತ್ತಿದರು.[1] ಆದರೆ ನರಸಿಂಹಾಚಾರ್ಯರು ಸೋಮೇಶ್ವರನೆಂಬೊಬ್ಬನು ಸೌಶೀಲ್ಯದಿಂದ ಬಲ್ಲಾಳದೇವನ ಕುಮಾರನೆಂದು ಕರೆದುಕೊಂಡಿದ್ದಾನೆ ಎಂದರು.[2] ಆದರೆ ಈ ಶಾಸನೋಕ್ತ ಹೇಳಿಕೆಯನ್ನು ಇಷ್ಟು ಉದಾಸೀನವಾಗಿ ಕಾಣಲಾಗದು.

ಈ ಶಾಸನದಲ್ಲಿ ಉಕ್ತವಾಗಿರುವ ನಯಕೀರ್ತಿದೇವನ ಶಿಷ್ಯರು ಇತರ ತೇದಿಗಳಿರುವ ಶಾಸನಗಳಲ್ಲೂ [3] ಕಂಡುಬರುವ ಆಧಾರದ ಮೇಲೆ ನರಸಿಂಹಾಚಾರ್ಯರು ಈ ಶಾಸನದ ಕಾಲ ಕ್ರಿ.ಶ. ೧೨೦೬ ಆಗಿರಬಹುದೆಂದು ಭಾವಿಸಿದ್ದಾರೆ. ಇಮ್ಮಡಿ ನರಸಿಂಹನು ಕ್ರಿ.ಶ. ೧೧೮೨ರಲ್ಲಿ ಹುಟ್ಟಿದನೆಂಬುದು ತಿಳಿದಿದೆ.[4] ತಂದೆಯೊಂದಿಗೆ ಈತನು ಆಡಳಿತದಲ್ಲಿ ಭಾಗವಹಿಸಿದನೆಂದು ಸೂಚಿಸುವ ಮೊದಲ ಶಾಸನದ ಕಾಲ ೧೨೦೫.[5]

ಈ ಸಂದರ್ಭದಲ್ಲಿ ಧಾರವಾಡಜಿಲ್ಲೆಯ ಹೊಸೂರು ಗ್ರಾಮದಲ್ಲಿನ ಶಾಸನವನ್ನು ಗಮನಿಸಬಹುದು.[6] ಈ ಶಾಸನದಲ್ಲಿ ವೀರಬಲ್ಲಾಳನ ಮಗನಾದ ನರಸಿಂಹನನ್ನು 'ದ್ವಿತೀಯಂ ಕುಮಾರಂ' ಎಂದು ಹೇಳಿದೆ. ಈತನು ೧೨೦೭ರಲ್ಲಿ (ಕ್ರೋಧನ ಸಂವತ್ಸರ) ಮುಳುಗುಂದ – ೧೨ ರ ಆಡಳಿತದ ಹೊಣೆಯನ್ನು ಹೊತ್ತಿದ್ದನು. ಇದರಲ್ಲಿ ಈತನನ್ನು ಎರಡನೆಯ ಮಗನೆಂದು ಕರೆದಿರುವುದೂ, ಚಿಕ್ಕನರಸಿಂಗಯ್ಯನೆಂದಿರುವುದೂ ಗಮನಾರ್ಹವಾಗಿದೆ. ಶ್ರವಣಬೆಳಗೊಳದ ೪೫೫ನೆಯ ಶಾಸನದಲ್ಲಿ ಗೊಮ್ಮಟಪುರದಲ್ಲಿ ಮನೆದೆಱೆಯನ್ನು ಕೊಡುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿ ರೂಪಿತವಾಗಿದ್ದು, ಅದು ಅಕ್ಷಯ ಸಂವತ್ಸರದಿಂದ ಆಚರಣೆಗೆ ಬರುವಂತೆ ಹೇಳಿದೆ. ಎಂದಮೇಲೆ ಈ ಶಾಸನ ಒಂದು ವರ್ಷ ಮೊದಲಿಗೆ, ಬಹುಶಃ ಕ್ರೋಧನ ಸಂವತ್ಸರದಲ್ಲಿಯೇ ಅಸ್ತಿತ್ವಕ್ಕೆ ಬಂದಿರಬಹುದು. ಈ ಕ್ರೋಧನ ಸಂವತ್ಸರದಲ್ಲಿ ಚಿಕ್ಕನರಸಿಂಗಯ್ಯನು ಮುಳುಗುಂದದ ಭಾಗವನ್ನಾಳುತ್ತಿದ್ದನೆಂದು

---

1 *Bomba. Gaz.*, Vol. I, pt. II, p. 502, note 2

2 Introduction, p. 62

3 ಈ ಸಂಪುಟದ 444 ಮತ್ತು 457 ನೇ ಶಾಸನಗಳು

4 *E. C.*, Vol. IV, Ng. 32

5 *Ibid.*, Vol. XI, Cd. 23

6 *Ep. Ind.*, Vol. XXXII, pp. 171 ff

ಮೇಲೆ ಹೇಳಿದೆ. ಆದ್ದರಿಂದ ಪ್ರಸ್ತುತ ಶಾಸನದಲ್ಲಿ ಉಕ್ತನಾದ ಕುಮಾರ ಸೋಮೇಶ್ವರದೇವನು ವಾಸ್ತವಿಕವಾಗಿಯೂ ಇಮ್ಮಡಿ ವೀರಬಲ್ಲಾಳದೇವನ ಮಗನೇ ಆಗಿರಬೇಕು. ಇದನ್ನು ಒಪ್ಪಿಕೊಂಡಲ್ಲಿ ಇಮ್ಮಡಿ ವೀರಬಲ್ಲಾಳನಿಗೆ ಇನ್ನೊಬ್ಬ ಮಗನಿದ್ದನೆಂದಾಗುತ್ತದೆ. ಇದನ್ನು ನಾವು ಈ ಮೊದಲೇ ಸೂಚಿಸಿದ್ದೇವೆ.[7]

ವಿಜಯನಗರ

ವಿಜಯನಗರದ ಅರಸರಿಗೆ ಸಂಬಂಧಿಸಿದ ಐದು ಶಾಸನಗಳು ಈ ಸಂಪುಟದಲ್ಲಿವೆ. ಕ್ರಿ.ಶ. ೧೩೬೮ನೆಯ ಮೊದಲನೆಯ ಬುಕ್ಕರಾಯನ ೪೭೫ನೆಯ ಶಾಸನವನ್ನು ಈಗಾಗಲೇ ಪರಿಶೀಲಿಸಿದ್ದೇವೆ. ೪೪೬ನೆಯ ಕ್ರಿ.ಶ. ೧೪೦೪ನೆಯ ವರ್ಷದ ಶಾಸನ ಆ ವರ್ಷದ ಆಗಸ್ಟ್ ಮಾಹೆಯ ೩೦ರಂದು ಹರಿಹರರಾಯನು ಮರಣಹೊಂದಿದ ವಿಷಯವನ್ನು ತಿಳಿಸುತ್ತದೆ. ಈತನು ಇಮ್ಮಡಿ ಹರಿಹರರಾಯನೆಂದು ಗುರುತಿಸಲಾಗಿದೆ.

೧೪೨೨ನೆಯ ವರ್ಷದ ೩೫೭ನೆಯ ಶಾಸನ ಗೊಮ್ಮಟೇಶ್ವರದೇವರ ಸನಾತನಭೋಗಕ್ಕೆಂದು ಇರುಗಪ ದಂಡನಾಥ ಬೆಳಗುಳಗ್ರಾಮವನ್ನು ದಾನಮಾಡಿದ ವಿಷಯವನ್ನೊಳಗೊಂಡಿದೆ. ಇರುಗಪನ ವಂಶಾವಳಿ ಇದರಲ್ಲಿ ಹೇಳಿದೆ.



ಈ ಶಾಸನ ಸಂಸ್ಕೃತ ಭಾಷೆಯಲ್ಲಿದೆ.

೪೪೫ನೆಯ ಶಾಸನದಿಂದ ಇಮ್ಮಡಿ ದೇವರಾಯನು ೧೪೪೬ನೆಯ ವರ್ಷದ ಮೇ ೨೪ರಂದು ದಿವಂಗತನಾದನೆಂದು ತಿಳಿದುಬರುತ್ತದೆ. ಇದೇ ಶಾಸನದ ಅಪೂರ್ಣಪ್ರತಿಯನ್ನು ನಂ. ೪೪೭ರಲ್ಲಿ ಕಾಣುತ್ತೇವೆ.

೪೬೭ನೆಯ ಕ್ರಿ.ಶ. ೧೫ನೆಯ ಶತಮಾನಕ್ಕೆ ಸೇರಿದ ಶಾಸನದಲ್ಲಿ ದೇವರಾಯ ಮಹಾರಾಯರ ರಾಣಿ ಭೀಮಾದೇವಿಯು ಶಾಂತಿನಾಥಸ್ವಾಮಿಯನ್ನು ಮಾಡಿಸಿದಳೆಂದು ಹೇಳಿದೆ. ಇದರಲ್ಲಿ ಉಕ್ತನಾದ ದೇವರಾಯನು ಮೊದಲನೆಯವನೋ ಎರಡನೆಯವನೋ ಹೇಳಲಾಗದು. ಶ್ರೀ ನರಸಿಂಹಾಚಾರ್ಯರು ಆಕೆಯ ಗುರುವಾದ ಪಂಡಿತಾರ್ಯನ ಉಲ್ಲೇಖವಿರುವುದರಿಂದಲೂ ಆತನು ಇತರ ಶಾಸನಗಳಿಂದ ತಿಳಿದುಬಂದಿರುವುದರಿಂದಲೂ ಆಕೆ ಮೊದಲನೆಯ ದೇವರಾಯನ ಪತ್ನಿಯೆಂದು ಊಹಿಸಿದ್ದಾರೆ.[1]

ಮೈಸೂರು ಅರಸರು

ಕ್ರಿ.ಶ. ೧೬೩೪ನೆಯ ವರ್ಷದ ೩೫೨ನೆಯ ಶಾಸನ ಮೈಸೂರಿನ ಅರಸರಾದ ಚಾಮರಾಜವೊಡೆಯ (VII)ರದು. ಗೊಮ್ಮಟೇಶ್ವರಾಲಯಕ್ಕೆ ಸೇರಿದ್ದ ಭೂಮಿಗಳನ್ನು ಅನೇಕರು ಅಡಮಾನಕ್ಕೆ ಹಾಕಿಕೊಂಡಿದ್ದರು. ಅರಸರು ಶ್ರವಣಬೆಳಗೊಳಕ್ಕೆ ಬಂದಿರಬಹುದಾದ ಆ ಸಂದರ್ಭದಲ್ಲಿ ಈ ವಿಷಯವನ್ನು ಅರಿತು ತಾವೇ ಸ್ವತಃ ಅಡವಿನ ಸಾಲವನ್ನು ತೀರಿಸಲು ಮುಂದೆ ಬಂದು ಸಾಲ ಕೊಟ್ಟವರನ್ನು ಕರೆಸಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದಾಗ, ಅವರು ಅದಕ್ಕೆ ಆಸ್ಪದ ಕೊಡದೆ ತಾವೇ ಆ ಭೂಮಿಗಳನ್ನು ಮುಕ್ತಮಾಡುವುದಾಗಿಯೂ, ಇದರಿಂದ ತಂಮ ತಾಯಿತಂದೆಗಳಿಗೆ ಪುಣ್ಯ ಬರುವಂತಾಗಲೆಂದೂ ಹೇಳಿ, ಭೂಮಿಗಳನ್ನು ಬಿಡಿಸಿದರೆಂದು ಶಾಸನ ತಿಳಿಸುತ್ತದೆ. ಭೂಮಿಗಳನ್ನು ಅಡವುಹಾಕಿಕೊಂಡವರಲ್ಲಿ ಪಂಚಬಾಣಕವಿಗಳ ಮಗ ಬೊಂಮ್ಮಪ್ಪ ಮತ್ತು ಬೊಂಮಣಕವಿಗಳೂ ಇಬ್ಬರು. ಆದರೆ ಇವರು ಕವಿಗಳಾಗಿದ್ದಲ್ಲಿ ಇವರುಗಳನ್ನು ಕುರಿತು ಇತರ ವಿವರಗಳೇನೂ ತಿಳಿಯದು. ೪೯೫ನೆಯ ಶಾಸನ ಇದೇ ಶಾಸನದ ವಿವರಗಳನ್ನೊಳಗೊಂಡ ತಾಮ್ರಶಾಸನ. ಆದರೆ ಇದರಲ್ಲಿ ಮೇಲ್ಕಂಡ ಶಾಸನದಲ್ಲಿ ಹೇಳಿದಂತೆ

---

[7] ವಿವರಗಳಿಗೆ *Ibid*

[1] Introduction, p. 64

ಭೂಮಿಗಳನ್ನು ಅಡವಿಟ್ಟುಕೊಂಡವರ ಹೆಸರುಗಳನ್ನು ಹೇಳಿಲ್ಲ. ಆದರೆ ಇದರಲ್ಲಿ ಇನ್ನು ಮುಂದೆ 'ಬೆಳುಗುಳದ ಸ್ಥಾನದವರು ಸ್ವಾಸ್ತಿಯನ್ನು ಆವನಾನೊಬ್ಬನು ಅಡಹು ಹಿಡಿದಂತವರು ಅಡವಕೊಟಂತವರು ಧರುಶನ ಧರ್ಮಕೆ ಹೊರಗು' ಎಂದು ಕಟ್ಟುಪಾಡನ್ನು ಸೂಚಿಸಿದೆ. ಯಾವ ಪರಿಸ್ಥಿತಿಯಲ್ಲಿ ಭೂಮಿಯನ್ನು ಅಡವು ಹಾಕಿಕೊಂಡರೆಂಬುದು ತಿಳಿಯದಿದ್ದರೂ ದೇವಾಲಯದ ಅಧಿಕಾರವರ್ಗದವರು ದೈವನಿಧಿಯನ್ನು ದುರುಪಯೋಗಪಡಿಸಿಕೊಂಡರೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದನ್ನು ತಿಳಿದೂ ಅರಸನು ಇವರ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳದಿದ್ದುದು ಆಶ್ಚರ್ಯ. ಇದು ಅರಸನಿಗೆ ಇಂತಹ ನಿಧಿಗಳ ಆಡಳಿತ ವ್ಯವಹಾರಗಳಲ್ಲಿ ಕೈಹಾಕುವ ಅಧಿಕಾರ ಬಹುಶಃ ಇರಲಿಲ್ಲವೆಂಬುದನ್ನು ಸೂಚಿಸುತ್ತದೆ.

ಈ ಶಾಸನವನ್ನು ಕುರಿತು ಬರೆಯುವ ಸಂದರ್ಭದಲ್ಲಿ ಶ್ರೀ ನರಸಿಂಹಾಚಾರ್ಯರು ಸುಮಾರು ಕ್ರಿ. ಶ. ೧೬೮೦ರಲ್ಲಿ ಚಿದಾನಂದಕವಿಯಿಂದ ರಚಿತವಾದ 'ಮುನಿವಂಶಾಭ್ಯುದಯ'ವೆಂಬ ಸಾಹಿತ್ಯಕೃತಿಯನ್ನು ಉಲ್ಲೇಖಿಸಿದ್ದಾರೆ.[1] ಇದರಲ್ಲಿ ಅರಸರು ಶ್ರವಣಬೆಳಗೊಳಕ್ಕೆ ಭೇಟಿನೀಡಿದಾಗ, ಅಲ್ಲಿನ ಬಸದಿಯ ಗುರುಗಳು ಎಲ್ಲಿರುವರೆಂದು ವಿಚಾರಿಸಲಾಗಿ ಕವಿ ಬೊಮ್ಮಣನು ತೆಲುಗು ನಾಯಕನಾದ ಜಗದೇವನು ಕೊಡುತ್ತಿದ್ದ ತೊಂದರೆಗಳನ್ನು ತಾಳಲಾರದೆ ಗುರುವಾದ ಚಾರುಕೀರ್ತಿಯು ಆ ಸ್ಥಳವನ್ನೇ ಬಿಟ್ಟುದಾಗಿಯೂ ಅದರ ಪರಿಣಾಮವಾಗಿ ಗೊಮ್ಮಟೇಶ್ವರನ ಪೂಜೆ ನಿಂತಿರುವುದೆಂದೂ ತಿಳಿಸಿದನಂತೆ. ರಾಜನು ಗುರುವನ್ನು ಪುನಃ ಹಿಂದಕ್ಕೆ ಬರಮಾಡಿಕೊಂಡು ಪೂಜೆಪುನಸ್ಕಾರಗಳಿಗಾಗಿ ದತ್ತಿಗಳನ್ನು ನೀಡಿದನೆಂಬ ನಂತರದ ಕತೆ ಇಲ್ಲಿ ಅಪ್ರಸ್ತುತ. ಆದರೆ ಈ ಘಟನೆ ಶಾಸನೋಕ್ತ ವಿಷಯಕ್ಕೆ ಸಂಬಂಧಿಸಿದುದೇ ಆದಲ್ಲಿ ಈ ಕೃತಿಯಲ್ಲಿ ಸತ್ಯವನ್ನು ಮರೆಮಾಚುವ ಪ್ರಯತ್ನ ನಡೆದಿದೆ ಎಂಬುದು ಸ್ಪಷ್ಟ. ಸಮಕಾಲೀನ ಶಾಸನದಲ್ಲಿನ ಹೇಳಿಕೆ ಹೆಚ್ಚಿನಮಟ್ಟಿಗೆ ನಂಬಲರ್ಹವಾಗಿದೆ. ಇಲ್ಲಿ ಹೇಳಲ್ಪಟ್ಟ ಕವಿ ಬೊಮ್ಮಣನೇ ಶಾಸನದಲ್ಲಿ ಕಾಣಿಸಿಕೊಳ್ಳುವ ಬೊಂಮಣಕವಿ ಎಂಬುದು ಸ್ಪಷ್ಟ.

೫೫೧ನೆಯ ಕ್ರಿ. ಶ. ೧೬೭೨ನೆಯ ವರ್ಷದ ಶಾಸನ ದೇವರಾಜಯ (ದೊಡ್ಡದೇವರಾಜವೊಡೆಯ)ನ ಶಾಸನ. ಬ್ರಾಹ್ಮಣರಿಗೆ ಅನ್ನಸತ್ರಕ್ಕೆ ಮಾಡಿದ ಏರ್ಪಾಡನ್ನು ತಿಳಿಸುತ್ತದೆ. ಜೈನಧರ್ಮಕ್ಕೆ ಸಂಬಂಧಿಸದ ಕೆಲವೇ ಶಾಸನಗಳಲ್ಲಿ ಇದೊಂದು.

ಚಿಕ್ಕದೇವರಾಜೇಂದ್ರ ಮಹಾಸ್ವಾಮಿಯವರು ಹೊಸದಾಗಿ ಕಟ್ಟಿಸದಿದ್ದರೂ ದುರಸ್ತಿಗೊಳಿಸಿದ ಅಥವಾ ವಿಸ್ತರಿಸಿದ ಕಲ್ಯಾಣಿಯನ್ನು ಉಲ್ಲೇಖಿಸುವ ೫೬೧ನೆಯ ಶಾಸನವನ್ನು ಈ ಮೊದಲೇ ಪ್ರಸ್ತಾಪಿಸಿದ್ದೇವೆ. ೧೭೨೩ನೆಯ ವರ್ಷದ ದೊಡ್ಡ ಕೃಷ್ಣರಾಜಒಡೆಯರ ಶಾಸನ (೩೫೧)ದಲ್ಲಿ ಇದನ್ನು ಚಿಗದೇವರಾಜಕಲ್ಯಾಣಿ ಎಂದು ಕರೆಯಲಾಗಿದೆ. ಈ ಅರಸನು ಬೆಳಗುಳಕ್ಕೆ ಬಂದಿದ್ದ ಅವಸರದಲ್ಲಿ ಗೊಮ್ಮಟೇಶ್ವರನ ಪೂಜೆಗೆಂದು ಕಸಬೆ ಬೆಳುಗುಳ ಹಾಗೂ ಇತರ ಎಂಟು ಗ್ರಾಮಗಳನ್ನು ದತ್ತಿ ನೀಡಿದನು. ಅಂತೆಯೇ ಕಲ್ಯಾಣಿಯ ಬಳಿಯ ಅನ್ನಸತ್ರವನ್ನು ನಡೆಸಿಕೊಂಡು ಹೋಗಲೆಂದು ಕಬಾಳೆ ಗ್ರಾಮವನ್ನು ಸಹ ದಾನಮಾಡಿದನು. ೫೫೧ನೆಯ ಶಾಸನದಲ್ಲಿ ಕಂಡುಬರುವ ಬ್ರಾಹ್ಮಣರ ಅನ್ನಸತ್ರವು ಇದೇ ಆಗಿರಬಹುದೆಂದು ಖಚಿತವಾಗಿ ಹೇಳಲಾಗದು.

೩೨೪ನೆಯ ಶಾಸನ ಕೃಷ್ಣರಾಜವಡೆಯರ(III)ದ್ದು. ಇದರ ಕಾಲ ಕ್ರಿ. ಶ. ೧೮೨೭. ''ಭಾರಿಗಾಟು ಕಂದಾಚಾರ ಸವಾರಕಚೇರಿ ಯಿಲಾಖೆ''ಯಲ್ಲಿ ಭಕ್ಷಿಯಾಗಿದ್ದ ದೇವರಾಜ್ಜೈಅರಸಿನವರು ಬಾಹುಬಲಿಯ ಮಸ್ತಕಾಭಿಷೇಕ ಮಹೋತ್ಸವದ ದಿವಸ ಸ್ವರ್ಗಸ್ಥರಾದರು. ಅವರ ಸ್ಮರಣೆಗಾಗಿ ವರ್ಷಂಪ್ರತಿ ಆ ದಿನದಂದು ಗೋಮಟೇಶ್ವರಸ್ವಾಮಿಗೆ ವಿಶೇಷಪೂಜೆ ಸಲ್ಲಬೇಕೆಂದು ಅವರ ಮಗ ಪುಟ್ಟದೇವರಾಜ್ಜೈ ಅರಸಿನವರು ೧೦೦ ವರಹದ ಪುದುವಟ್ಟೊಂದನ್ನು ನೆಲೆಗೊಳಿಸಿದರೆಂದು ಶಾಸನ ತಿಳಿಸುತ್ತದೆ. ಚಾವುಂಡರಾಜವಂಶಕ್ಕೆ ಸೇರಿದ ಈ ಅಧಿಕಾರಿಯ ವಂಶಾವಳಿಯನ್ನು ಶಾಸನದಲ್ಲಿ ನಿರೂಪಿಸಿದೆ.

ಬಿಳಿಕೆರೆ ಅನಂತರಾಜ್ಜೈ ಅರಸು
|
ತೋಟದ ದೇವರಾಜ್ಜೈ ಅರಸು
|
ಸತ್ಯಮಂಗಲದ ಚಲುವೈ ಅರಸು
|
ಭಕ್ಷಿ ದೇವರಾಜ್ಜೈ ಅರಸು
|
ಪುಟ್ಟದೇವರಾಜ್ಜೈ ಅರಸು

ಈ ಮನೆತನದ ಮೂಲಪುರುಷ ಚಾಮುಂಡರಾಜನೆಂದು ಹೇಳಿ ಇದರ ಮೂಲವನ್ನು ೧೦ನೆಯ ಶತಮಾನದವರೆಗೂ ಹಿಂದಕ್ಕೆ

[1] *Ibid.*, p. 65

ಒಯ್ಯಲಾಗಿದೆ. ಅನಂತರಾಜೈ ಅರಸಿನವರು ಬಿಳಿಕೆರೆಯವರಾಗಿದ್ದರೆ, ಚಲುವೈ ಅರಸು ಸತ್ಯಮಂಗಲದವರೆಂದಿದೆ. ಬಹುಶಃ ಭಕ್ಷಿ ದೇವರಾಜೈ ಅರಸಿನವರ ಕಾಲಕ್ಕೆ ಇವರು ಹಿರಿಯ ಅಧಿಕಾರದ ಸೂತ್ರಗಳನ್ನು ವಹಿಸಿದಂತೆ ತೋರುತ್ತದೆ. ಈ ವೇಳೆಗೆ ಅನೇಕ ಪರ್ಶಿಯನ್ ಪದಗಳು ಇಲ್ಲಿ ರೂಢಿಗೆ ಬಂದಿದ್ದಲ್ಲದೆ 'ಭಕ್ಷಿ' ಮುಂತಾದ ಮೊಘಲರ ಕಾಲದ ಅಧಿಕಾರನಾಮಗಳು ಇಲ್ಲಿ ಈಗ ಉಪಯೋಗಿಸಲ್ಪಡುತ್ತಿತ್ತೆಂಬುದು ಗಮನಾರ್ಹವಾಗಿದೆ.

ಚಂಗಾಳ್ವ

ದೊಡ್ಡಬೆಟ್ಟದ ಅಷ್ಟದಿಕ್ಪಾಲಕರ ಮಂಟಪದಲ್ಲಿನ ಕ್ರಿ. ಶ. ೧೫೮೯ನೆಯ ವರ್ಷದ ಶಾಸನ (ನಂ. ೩೮೯) ಮಂಡಳೇಶ್ವರ ಕುಲೋತ್ತುಂಗ ಚಂಗಾಳ್ವ ಮಹಾದೇವನನ್ನು ಉಲ್ಲೇಖಿಸುತ್ತದೆ. ಈತನು ಚಂಗಾಳ್ವ ಮನೆತನಕ್ಕೆ ಸೇರಿದ ಕ್ರಿ. ಶ. ೧೫೦೨ ರಿಂದ ೧೫೩೩ರ ವರೆಗೆ ಆಳಿದ ನಂಜನ ಅನುಜ.[1] ಈ ಮಹಾದೇವನು ರಾಜ್ಯವಾಳಲಿಲ್ಲ. ಪ್ರಸ್ತುತ ಶಾಸನ ಈತನ ಸೋದರನ ಆಳಿಕೆಯ ಕಾಲಕ್ಕೆ ಸೇರಿದುದಾಗಿದೆ. ಹಿರೇಮಳತಿ ಶಾಸನದಲ್ಲಿ[2] ಕೊಟ್ಟಿರುವ ಈ ಮನೆತನದ ವಂಶಾವಳಿಯಿಂದಲೂ ಈತನು ನಂಜನ ಅನುಜನೆಂಬುದು ತಿಳಿದುಬರುತ್ತದೆ. ೧೫೦೩ನೆಯ ವರ್ಷದ ಆ ಶಾಸನದಲ್ಲಿ ಈ ಮಹಾದೇವನು ಅನ್ನದಾನಿ ಲಿಂಗಕ್ಕೆ ಆ ಗ್ರಾಮವನ್ನು ದಾನಮಾಡಿದನೆಂಬ ವಿಷಯ ಹೇಳಿದೆ. ಈ ಎರಡು ಶಾಸನಗಳಲ್ಲೂ ಮಹಾದೇವನು ಆಳುತ್ತಿದ್ದನೆಂದು ಹೇಳಿಲ್ಲ. ಈತನ ಅಣ್ಣನೊಡನೆ ಇವನ ಸಂಬಂಧ ಬಹಳ ಸೌಹಾರ್ದಯುತವಾಗಿದ್ದು, ಈತನು ಸ್ವತಂತ್ರವಾಗಿಯೇ ದಾನಗಳನ್ನು ಮಾಡುವ ಅಧಿಕಾರಪಡೆದಿದ್ದನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ೧೫೦೩ನೆಯ ವರ್ಷದ ಶಾಸನದಲ್ಲಿ ಈತನನ್ನೂ ನೃಪತಿ ಎಂದು ಕರೆಯಲಾಗಿದೆ. ಆದರೆ ಪ್ರಸ್ತುತ ಶಾಸನದಲ್ಲಿ ಈತನು ಮಂಡಲೇಶ್ವರನೆನಿಸಿಕೊಂಡಿದ್ದಾನೆ. ಈತನ ಪ್ರಧಾನಸಿರೋಮಣಿಯಾದ ಸಮ್ಯಕ್ತ್ವ ಚೂಡಾಮಣಿ ಎನಿಸಿದ ಚಂನಬೊಮ್ಮರಸನು ಬೊಂಮ್ಯಣಮಂತ್ರಿಯ ಸಹೋದರನು. ನಂಜರಾಯಪಟ್ಟಣದ ಶ್ರಾವಕ ಭವ್ಯಜನಂಗಳ ಸಹಾಯದಿಂದ ಈತನು ಗುಂಮಟಸ್ವಾಮಿಯ ಬಳ್ಳಿವಾಡವನ್ನು ಜೀರ್ಣೋದ್ಧಾರ ಮಾಡಿದನೆಂದು ಶಾಸನ ತಿಳಿಸುತ್ತದೆ. ಶಾಸನದಲ್ಲಿ ಭಾಷೆಯನ್ನು ಭಿನ್ನವಾಗಿ ಅರ್ಥೈಸಿದ ನರಸಿಂಹಾಚಾರ್ಯರು ಚಂನಬೊಂಮರಸನ ತಂದೆಯಾದ ಕೇಶವನಾಥನನ್ನು ಪ್ರಧಾನಸಿರೋಮಣಿ ಎಂದು ಭಾವಿಸಿದ್ದಾರೆ.[3]

ನುಗ್ಗೇಹಳ್ಳಿ

ಕ್ರಿ.ಶ. ೧೬ನೆಯ ಶತಮಾನದ ೫೫೬ನೆಯ ಶಾಸನ ನುಗುಹಳ್ಳಿಯ ನಾಯಕನಾದ ತಿರುಮಲರಾಜನಾಯಕನು ತನ್ನ ತಂದೆ ದಾಸಪನಾಯಕನಿಗೆ ಪುಣ್ಯವಾಗಲಿ ಎಂದು ದಾಸಪುರ ಗ್ರಾಮವನ್ನು ದಾನಮಾಡಿದನೆನ್ನುತ್ತದೆ. ಸ್ವಲ್ಪಮಟ್ಟಿಗೆ ಭಿನ್ನವಾಗಿರುವ ಈ ಶಾಸನದಲ್ಲಿ ಕಿಕೇರಿಯ ಉಲ್ಲೇಖವಿದೆ. ಇದು ಶ್ರವಣಬೆಳಗೊಳದ ಸಮೀಪದಲ್ಲಿರುವ ಕಿಕ್ಕೇರಿಗ್ರಾಮ.

ಕವಿಗಳು-ರೂವಾರಿಗಳು

ಪ್ರಸ್ತುತ ಸಂಪುಟದಲ್ಲಿ ಶಾಸನಕವಿಗಳು ಹಲವರು ಬೆಳಕಿಗೆ ಬಂದಿದ್ದಾರೆ. ಕವಿಚಕ್ರವರ್ತಿ ಎನಿಸಿದ ರನ್ನನದೆಂದು ಹೇಳಲಾದ ಎರಡು ಶಾಸನಗಳು (ನಂ. ೪೩ ಮತ್ತು ೨೨೪) ಇದರಲ್ಲಿವೆ. ಎರಡು ಶಾಸನಗಳ ಪಾಠಗಳೂ ಒಂದೇ ಆಗಿವೆ. ಶ್ರೀ ಕವಿರತ್ನ ಎಂಬುದು ಆ ಶಾಸನಪಾಠ. ರತ್ನ ಎಂಬುದು ರನ್ನ ಎಂಬ ಹೆಸರಿನ ಸಂಸ್ಕೃತರೂಪ. ಕವಿ ಎಂಬ ಪೂರ್ವಪ್ರತ್ಯಯ ಸೇರಿ ಕವಿರತ್ನವಾಗಿದೆ. ಇದು ರನ್ನ ಕವಿಯ ಹೆಸರೆಂದೂ ಯಾತ್ರಾರ್ಥಿಯಾಗಿ ಇಲ್ಲಿಗೆ ಬಂದಿರಬಹುದಾದ ಜೈನಧರ್ಮಾನುಯಾಯಿಯಾದ ಈ ಕವಿಯು ತನ್ನ ಹೆಸರನ್ನು ಇಲ್ಲಿ ಕೊರೆಯಿಸಿರುವನೆಂದೂ ಹೇಳಲಾಗಿದೆ. ಇದನ್ನು ಒಪ್ಪಿಕೊಳ್ಳಲು ಖಚಿತವಾದ ಆಧಾರಗಳಿಲ್ಲವಾದರೂ ಈ ಊಹೆಯನ್ನು ಅಲ್ಲಗಳೆಯುವಂತಿಲ್ಲ. ಇದರಂತೆಯೇ ನಾಗವರ್ಮ (ನಂ. ೨೩೧ ಮತ್ತು ೨೫೪) ಎಂಬುದು 'ಛಂದೋಂಬುಧಿ'ಯ ಕರ್ತೃವಾದ ನಾಗವರ್ಮನನ್ನು ಸೂಚಿಸಬಹುದೆಂದೂ ಹೇಳಲಾಗಿದೆ.

---

1 R. Sewell and S. K. Aiyangar, *Historical Inscriptions of Southern India*, p. 339.
2 *E. C.*, Vol. IV, Hs 63.
3 Introduction, p. 21 and p. 67

ಸಂಪುಟದಲ್ಲಿ ಬೆಳಕಿಗೆ ಬಂದಿರುವ ಇತರ ಶಾಸನ ಕವಿಗಳು–ಲೇಖಕರು ಹನ್ನೆರಡನೆಯ ಶತಮಾನ ಮತ್ತು ನಂತರದವರು. ಕ್ರಿ.ಶ. ೧೧೧೫ ಹಾಗೂ ೧೧೨೦ನೆಯ ವರ್ಷದ ೧೫೬ ಮತ್ತು ೧೩೬ನೆಯ ಶಾಸನಗಳನ್ನು ಬರೆದಾತ ಪೆರ್ಗ್ಗಡೆ ಚಾವರಾಜ. ೧೧೨೩ನೆಯ ವರ್ಷದ ಶಾಸನವನ್ನು (೧೩೫) ಹೆಗ್ಗಡೆ ಮರ್ದ್ದಿಮಯ್ಯ ಬರೆದನು. ಕ್ರಿ.ಶ. ೧೧೨೯ನೆಯ (ನಂ. ೭೭) ಶಾಸನದ ಕರ್ತೃವಾದ ಮಲ್ಲಿನಾಥನು 'ಬಿರುದಲೇಖಕಮದನಮಹೇಶ್ವರ' ನೆಂದು ಬಿರುದಾಂಕಿತನಾಗಿದ್ದಾನೆ. ಈತನು ಮಲ್ಲಿಷೇಣಮಲಧಾರಿದೇವರ ಗುಡ್ಡನಾಗಿದ್ದು ಆತನ ನಿಷಿದಿಶಾಸನವನ್ನು ರಚಿಸಿದ್ದಾನೆ (ನಂ. ೭೭). ೧೭೩ನೆಯ ಶಾಸನವನ್ನು ಬರೆದಾತ 'ಲಿಖಿತಾಮನೋಹರ' ನಪ್ಪ ಗಂಗಣ್ಣ. ಶಾಸನದಲ್ಲಿ ಅದು 'ಗಂಗಣ್ಣನ ಲಿಖಿತ' ವೆಂಬ ಮಾತಿದೆ. ಆದರೆ ಶಾಸನವನ್ನು ಕೆತ್ತಿದ ರೂವಾರಿಯ ಹೆಸರನ್ನೂ ಅದರಲ್ಲಿ ಉಲ್ಲೇಖಿಸಿರುವುದರಿಂದ ಗಂಗಣ್ಣನು ಶಾಸನ ಕರ್ತೃವೆಂದೇ ಭಾವಿಸಬೇಕಾಗುತ್ತದೆ. ಒಮ್ಮೊಮ್ಮೆ ಕವಿ ರಚಿಸಿದ ಶಾಸನವನ್ನು ಕಲ್ಕುಟಿಗ ಕೆತ್ತುವ ಮುನ್ನ, ಕಲ್ಲಿನ ಮೇಲೆ ಮುದ್ದಾದ ಅಕ್ಷರಗಳಲ್ಲಿ 'ಬರೆದ' ಜನರ ಉಲ್ಲೇಖವೂ ಶಾಸನಗಳಲ್ಲಿ ಬರುತ್ತದೆ.

ಈ ದೃಷ್ಟಿಯಲ್ಲಿ ೧೭೬ನೆಯ ಶಾಸನದಲ್ಲಿ ಕಾಣಿಸಿಕೊಂಡಿರುವ ಲೇಖಕ ಬೋಕಿಮಯ್ಯ ಶಾಸನ ಕರ್ತೃವೇ ಅಥವಾ ಅದನ್ನು ಕಲ್ಲಿನ ಮೇಲೆ ಬರೆದಾತನೇ ಎಂದು ಹೇಳುವುದು ಕಷ್ಟವಾಗುತ್ತದೆ. ಆದರೆ ಇಲ್ಲಿಯೂ ರೂವಾರಿಯ ಹೆಸರಿರುವುದರಿಂದ ಈತನನ್ನು ಸಹ ಶಾಸನಕವಿ ಎಂದೇ ಪರಿಗಣಿಸಬೇಕು. ಆದರೆ ೧೧ನೆಯ ಶತಮಾನಕ್ಕೆ ಸೇರಿದ ೨೧೫ನೆಯ 'ದುಗಣ ಬರೆದ' ನೆಂಬ ಶಾಸನದ ದುಗಣನು ಅದನ್ನು ಕಲ್ಲಿನ ಮೇಲೆ ಬರೆದಾತನಷ್ಟೇ ಎಂದು ತೋರುತ್ತದೆ. ಅದರಂತೆಯೇ ೭ನೆಯ ಶತಮಾನದ ಶಾಸನವನ್ನು ಬರೆದಾತ ಪಲ್ಲವಾಚಾರಿ (೨೪). ಇಲ್ಲಿ ಈತನನ್ನು ರೂವಾರಿ ಎಂದು ಪರಿಗಣಿಸಬೇಕಾಗುತ್ತದೆ.

೧೭೩ನೆಯ ಶಾಸನವನ್ನು ಹೊರತುಪಡಿಸಿ ಉಳಿದ ೭೭, ೮೨, ೧೩೫, ೧೩೬, ೧೪೯, ೧೫೯ ಮತ್ತು ೫೪೭ನೆಯ ಶಾಸನಗಳನ್ನು ಕಂಡರಿಸಿದ ರೂವಾರಿ 'ಬಿರುದರೂವಾರಿಮುಖತಿಳಕ'ನೆನಿಸಿದ ಹೊಯ್ಸಳಾಚಾರಿಯ ಮಗ ಗಂಗಾಚಾರಿ ವರ್ಧಮಾನಾಚಾರಿ. ೧೭೬ನೆಯ ಶಾಸನವನ್ನು ಕೊರೆದಾತ ಗಂಗಾಚಾರಿಯ ತಮ್ಮ ಕಾಂವಾಚಾರಿ. ಚಾಮುಂಡರಾಯ ಬಸದಿಯ ಮುಂದಿನ ಬಂಡೆಯಮೇಲಿನ ಇದೇ ಕಾಲದ ನಂ. ೧೭೩ನೆಯ ಶಾಸನವನ್ನು ಕಂಡರಿಸಿದಾತ 'ಸೆವಣು ಬಲ್ಲರದೇವ' ಬಿರುದಾಂಕಿತನಾದ ರೂವಾರಿ ರಾವೋಜನ ಮಗ ದಾಸೋಜ.

ಪ್ರಖ್ಯಾತವಾದ 'ಗುಮ್ಮಟಜಿನೇಂದ್ರಸ್ತವ' ಶಾಸನವನ್ನು (ನಂ. ೩೩೬) ರಚಿಸಿದಾತ ಕನ್ನಡಗವಿಬಪ್ಪನೆಂದೆನಿಸಿದ ಬೊಪ್ಪಣಪಂಡಿತ. ಕವಡಮಯ್ಯನ ದೇವಣನಾಣತಿಯಂತೆ ಬಾಗಡಗೆಯ ರುದ್ರ ಇದನ್ನು ಪ್ರತಿಷ್ಠಾಪಿಸಿದ. ೩೬೦ನೆಯ ಸಂಸ್ಕೃತ ಶಾಸನದ ಕವಿ ಅರ್ಹದ್ದಾಸ. ಇದು ಪಂಡಿತಾರ್ಯಯತಿಯ ನಿಷಿಧಿಶಾಸನ. ಇದರ ಕಾಲ ಕ್ರಿ. ಶ. ೧೩೯೮. ಇದರಂತೆಯೇ ಕ್ರಿ. ಶ. ೧೪೩೨ನೆಯ ಶ್ರುತಮುನಿಯ ನಿಷಿಧಿ ಶಾಸನವನ್ನು (ನಂ. ೩೬೪) ರಚಿಸಿದಾತ ಮಂಗರಾಜಕವಿ. ಇದೂ ಸಂಸ್ಕೃತ ಶಾಸನವೇ.

ಬೊಮ್ಮೇನಹಳ್ಳಿಯ ಶಾಸನ (ನಂ. ೫೫೨) ಕ್ರಿ.ಶ. ೧೧೩೮ (ಅಥವಾ ೧೧೪೦)ನೆಯ ವರ್ಷದಲ್ಲಿ ಕೆಱೆಯ ಬಸವಾಚಾರಿ ಒಂದು ಕೆಱೆಯನ್ನೂ ದೇವಾಲಯವನ್ನೂ ಕಟ್ಟಿಸಿದನೆಂದು ಹೇಳುತ್ತದೆ. ಶಾಸನ ಒಡೆದಿದ್ದು ಆ ದೇವಾಲಯ ಯಾವ ದೇವರದು ಎಂಬುದು ತಿಳಿಯದಾಗಿದೆ. ಆದರೆ, ಶಾಸನದಲ್ಲಿ ದೇವರನ್ನು ಮಾಡಿದುದು 'ಮೌಲಾಚಾರಿಯುಂ ಆತನಳಿಯ ಕತಾಚಾರಿಯುಂ' ಎಂದು ಹೇಳಿದೆ; ಇವರೀರ್ವರೂ ರೂವಾರಿಗಳೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮೌಲಾಚಾರಿ ಎಂಬ ಹೆಸರು ಗಮನಾರ್ಹವಾಗಿದೆ.

ಅನಿರ್ದಿಷ್ಟ ವಿಷಯುಗಳು

೧೧೪ನೆಯ ಶಾಸನ ಪೆತ್ಬ್ಬಾಣ ವಂಶಕ್ಕೆ ಸೇರಿದ ಒಬ್ಬಾತನ ಮರಣವನ್ನು ಗುರುತಿಸುವ ಒಂದು ನಿಷಿದಿ ಶಾಸನ. ಕ್ರಿ.ಶ. ೭ನೆಯ ಶತಮಾನಕ್ಕೆ ಸರಿಹೋಗಬಹುದಾದ ಲಿಪಿಯಲ್ಲಿದೆ. ಪೆತ್ಬ್ಬಾಣ ಎಂಬುದು ಪೆಬ್ಬಾಣ (ಬೃಹತ್ಬಾಣ) ವಂಶವಾಗಿರಬಹುದು. ಸಾಯುವ ಮುನ್ನ ಈತನಿಗೆ ಮೃತ್ಯು ಸಮಿಾಪಿಸುತ್ತದೆಯೆಂಬ ತಿಳಿವು ಉಂಟಾಗಿ ಈತನು ವ್ರತಗಳನ್ನು ಕೈಗೊಂಡಂತೆ ತೋರುತ್ತದೆ. ದುರದೃಷ್ಟವಶಾತ್ ಶಾಸನ ಧಕ್ಕೆ ಹೊಂದಿದ್ದು ವಿವರಗಳನ್ನು ತಿಳಿಯಲು ಸಾಧ್ಯವಿಲ್ಲವಾಗಿದೆ.

೧೩ನೆಯ ಶಾಸನವೂ ಸುಮಾರು ಕ್ರಿ. ಶ. ೭ನೆಯ ಶತಮಾನಕ್ಕೆ ಸೇರಿದುದೇ ಆಗಿದೆ. ಕಟವಪ್ರಗಿರಿಯ ಮೇಲೆ ಅರಿಷ್ಟನೇಮಿಯು ಮರಣಹೊಂದಿದ ಸಮಯದಲ್ಲಿ ದಿಂಡಿಕರಾಜನು ಅಲ್ಲಿ ಸಾಕ್ಷಿಯಾಗಿದ್ದನೆಂದು ಶಾಸನ ಹೇಳಿದೆ. ಈ

ದಿಂಡಿಕರಾಜನು ಗಂಗಪೃಥ್ವೀಪತಿ (II)ಯ ಉದಯೇಂದಿರಮ್ ತಾಮ್ರಶಾಸನದಲ್ಲಿ ಉಕ್ತನಾದವನೆಂದು ಮೊದಲು ಅಭಿಪ್ರಾಯ ಪಟ್ಟಿದ್ದ ನರಸಿಂಹಾಚಾರ್ಯರು ನಂತರ ತಾವೇ ಅದನ್ನು ಸಂದೇಹಿಸಿದ್ದಾರೆ.[1] ಈ ದಿಂಡಿಕರಾಜನು ಯಾರು ಎಂದು ಹೇಳುವುದಕ್ಕೆ ಇನ್ನೂ ಯಾವ ಸರಿಯಾದ ಆಧಾರವೂ ದೊರೆತಿಲ್ಲ.

ಚಿಕ್ಕಬೆಟ್ಟದ ಬಾಹುಬಲಿ ಬಸದಿಯ ಬಳಿ ಇರುವ ಒಂದು ವೀರಗಲ್ಲನ್ನು ಬಗಿಯೂರಲ್ಲಿ ಸತ್ತ ಸಾವಿಯಬ್ಬೆಯ ಸ್ಮಾರಕಕ್ಕಾಗಿ ಸ್ಥಾಪಿಸಲಾಗಿದೆ (ನಂ. ೧೭೨). ಈಕೆ ರಣಮೂರ್ಖನೃಪಾಮ್ನಾಯಕ್ಕೆ ಸೇರಿದ ಬಾಯಿಕ ಮತ್ತು ಜಾಬಯ್ಯೆ ಇವರ ಮಗಳು. ಈಕೆಗೆ ಮಾದುವರ ಮತ್ತು ದೋಯಿಲಮ್ಮನೆಂಬಿಬ್ಬರು ಸೊದರರಿದ್ದರು. ಧೋರನ ಮಗನಾದ ಲೋಕ ವಿದ್ಯಾಧರನು ಈಕೆಯ ಪತಿ. ಶಾಸನದ ಬಹುಭಾಗ ಒಡೆದುಹೋಗಿ ವಿವರಗಳು ಹಾಳಾಗಿವೆ. ಈಕೆ ಯುದ್ಧವೊಂದರಲ್ಲಿ ಮಡಿದಂತೆ ತೋರುತ್ತದೆ. ಉದಯವಿದ್ಯಾಧರನ ಉಲ್ಲೇಖವಿದೆ. ಇದು ಲೋಕವಿದ್ಯಾಧರನ ಇನ್ನೊಂದು ಹೆಸರೋ, ಬಿರುದೋ ಇದ್ದಂತೆ ತೋರುತ್ತದೆ. ಈತನು ಗಂಗರ ರಾಜಕುಮಾರನೆಂಬುದು ಸಂದೇಹಾಸ್ಪದವಾಗಿದೆ ಎಂದಿದ್ದಾರೆ ನರಸಿಂಹಾಚಾರ್ಯರು. ಆದರೆ ಸಾವಿಯಬ್ಬೆ ರಣಮೂರ್ಖವೆಂಬ ಮನೆತನಕ್ಕೆ ಸೇರಿದವಳೆಂದು ಶಾಸನದಲ್ಲಿಯೇ ಸ್ಪಷ್ಟವಾಗಿ ಹೇಳಿದೆ. ಇದು ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ ಶಾಸನ. ಚಾಲುಕ್ಯ ಜಗದೇಕಮಲ್ಲ(I)ನ, ಕ್ರಿ. ಶ. ೧೦೨೪ಕ್ಕೆ ಸೇರಿದ, ಬಿಜಾಪುರ ಜಿಲ್ಲೆಯ ಹೆಗ್ಗೂರು ಶಾಸನವು[1] ರಣಮೂರ್ಖವಂಶಕ್ಕೆ ಸೇರಿದ ಮಹಾಸಾಮಂತ ಅಯ್ಯಣವರ್ಮರಸನು ನೀಡಿದ ಭೂಮಿದಾನವೊಂದನ್ನು ಉಲ್ಲೇಖಿಸುತ್ತದೆ ; ನಾವು ಪರಿಶೀಲಿಸುತ್ತಿರುವ ಪ್ರಸ್ತುತ ಶಾಸನದಲ್ಲಿ ಹೇಳಿದ ವಂಶವು ಇದೇ ವಂಶವಾಗಿರುವ ಸಾಧ್ಯತೆ ಇದೆ.

ಜಿನನಾಥಪುರದ ೧೧ನೆಯ ಶತಮಾನಕ್ಕೆ ಸೇರಿದ ಶಾಸನ (೫೨೪) ಬಹಳ ಮಟ್ಟಿಗೆ ಒಡೆದಿದೆ. ಯಾರೋ ಒಬ್ಬಾತ ಸನ್ಯಸನದಿಂದ ಮರಣ ಹೊಂದಿದನೆಂದು ಇದು ತಿಳಿಸುತ್ತದೆ. ಆತನ ಹೆಸರು ಗೊತ್ತಾಗಿಲ್ಲ. ಶಾಸನದ ಭಾಗದ ಕೆಲವು ಸಾಲುಗಳಲ್ಲಿ ಚೋಟಿಪೆರ್ಮ್ಮಾಡಿಯರ (ಬಂಟನಾದ) ಸಾವಿತರದೇವನು ಯುದ್ಧದಲ್ಲಿ ಕಾದಿದನೆಂದು ಹೇಳಿದೆ. ಈತನು 'ಪುನಕಾಲರ ಮಗಂ ಜಾನಿಕವನ ತಮ್ಮಂ' ಎಂದಿದೆ. ಈ ಸಂದರ್ಭದಲ್ಲಿ ಗಂಗರ ಬೀಡಿನ ಉಲ್ಲೇಖವೂ, ಹಲವಾರು ಲೆಂಕರು ಸತ್ತರೆಂಬ ವಿಷಯವೂ ಶಾಸನದಲ್ಲಿದೆ. ಆದರೆ ಇವರುಗಳನ್ನು ಗುರುತಿಸಲು ಸಾಧ್ಯವಿಲ್ಲವಾಗಿದೆ.

ದೊಡ್ಡಬೆಟ್ಟದ ಗೊಮ್ಮಟೇಶ್ವರಾಲಯದ ಮುಂದಿನ ಮಾನಸ್ತಂಭಯಕ್ಷನನ್ನು ಹರಿದೇವ ಮತ್ತು ಹಂಪರಾಜರ ಅನುಜನಾದ ಸಚಿವ ಬಲದೇವನು ಮಾಡಿಸಿದನೆಂದು ಆ ಸ್ತಂಭದ ಬುಡದಲ್ಲಿರುವ ಶಾಸನದಿಂದ (ನಂ. ೩೯೫) ತಿಳಿದುಬರುತ್ತದೆ. ೩೨೨ನೆಯ ಶಾಸನ ಅಷ್ಟದಿಕ್ಪಾಲಕರ ಮಂಟಪದಲ್ಲಿರುವ ಭುವನೇಶ್ವರಿಯ ವಿಗ್ರಹದ ಸುತ್ತಲೂ ಕೆತ್ತಲಾಗಿದೆ. ಈ ಶಾಸನದಲ್ಲಿ ಅರಸಾದಿತ್ಯ ಮತ್ತು ಆಚಾಂಬಿಕೆಗೆ ಪಂಪರಾಜ, ಹರಿದೇವ ಮತ್ತು ಬಲದೇವರೆಂಬ ಮೂವರು ಮಕ್ಕಳಿದ್ದರೆಂದು ಹೇಳಿದೆ. ಮೇಲೆ ಹೇಳಿದ ಮೂವರೇ ಇವರು. ಇವರುಗಳು ಮಾಚಿರಾಜನ ಮಾವಂದಿರೆಂದೂ ಕರ್ನ್ನಾಟಕಕುಳತಿಳಕರೆಂದೂ ಹೇಳಿದೆ. ಈ ಕರ್ನಾಟಕಕುಲವೆಂಬುದು ಹೊಯ್ಸಳಕರ್ನಾಟಕವೆಂಬ ಪಂಗಡಕ್ಕೆ ಅನ್ವಯಿಸುವ ಹೆಸರಾಗಿರಬಹುದೇ ? ಈ ಶಾಸನ ೧೨ನೆಯ ಶತಮಾನದ್ದು.

ಇದೇ ಕಾಲಕ್ಕೆ ಸೇರಿದ ೩೭೧ ಮತ್ತು ೩೭೩ನೆಯ ಶಾಸನಗಳಿಂದ ಭರತ ಮತ್ತು ಬಾಹುಬಲಿಯ ವಿಗ್ರಹಗಳನ್ನು ಮಜಿಯಾನೆದಂಡನಾಯಕನ ಸೋದರನಾದ ಭರತೇಶ್ವರದಂಡನಾಯಕನು ಮಾಡಿಸಿದನೆಂದು ತಿಳಿದುಬರುತ್ತದೆ. ಈ ಭರತೇಶ್ವರನಿಗೆ ಶಾಂತಲೆ ಎಂಬ ಮಗಳಿದ್ದಳು. ಆಕೆ ಬೂಚಿರಾಜನನ್ನು ಮದುವೆಯಾಗಿದ್ದು ಅವರಿಗೆ ಮಜಿ . . . . ಎಂಬ ಮಗನಿದ್ದನು. ಈ ಮಜಿ . . . . ಎಂಬಾತನ ಹೆಸರು ಮಜಿಯಾನೆ ಎಂದಾಗಿರಬಹುದು.

ನಂ. ೬೧ನೆಯ ಶಾಸನ ಮೊದಲು ಚೌಕಾಕಾರದ ಒಂದು ಕಂಬದ ಮೇಲೆ ಕೆತ್ತಲಾಗಿತ್ತು. ಇದನ್ನು ಭಿನ್ನವಾಗಿ ಒಡೆದು ವಿಗ್ರಹಗಳ ಪೀಠಗಳಾಗಿ ಈಗ ಮಾರ್ಪಡಿಸಲಾಗಿರುವ ಕಾರಣ ಶಾಸನದ ಬಹುಭಾಗ ಹಾಳಾಗಿದೆ. ೧೨ನೆಯ ಶತಮಾನದ ಈ ಶಾಸನ ಭಟ್ಟಾರಕನೊಬ್ಬ ಸಲ್ಲೇಖನಾ ನಿಮಿತ್ತ ಉತ್ತರಾಭಿಮುಖವಾಗಿ ಹೋಗಿ ಕೂಂಡಿನಾಡ ಹೂವಿನಬಾಗಿಯಲ್ಲಿ ಸ್ವರ್ಗ್ಗ ಪ್ರಾಪ್ತನಾದುದನ್ನು ತಿಳಿಸುತ್ತದೆ. ಈತನು ಭಾನುಕೀರ್ತಿಯಾಗಿರಬಹುದು. ಇದನ್ನರಿತ ಈತನ ಶಿಷ್ಯನಾದ ಬಾಳಚಂದ್ರದೇವನೂ ಗುಡ್ಡಿ ಹೆಗ್ಗಡಿತಿ ಬಾಗಣಬ್ಬೆಯೂ ನಿಶಿದಿಯೊಂದನ್ನು ಮಾಡಿಸಿದರು. ಕೂಂಡಿನಾಡು ಎಂಬುದು ಈಗಿನ ಬೆಳಗಾಂ ಜಿಲ್ಲೆಯ ಸುತ್ತಲಿನ ಪ್ರದೇಶ. ಹೂವಿನಬಾಗೆಯೂ ಅಂದು ಪ್ರಸಿದ್ಧವಾದ ಜೈನಕೇಂದ್ರಗಳಲ್ಲೊಂದಾಗಿದ್ದಿರಬಹುದಾದ ಸಾಧ್ಯತೆ ಇದೆ.

ತೇರಿನ ಬಸದಿಯ ತೇರಿನ ಮೇಲ್ಪಟ್ಟಿಯಲ್ಲಿ ಕೆತ್ತಿರುವ ನಂ. ೧೭೦ನೆಯ ಶಾಸನದ ಕಾಲ ಕ್ರಿ.ಶ. ೧೧೧೭ ಈ ಮಂದರ

---

[1] Introduction, p. 68

[1] *S.I.I.*, Vol X1, pt. I, No. 62

(ಅಂದರೆ ಈ ತೇರು)ವನ್ನು ಹಾಗೂ ಜಿನಗೃಹ (ತೇರಿನ ಬಸದಿ)ವನ್ನೂ ಭಾನುಕೀರ್ತಿಯ ಶಿಷ್ಯೆಯರಾದ ಮಾಚಿಕಬ್ಬೆ ಮತ್ತು ಶಾಂತಿಕಬ್ಬೆಯರು ಮಾಡಿಸಿದರು. ಈ ಇಬ್ಬರೂ ಪೊಯ್ಸಳಸೆಟ್ಟಿ ಹಾಗೂ ನೇಮಿಸೆಟ್ಟಿಯರ ತಾಯಂದಿರು. ಅವರಿಬ್ಬರೂ 'ಪೊಯ್ಸಳನ ರಾಜಶ್ರೇಷ್ಠಿ'ಗಳೆಂದು ಶಾಸನ ಹೇಳಿದೆ. ಭಾನುಕೀರ್ತಿ ೮೧ನೆಯ, ಮೇಲೆ ಪ್ರಸ್ತಾಪಿಸಿರುವ, ಶಾಸನದಲ್ಲಿ ಉಲ್ಲೇಖಿತನಾದ ಭಾನುಕೀರ್ತಿಯೇ ಆಗಿದ್ದಂತೆ ತೋರುತ್ತದೆ.

ಶ್ರವಣಬೆಳಗೊಳದ ಮಂಗಾಯಿಬಸದಿಯನ್ನು ಮಾಡಿಸಿದ ಕೀರ್ತಿ 'ಸಮ್ಯಕ್ತ್ವಚೂಡಾಮಣಿ, ರಾಯಪಾತ್ರಚೂಡಾಮಣಿ' ಎನಿಸಿದ ಬೆಳುಗುಳದ ಮಂಗಾಯಿಗೆ ಸಲ್ಲಬೇಕು (ನಂ. ೪೭೦). ಈಕೆ ಅಭಿನವಚಾರುಕೀರ್ತಿಪಂಡಿತನ ಶಿಷ್ಯೆ. ಈ ಬಸದಿಗೆ ತ್ರಿಭುವನಚೂಡಾಮಣಿ ಚೈತ್ಯಾಲಯವೆಂಬ ಅಭಿದಾನವಿತ್ತು. ಆದರೂ ಇದು ಮಂಗಾಯಿ ಬಸದಿ ಎಂದೇ ಪ್ರಸಿದ್ಧವಾಗಿದೆ. ಸುಮಾರು ೧೪ನೆಯ ಶತಮಾನದಲ್ಲಿ ಕಟ್ಟಲಾದ ಈ ಬಸದಿಯನ್ನು ಮುಂದಿನ ಶತಮಾನದಲ್ಲಿ ಗೇರುಸೊಪ್ಪೆಯ ಹಿರಿಯಅಯ್ಯನ ಶಿಷ್ಯನಾದ ಗುಮ್ಮಟಣ್ಣನು ಜೀರ್ಣೋದ್ಧಾರ ಮಾಡಿದನು (೪೭೩). ೧೬ನೆಯ ಶತಮಾನದಲ್ಲಿ ಅದೇ ಗೇರುಸೊಪ್ಪೆಯ ಶ್ರೀಮತಿ ಅವ್ವೆ ಮತ್ತು ಇತರರು ನಾಲ್ಕು ಗದ್ಯಾಣವನ್ನೂ ದಾನಮಾಡಿದರು (೪೭೪). ಈ ಬಸದಿಗೆ ಬೆಳುಗೊಳದ ಮತ್ತು ಮುತ್ತುಗದ ಹೊನ್ನೇನಹಳ್ಳಿಯ ಹಲರು ಗೌಡಗಳು ಭೂಮಿ ದಾನವನ್ನು ಮಾಡಿದರು (೪೭೧).

ಗೇರುಸೊಪ್ಪೆಯ ಚವುಡಿಸೆಟ್ಟಿಯು ಸುಪ್ರಸಿದ್ಧ ಜಿನಭಕ್ತನೂ ಮಹಾದಾನಿಯೂ ಆಗಿದ್ದಂತೆ ತೋರುತ್ತದೆ. ಅಗಣಿ ಬೊಂಮಯ್ಯನ ಮಗ ಕಂಭಯ್ಯ ಮತ್ತು ಹೂವಿನ ಚೆಂನಯ್ಯ ಇವರುಗಳ ಭೂಮಿ 'ಅಡಹಾಗಿರಲಾಗಿ' ಅದನ್ನು ಚೌಡಿಸೆಟ್ಟಿಯು ಬಿಡಿಸಿಕೊಟ್ಟನು. ತಮ್ಮ ಕೃತಜ್ಞತೆಯನ್ನು ಸಲ್ಲಿಸಲೆಂದು ಕಂಭಯ್ಯನು ದೊಡ್ಡ ಬೆಟ್ಟದ ತ್ಯಾಗದ ಬ್ರಹ್ಮನ ಮುಂದಿನ ಹೂದೋಟವನ್ನು ಕೊಟ್ಟುದಲ್ಲದೆ ಒಂದು ತಂಡಕ್ಕೆ ಆಹಾರದಾನವನ್ನೂ ಮಾಡಿದನು (೩೨೫). ಚೆಂನಯ್ಯನು ಸಹ ಇಂತಹುದೇ ಒಂದು ದಾನಮಾಡಿರಬಹುದಾದರೂ ಅದರ ವಿವರಗಳು ತಿಳಿಯದಾಗಿದೆ (೩೨೮). ಇದರಂತೆಯೇ ಚೌಡಿಸೆಟ್ಟಿಯು ಇನ್ನೆರಡು ಸಂದರ್ಭಗಳಲ್ಲಿ ಇಬ್ಬರಿಗೆ ಅವರಿಗೆ ಬಂದ ಕಷ್ಟವನ್ನು ಪರಿಹಾರ ಮಾಡಿದ್ದಕ್ಕಾಗಿ, ಅವರು (ದೊಡದೆವಪಗಳ ಮಗ ಚಿಕಂಣ ಮತ್ತು ಕವಿಗಳ ಮಗ ಬೊಂಮಣ) ಒಂದು ತಂಡಕ್ಕೆ ಆಹಾರದಾನವನ್ನು ಮಾಡಿದರು (೩೨೬, ೩೨೭). ತಂಡ ಎಂದರೆ ಬಹುಶಃ ಯಾತ್ರಿಗಳ ಅಥವಾ ಮುನಿಗಳ ಒಂದು ಗುಂಪು ಇರಬಹುದು. ೩೨೭ರಲ್ಲಿ ಬೊಂಮಣನು ವರ್ಷ ಒಂದಕ್ಕೆ ಆರುತಿಂಗಳು ಪರ್ಯಂತ ಆಹಾರದಾನವನ್ನು ನಡೆಸಿಕೊಂಡು ಬರುವುದಾಗಿ ಹೇಳಿದೆ.

ಗೊಮ್ಮಟೇಶ್ವರನ ಸುತ್ತಾಲಯದಲ್ಲಿನ ಚತುರ್ವಿಂಶತೀರ್ಥಕರರನ್ನು ಮಾಡಿಸಿದಾತ ವಡ್ಡಬ್ಯವಹಾರಿಯಾಗಿದ್ದ ಮೊಸಳೆಯ ಬಸವಿಸೆಟ್ಟಿ. ಈ ತೀರ್ಥಕರರ ಅಷ್ಟವಿಧಾರ್ಚ್ಚನೆಗೆ ಅದೇ ಮೊಸಳೆಗ್ರಾಮದ ನಕರಂಗಳನೇಕರು ಪ್ರತಿವರ್ಷವೂ ನಿಗದಿಮಾಡಲ್ಪಟ್ಟ ಹಣವನ್ನು ಪಡಿಯಾಗಿ ದಾನಮಾಡಿದರು (೩೩೭, ೩೩೮). ಇದೇ ವಿಷಯವನ್ನು ೩೫೬ನೆಯ ಶಾಸನದಲ್ಲೂ ಹೇಳಿದೆ. ಈ ದಾನಿಗಳಲ್ಲಿ ಬಹಳ ಪಾಲು ಜನರು ಸೆಟ್ಟಿಗಳು. ಇವರಲ್ಲಿ ಮಾರಾಂಡಿಸೆಟ್ಟಿ, ಬಮ್ಮಾಂಡಿ, ಅಮ್ಮಾಂಡಿಸೆಟ್ಟಿ ಎಂಬುವರ ಹೆಸರುಗಳು ಗಮನಾರ್ಹವಾಗಿದೆ. ಇವು ಕನ್ನಡಿಗರ ಹೆಸರುಗಳಿದ್ದಂತಿಲ್ಲ. ಕೇರಳ ಅಥವಾ ತಮಿಳುನಾಡಿನಿಂದ ಬಂದು ಇಲ್ಲಿ ನೆಲಸಿದವರಿವರಾಗಿರಬಹುದು. ದಾನಿಗಳಲ್ಲಿ ಹಲವರು ಗ್ರಾಮಾಧಿಕಾರಿಗಳು ಸೇರಿದ್ದಾರೆ—ವರ್ದ್ಧಮಾನಹೆಗ್ಗಡೆ, ನಾಗವಹೆಗ್ಗಡಿತಿ, ಚಾಗವೆಹೆಗ್ಗಡತಿ, ಬೋಕವೆಹೆಗ್ಗಡಿತಿ, ತೆರಣಿಯ ಚೌಂಡೆಯಹೆಗ್ಗಡೆ, ಇತ್ಯಾದಿ.

ಹತ್ತನೆಯ ಶತಮಾನದ, ೪೮ನೆಯ ಶಾಸನ 'ನೊಳಂಬಕುಲಾಂತಕ', 'ಬೀರರಬಣ್ಟ' ಎಂಬ ಬಿರುದುಗಳನ್ನು ಧರಿಸಿದ ಪರಿಕರ ನಕಿಗ ಎಂಬಾತನನ್ನು ಉಲ್ಲೇಖಿಸಿದೆ. ಹನ್ನೊಂದನೆಯ ಶತಮಾನದ ಇನ್ನೊಂದು ಶಾಸನದಲ್ಲಿ ಪಡಿಕಱ ಮಾರುಗಬಲರ ಚಟ್ಟನ ಪ್ರಸ್ತಾಪವಿದೆ (ನಂ. ೬೬). ಪರಿಕರ ಎಂಬುದು ಪಡಿಕಱ ಎಂಬುದರ ಅರ್ಥವನ್ನೇ (ಅಂದರೆ ಚಾರ, ಹರಿಕಾರ) ಹೊಂದಿದಂತೆ ತೋರುತ್ತದೆ. ನಕಿಗ ಒಬ್ಬ ಹರಿಕಾರನಾಗಿರಬೇಕು. ಈತನು 'ನೊಳಂಬಕುಲಾಂತಕ' ಮುಂತಾದ ಹಿರಿದಾದ ಬಿರುದನ್ನು ಧರಿಸಿರುವುದು ಗಮನಾರ್ಹವಾಗಿದೆ. ೬೬ನೆಯ ಶಾಸನದ ಪಡಿಕಾಱನ ಹೆಸರು ತಿಳಿಯದು. ಈತನು ಮಾರುಗಬಲನ ಚಟ್ಟ–ಶಿಷ್ಯ–ನೆಂದಿದೆ. 'ಸುಳಬಣ್ಟರಸುಲ' ಎಂಬ ಬಿರುದನ್ನು ಧರಿಸಿದ್ದಾನೆ.

೨೦೪ನೆಯ ಕ್ರಿ.ಶ. ೧೧೩೦ನೆಯ ವರ್ಷದ ಶಾಸನ ಸ್ವಾರಸ್ಯವಾಗಿದೆ. ಅಯ್ಯಾವೊಳೆಯ ಉಂಡಿಗೆಯ ದಮ್ಮಿಸೆಟ್ಟಿಯ ಮಗ ಮಲ್ಲಿಸೆಟ್ಟಿ. ಈತನಿಗೆ ತ್ರಿಭುವನಮಲ್ಲ ಚಲದಂಕರಾವ ಹೊಯ್ಸಳಸೆಟ್ಟಿಯು, ಚಲದಂಕರಾವ ಹೊಯ್ಸಳಸೆಟ್ಟಿ ಎಂಬ ಹೆಸರನ್ನು ಕೊಟ್ಟನಂತೆ. ಅಂದಿನಿಂದ ಮಲ್ಲಿಸೆಟ್ಟಿ ಆ ಹೆಸರಿನಿಂದಲೇ ಪರಿಚಿತನಾದನು. ಹೀಗೆ ಹೆಸರನ್ನು (ಬಿರುದನ್ನು?) ಕೊಡಲು ಏರ್ಪಟ್ಟ ಸಂದರ್ಭವೇನು ಎಂಬುದು ತಿಳಿದಿಲ್ಲ.

ದೊಡ್ಡಬೆಟ್ಟದಿಂದ ಚಿಕ್ಕಬೆಟ್ಟಕ್ಕೆ ಬಾಣಗಳನ್ನು ಬಿಡುವುದು, ಗುಂಡುಗಳನ್ನು ಎಸೆಯುವುದು ಇತ್ಯಾದಿಗಳು ಹನ್ನೊಂದು

–ಹನ್ನೆರಡನೆಯ ಶತಮಾನಗಳಲ್ಲಿ ಶೌರ್ಯಪ್ರದರ್ಶನಕ್ಕೆ ಕುರುಹು ಎಂದು ಭಾವಿಸಿದಂತೆ ತೋರುತ್ತದೆ. ಚಾಮುಂಡರಾಯನೇ ಪೌದನಪುರದ ಬಾಹುಬಲಿಯನ್ನರಸಿ ಹೊರಟಾಗ ಬಾಣವೊಂದನ್ನು ಬಿಟ್ಟು ಅದು ಬಿದ್ದಲ್ಲಿ ಬಾಹುಬಲಿ ವಿಗ್ರಹ ಕಾಣಿಸಿತೆಂಬ ಕತೆ 'ಭುಜಬಲಿಚರಿತೆ'ಯಲ್ಲಿದೆ. ಈ ನಂಬಿಕೆ ಬಹುಶಃ ಅಂದು ಪ್ರಬಲವಾಗಿದ್ದು, ಅದನ್ನು ಶೌರ್ಯಪ್ರದರ್ಶನಕ್ಕೆ ಸಾಕ್ಷಿ ಎಂದು ಭಾವಿಸಿರಬೇಕು. ಇಲ್ಲಿನ ಹಲವು ಶಾಸನಗಳು ಇಂತಹ ಪ್ರದರ್ಶನಗಳನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೧೮೬ನೆಯ ವರ್ಷದ ಚಿಕ್ಕಬೆಟ್ಟದ ಶಾಸನದಲ್ಲಿ (ನಂ. ೨೧೭) ಮಲೆಯಾಳ ಅಧ್ಯಾಡಿನಾಯಕನು ಹಿರಿಯಬೆಟ್ಟದಿಂದ ಚಿಕ್ಕಬೆಟ್ಟಕ್ಕೆ 'ಎಚ್ಚ' ಎಂದಿದೆ. ಇದೇ ವರ್ಷದ ಇನ್ನೊಂದು ಶಾಸನ (ನಂ. ೪೩೬) ದೊಡ್ಡಬೆಟ್ಟದಲ್ಲಿದೆ. ಇದರಲ್ಲಿ ಮಲೆಆಳ ಅಪ್ಪಾಡಿನಾಯಕನು 'ಇಲ್ಲಿದು' (ಅಂದರೆ ದೊಡ್ಡಬೆಟ್ಟದಿಂದ) ಚಿಕ್ಕಬೆಟ್ಟಕ್ಕೆಚ್ಚ ಎಂದಿದೆ. ಎಚ್ಚ ಎಂದರೆ ಎಸೆದನು, ಚಿಮ್ಮಿದನು ಎಂಬ ಅರ್ಥವಾಗುತ್ತದೆ. ಏನನ್ನು ಚಿಮ್ಮಿದನೆಂದು ಹೇಳಿಲ್ಲ. ಈ ಎರಡೂ ಶಾಸನಗಳಲ್ಲಿ ಉಕ್ತನಾದವನು ಒಬ್ಬನೇ ಎಂದು ತೋರುತ್ತದೆ. ಅಧ್ಯಾಡಿನಾಯಕನೇ ೪೩೬ರಲ್ಲಿ ಅಪ್ಪಾಡಿನಾಯಕನೆಂದು ಹೆಸರಿಸಲ್ಪಟ್ಟಿದ್ದಾನೆ. ಈ ಎರಡರಲ್ಲಿ ಯಾವುದು ಸರಿಯಾದ ಹೆಸರು ಎಂದು ಹೇಳಲಾಗದು. ಈತನು ಕೊಮರಚಣಾಅಕ (ಕೊಮರಚನಾಯಕ)ನ ತಮ್ಮನೆಂಬುದು ೪೩೬ರಿಂದ ಸ್ಪಷ್ಟವಾಗುತ್ತದೆ.

ಇದರಂತೆಯೇ ಚಿಕ್ಕಬೆಟ್ಟದ ೨೫೬ನೆಯ ಶಾಸನದಲ್ಲಿ ಮಲಯಾಳ ಕೊದಯುಶಂಕರನು 'ಇಲ್ಲಿದ್ದು', (ಎಂದರೆ ಆ ಶಾಸನವಿದ್ದಲ್ಲಿಂದ?) ಗದ್ದೆಯ ಹಡುವಣ ಹುಣಿಸೆಯ ಮೂಱು ಗುಂಡಿಗೆ ಚಿಮ್ಮಿದನೆಂದಿದೆ. ನಂ. ೨೫೭ ಇದೇ ವಿಷಯವನ್ನೊಳಗೊಂಡ ತಮಿಳು ಶಾಸನ. ಇದರಲ್ಲಿ ಅವನ ಹೆಸರು ಕೊದೈಶಂಕರ ಎಂದಿದೆ. ಅವನು ಗುರಿ ಇಟ್ಟದ್ದು ಮೂಱು ಗುಂಡಿಗೆ ಅಲ್ಲ; ಆದರೆ ಗದ್ದೆಯ ಪಶ್ಚಿಮದ ಹುಣಿಸೆಯ ಮರಕ್ಕೆ ಎಂದಿದೆ. ಇದನ್ನವಲಂಬಿಸಿ ನಂ. ೨೫೬ರಲ್ಲಿಯೂ ಆತನು ಮೂಱು ಗುಂಡುಗಳನ್ನು ಹುಣಿಸೆಯ ಮರಕ್ಕೆ ಗುರಿ ಇಟ್ಟನೆಂದು ಹೇಳಲಾದೀತೆ? ಈಶ್ವರ ಸಂವತ್ಸರದ ಪ್ರಸ್ತಾಪವಿರುವ ಈ ಶಾಸನಗಳು ಕ್ರಿ.ಶ. ೧೩ನೆಯ ಶತಮಾನಕ್ಕೆ ಸೇರಿದವು. ಅದೇ ಕಾಲದ ಇನ್ನೊಂದು ಶಾಸನ (೪೩೫) ದೊಡ್ಡಬೆಟ್ಟದಲ್ಲಿದೆ. ಇದರಲ್ಲಿ ಕೆದೆ ಸಂಖರನಾಯಕನು 'ಬಿಳ್ಳಗೊಳಫ ಯೆಚ್ಚ ಬೆಳ ಬಡಿಗರ ಬೆಟಕೆ' ಎಂದಿದೆ. ಇದರ ಅರ್ಥ ಸ್ಪಷ್ಟವಾಗಿಲ್ಲ. ಈ ಸಂಖರನಾಯಕನು ಮೇಲಿನ ಎರಡೂ ಶಾಸನಗಳಲ್ಲಿ ಉಕ್ತನಾದವನೇ ಆಗಿರಬೇಕು. ಈ ಶಾಸನದಲ್ಲಿ ಈತನನ್ನು ವೀರಪಲ್ಲವರಾಯನ ಮಗನೆಂದೂ 'ಅರಕೆಱೆಯ ವೀರ'ನೆಂದೂ ವರ್ಣಿಸಿದೆ. ಇವರು ತಿಗುಳರು ಅಥವಾ ಮಲೆಯಾಳಿಗಳು ಎಂದು ಊಹಿಸುವ ಸಾಧ್ಯತೆ ಇದೆ. ಶಾಸನದಲ್ಲಿ 'ಮಗ' 'ಮಕ' ಆಗಿದೆ. ನರಸಿಂಹಾಚಾರ್ಯರು ಈತನನ್ನು ಅರಕೆಱೆಯ ವೀರಪಲ್ಲವರಾಯನ ಮಗನೆಂದು ಹೇಳಿ, ಪಲ್ಲವ ಮನೆತನಕ್ಕೆ ಸಂಬಂಧ ಕಲ್ಪಿಸಿದಂತೆ ತೋರುತ್ತದೆ.[1] ಅದು ಅಷ್ಟು ಸಮಂಜಸವಲ್ಲ.

ದೊಡ್ಡಬೆಟ್ಟದ ಮೇಲಿನ ಚನ್ನಣ್ಣ ಬಸದಿಯನ್ನು ಕಟ್ಟಿಸಿದಾತನು ನರಸಿಂಹಪುರದ ಪುಟಸಾಮಿಸೆಟ್ಟಿ ಮತ್ತು ದೇವೀರಮ್ಮನವರ ಮಗನಾದ ಚೆಂನಂಣ ಹಾಗೂ ಆತನ ಅಣ್ಣ ಚಿಕ್ಕಂಣ. ಶಾಸನದಲ್ಲಿ (ನಂ. ೪೨೪) ಇದನ್ನು ಶ್ರೀ ಸಮುದ್ರ ಆದೀಶ್ವರಸ್ವಾಮಿ ಎಂದು ಕರೆಯಲಾಗಿದೆ. ಬಸದಿಯ ಮುಂದಿನ ಮಾನಸ್ತಂಭ ಗೋಪುರದ ಬಾಗಿಲು, ಡೊಣೆ ಇತ್ಯಾದಿಗಳನ್ನು ಸಹ ಈತನೇ ಸೇವಾರ್ತ್ಥವಾಗಿ ಕಟ್ಟಿಸಿದನೆಂದು ತಿಳಿಸಿದೆ (ನಂ.೪೨೭). ಶ್ರವಣಬೆಳಗೊಳದಲ್ಲಿನ ಚನ್ನಣ್ಣನ ಕೊಳವನ್ನು ಕಟ್ಟಿಸಿದಾತನೂ ಈತನೇ (ನಂ. ೫೦೯–೧೩). ಇದಲ್ಲದೆ ಒಂದು ಮಂಟಪವನ್ನು ಕಟ್ಟಿಸಿ, ತೋಟವನ್ನು ಸಹ ಬೆಳಸಿದನೆಂದು ತೋರುತ್ತದೆ (ನಂ. ೫೧೪). ಸಮುದ್ರಾದೀಶ್ವರಸ್ವಾಮಿಯ ನಿತ್ಯಸಮಾರಾಧನೆ ನಿತ್ಯೋತ್ಸವಗಳಿಗಾಗಿ ಜಿಂನಯನಹಳ್ಳಿಯನ್ನು ದಾನ ಮಾಡಿದುದಾಗಿ ಜಿನ್ನೇನಹಳ್ಳಿಯ ಶಾಸನ ತಿಳಿಸುತ್ತದೆ (ನಂ. ೫೪೦). ಇದರ ಕಾಲ ಕ್ರಿ.ಶ. ೧೬೭೩. ಈ ಮೇಲ್ಕಾಣಿಸಿದ ಶಾಸನಗಳು ಇದೇ ಕಾಲಕ್ಕೆ ಸೇರಿದವುಗಳೇ.

ಇಲ್ಲಿನ ಶಾಸನಗಳಲ್ಲಿ ದೇವರ ಅಭಿಷೇಕಕ್ಕೆ ಹಾಲನ್ನು ಒದಗಿಸಲು ಹಣದ ದಾನವನ್ನು ಮಾಡಿದ ಉಲ್ಲೇಖಗಳಿವೆ. ನಂ. ೩೪೭ರಲ್ಲಿ ಹಲಸೂರ ಕೇತಿಸೆಟ್ಟಿಯು ಪ್ರತಿನಿತ್ಯ ದೇವರ ಅಭಿಷೇಕಕ್ಕೆ ಮೂಱು ಮಾನ ಹಾಲನ್ನು ಒದಗಿಸಲೆಂದು ೩ ಗದ್ಯಾಣ ಹೊಂನನ್ನು ದಾನಮಾಡಿದನೆಂದಿದೆ. ನಂ. ೩೪೯ರಲ್ಲಿ (ಕ್ರಿ.ಶ. ೧೨೭೪) ಗೇರಸಪೆಯ ಆದಿಯಣ್ಣ ಅಕ್ಷಯಭಂಡಾರವಾಗಿ ಇಟ್ಟಿದ್ದ ನಾಲ್ಕು ಗದ್ಯಾಣಕ್ಕೆ ತಿಂಗಳಿಂಗೆ ಹೊಂಗೆ ಹಾಗ ಬಡ್ಡಿಯಂತೆ (ಅಂದರೆ, ೪ ಗದ್ಯಾಣಕ್ಕೆ ತಿಂಗಳಿಗೆ ೪ ಹಾಗ–ವರ್ಷಕ್ಕೆ ೪೮ ಹಾಗ) ಬಂದ ಹಣದಲ್ಲಿ ನಿತ್ಯಾಭಿಷೇಕಕ್ಕೆ ಒಂದು ಬಳ್ಳ ಹಾಲನ್ನು ನಡೆಸಬೇಕೆಂದಿದೆ. ಎಂದ ಮೇಲೆ ೪ ಹಾಗಕ್ಕೆ ದಿನಂಪ್ರತಿ ಒಂದು ಬಳ್ಳದಂತೆ ಒಂದು ತಿಂಗಳಿಗೆ ಸಾಕಾಗುವಷ್ಟು ಹಾಲು ದೊರೆಯುತ್ತಿತ್ತು ಎನಿಸುತ್ತದೆ. ನಂ. ೩೪೬, ೪೫೮, ೪೭೮ನೆಯ ಶಾಸನಗಳಲ್ಲಿಯೂ ಇಂತಹ ವಿವರಗಳಿವೆ. ಇವುಗಳನ್ನು ಕ್ರೋಢೀಕರಿಸಿ ಇಂದಿನ (ಕ್ರಿ.ಶ. ೧೯೨೮ರಂದಿನ) ಲೆಕ್ಕಾಚಾರ

[1] Introduction p. 67

ದಂತೆ ಒಂದು ರೂಪಾಯಿಗೆ ಸುಮಾರು ೯೧/೨ ಮಣ ಹಾಲು ಶ್ರವಣಬೆಳಗೊಳ ಹಾಗೂ ಆಸುಪಾಸಿನಲ್ಲಿ ಸಿಗುತ್ತಿತ್ತೆಂದು ಶ್ರೀ ಹೀರಾ ಲಾಲರು ಲೆಕ್ಕಾಚಾರ ಮಾಡಿದ್ದಾರೆ.[1]

೧೩ನೆಯ ಶತಮಾನದ ೪೫೫ನೆಯ ಶಾಸನವನ್ನು ಈಗಾಗಲೇ ಪ್ರಸ್ತಾಪಿಸಿದ್ದೇವೆ. ಇದರಲ್ಲಿ ಗೋಮಟಪುರದ ಮನೆದೆಱೆ–ಮನೆಗಳ ಮೇಲಿನ ತೆರಿಗೆ–ಗೆ ಸಂಬಂಧಿಸಿದ ಕೆಲವು ವಿವರಗಳಿವೆ. ಅಕ್ಷಯ ಸಂವತ್ಸರದಿಂದ ಆರಂಭಿಸಿ ಪ್ರತಿಯೊಂದು ಮನೆಗೆ ಒಂದು ಹಣದಂತೆ ಮನೆದೆಱೆ ಕೊಡಬೇಕೆಂತಲೂ ಆರಂಭದಲ್ಲಿ ಒಟ್ಟಿಗೆ ಎಂಟು ಹಣವನ್ನು ಈ ತೆರಿಗೆಯ ಸಲುವಾಗಿ ಕೊಡಬೇಕೆಂದೂ ನಿರ್ಣಯಿಸಿದಂತೆ ತೋರುತ್ತದೆ. ಇದನ್ನು ಆ ಸ್ಥಳದ ಆಚಾರ್ಯ್ಯರಿಗೆ ಸಲಿಸಿದರೆ, ಗಾಣದ ಮೇಲಿನ ತೆರಿಗೆ, ಮಳಬ್ರಯ ಹಾಗೂ ಇಂತಹ ಇತರ ತೆರಿಗೆಗಳನ್ನೇನು ಕೊಡಬೇಕಾಗಿ ಬಂದರೂ ಅದನ್ನು ಆಚಾರ್ಯ್ಯರೇ ಅಧಿಕಾರಿಗಳೊಡನೆ ವ್ಯವಹರಿಸಿ ತೆರಬೇಕೆಂದು ಈ ಪತ್ಥಳಿಯ ಕ್ರಮದಲ್ಲಿ ಸೂಚಿಸಿದಂತಿದೆ. ಅಂತೆಯೇ ಈ ಒಂದು ನಿರ್ಧಾರಕ್ಕೆ ಬಂದಮೇಲೆ ಯಾರೊಬ್ಬರೂ ಅಚಾರ್ಯ್ಯರಲ್ಲಿ ಹೋಗಿ ಕೊಡಬೇಕಾದ ತೆರಿಗೆಯಲ್ಲಿ ಒಂದು ಹಾಗವನ್ನೋ ಬೇಳೆಯನ್ನೋ ಕಡಿಮೆ ಮಾಡಿ ಕೊಳ್ಳಿ ಎಂದು ಬೇಡಿಕೊಳ್ಳಕೂಡದು, ಒತ್ತಾಯ ತರಕೂಡದು ಎಂತಲೂ ಇದರಲ್ಲಿ ವಿಧಿಸಲಾಗಿದೆ.

೪೭೯ನೆಯ ಶಾಸನದಲ್ಲಿ ಮೂಲಸಂಘದ ಸಮುದಾಯಗಳು ಗೊಮ್ಮಟದೇವ, ಪಾರ್ಶ್ವದೇವ, ದೇವರವಲ್ಲಭದೇವ—ಈ ದೇವರುಗಳಿಗೆ ಸೇರಿದ ಗದ್ದೆ, ಬೆದ್ದಲುಗಳಿಗೆ ನೀಡಬೇಕಾದ ಅಭ್ಯಾಗತಿ, ಕಟಕಶೇಸೆ, ಮುಂತಾದವುಗಳನ್ನೆಲ್ಲಾ ಬಿಟ್ಟುಕೊಟ್ಟರು ವುದಾಗಿ ತೀರ್ಮಾನಿಸಿದ್ದಲ್ಲದೆ ಹಿಂದೆ ಸಂಭುದೇವನೆಂಬಾತನು ಶ್ರೀ ದೇವರವಲ್ಲಭದೇವರಿಗೆ ಸೇರಿದ್ದ ಹಾಡುವರಹಳ್ಳಿಯಲ್ಲಿ 'ಅನ್ಯಾಯವಾಗಿ ಮಳಬ್ರಯವಾಗಿ ಕೊಂಬ ಗದ್ಯಾಣ ಅಯ್ದುನು' ಅದೇ ದೇವರಿಗೆ ದಾನವಾಗಿ ಬಿಟ್ಟನೆಂದೂ ಹೇಳಿದೆ. ಈ ಎರಡು ಶಾಸನಗಳಲ್ಲಿ ಉಕ್ತವಾಗಿರುವ 'ಮಳಬ್ರಯ' ಎಂತಹುದೆಂದು ತಿಳಿಯದಾಗಿದೆ.

೧೨೮೮ನೆಯ ವರ್ಷದ ೪೫೯ನೆಯ ಶಾಸನದಲ್ಲಿ ಸ್ವದೇಶಿ ಪರದೇಶಿಯಿಂದ ಬಂದಂತಹ ದವಣ ಗದ್ಯಾಣ ನೂರಕ್ಕೆ ಒಂದು ಗದ್ಯಾಣದಂತೆ ದವಣವನ್ನು ಆದಿದೇವರಿಗೆ ಸಲಿಸಬೇಕೆಂದಿದೆ. ಇದರ ಅರ್ಥ ಸಹ ಸ್ಪಷ್ಟವಾಗದು. ಈ ಶಾಸನ ಗೊಂಮಟಪುರದ ಮಾಣಿಕ್ಯನಖರಂಗಳ ನಡುವೆ ಆದ ಒಡಂಬಡಿಕೆಯಾದ ಕಾರಣ ಸಂದರ್ಭಾನುಸಾರವಾಗಿ ಇದು ಆ ಮಾಣಿಕ್ಯದ ವ್ಯಾಪಾರಕ್ಕೆ ಸಂಬಂಧಿಸಿದಂತಹ ಒಂದು ತೆರಿಗೆಯೋ ಶುಲ್ಕವೋ ಆಗಿರಬಹುದೆನಿಸುತ್ತದೆ. ೪೨೧ನೆಯ ಶಾಸನದಲ್ಲಿ ತಿಪ್ಪೆಸುಂಕ, ಮಱೆ ಪನ್ನಾಯಗಳ ಪ್ರಸ್ತಾಪವಿದೆ. ಒಂದು ಅಡಕೆಯ ಹೇರಿಗೆ ೨೦೦ ಅಡಕೆ ಒಂದು ಹಸುಬೆಗೆ ೨೦ ಅಡಕೆ ತಿಪ್ಪೆಸುಂಕವಾಗಿ ಕೊಡ ಬೇಕೆಂದಲ್ಲಿ, ಒಂದು ಹೇರಿನಲ್ಲಿ ೧೦ ಹಸುಬೆಗಳಿದ್ದಂತಾಗುತ್ತದೆ. ಊರತಿಪ್ಪೆಯನ್ನು ಗೊಬ್ಬರವಾಗಿ ಉಪಯೋಗಿಸಿ, ಅದಕ್ಕಾಗಿ ಕೊಡಬೇಕಾದ ಶುಲ್ಕ ತಿಪ್ಪೆಸುಂಕವೆನಿಸಿತು. ಮಱೆಪನ್ನಾಯ ಎಂಬುದು ಎಲೆ (ವೀಳೆಯದೆಲೆ)ಗೆ ತೆರಬೇಕಾದ ಸುಂಕವೆನಿಸುತ್ತದೆ. 'ಎಲೆಯ . . . . ೞಿಗ ಹಾಗ ೧ ಮೇಲಿಲೆ ೨೦೦' ಎಂದಿರುವುದನ್ನು ಗಮನಿಸಿದರೆ ಇಲ್ಲೂ ಸುಂಕವನ್ನು ಹಣದ ರೂಪದಲ್ಲಿ ಯಾಗಲೀ ವಸ್ತುವಿನ ರೂಪದಲ್ಲಿಯಾಗಲೀ ಪಡೆಯುತ್ತಿದ್ದರೆಂಬುದು ತಿಳಿದುಬರುತ್ತದೆ.

೪೩೨ನೆಯ, ೧೨ನೆಯ ಶತಮಾನದ ಶಾಸನ ಜಿನವರ್ಮ್ಮನೆಂಬೊಬ್ಬ ಜೋಗಿಯು ಕಂಖರಿ ವಾದ್ಯವನ್ನು ವರ್ಣಿಸುತ್ತದೆ. ಈತನು ಕೊಳ್ಳಿಪಾಕೆಯ ಮಾಣಿಕ್ಯದೇವರ ಶಿಷ್ಯ. ಮೊರವೂರ ಆದಿನಾಥನಿಗೆ ಪ್ರಣಾಮಗಳನ್ನು ಸಲ್ಲಿಸುತ್ತಾನೆಂದು ಹೇಳುವ ಈ ಶಾಸನ ಅವನ ಕಂಖರಿಯ ಧ್ವನಿಯನ್ನು ಕೇಳಿದ ದುರ್ಜ್ಜನರಿಗೆ ಭಯವೂ ಸುಜನರಿಗೆ ಅನುರಾಗವೂ ಉದಯಿಸುತ್ತದೆಂದು ವರ್ಣಿಸಿದೆ.

೫೦೩–೦೪ನೆಯ ಶಾಸನಗಳಲ್ಲಿ ಗಂಗರಾಜನ ಅತ್ತಿಗೆಯಾದ ಜಕ್ಕಮವ್ವೆ ನಯಣದ ದೇವರನ್ನು ಮಾಡಿಸಿ, ಪ್ರತಿಷ್ಠೆಯ ಮಾಡಿಸಿದಳೆಂದು ಹೇಳಿದೆ. 'ನಯಣದ ದೇವ' ಎಂಬ ಯಾವ 'ದೇವ'ರೂ ಜೈನರಲ್ಲಿ ಕಾಣಬರುವುದಿಲ್ಲ. ಇಲ್ಲಿ ನಯಣ ಎಂಬ ಪದ ಲಯನ ಎಂಬ ಪದದಿಂದ ಬಂದಿರಬೇಕು ಎನಿಸುತ್ತದೆ. ಲಯನ–ಲೇನ ಎಂಬುದು ಬೌದ್ಧರ ವಾಸಸ್ಥಳವಾದ ಗುಹೆಗಳಿಗೂ ಅಂತೆಯೇ ಜೈನರ ಗುಹೆಗಳಿಗೂ ಅನ್ವಯಿಸುತ್ತದೆಂಬುದು ತಿಳಿದಿದೆ. ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಈ ಲಯನ ಎಂಬ ಪದ ಧ್ವನಿ ಹಾಗೂ ಉಚ್ಚಾರಣೆಗಳ ಬದಲಾವಣೆಗಳ ನಂತರ ಕನ್ನಡದಲ್ಲಿ ಬಳಕೆಗೆ ಬಂದು 'ನಯನ' ಎಂದಾಗಿದೆಯೆಂದೂ ಈ ಪದ ನಾಗರಾಜ (ಕ್ರಿ.ಶ. ೧೩೩೧)ನ 'ಪುಣ್ಯಾಸ್ರವ'ದಲ್ಲಿ ಉಪಯೋಗವಾಗಿದೆಯೆಂದೂ ತಿಳಿಸಿದ್ದಾರೆ.[2] ಇದನ್ನು ಗಮನಿಸಿದಲ್ಲಿ ನಯಣದದೇವ ಎಂಬುದು ಯಾವುದಾದರೂ ಗುಹೆಯಲ್ಲಿಯೋ, ಗೋಡೆಯಲ್ಲಿಯೋ, ಬಂಡೆಯ ಮೇಲೋ ಕೊರೆಯಲಾದ ಉಬ್ಬು ಚಿತ್ರಕ್ಕೆ ಅನ್ವಯವಾಗುವ ಪದ ಎಂದು ಹೇಳಬಹುದು. ಲಯನಗಳಲ್ಲಿ ನಾವು ಕಾಣುವುದು ಇಂತಹ ಚಿತ್ರಗಳನ್ನೇ. ಇವು

[1] ಜೈನ ಶಿಲಾಲೇಖಸಂಗ್ರಹ (ಹಿಂದಿ), Vol. I, Introduction pp. 122-23.

[2] *Karnataka through the Ages*, p. 107 note

ಪ್ರತ್ಯೇಕಗೊಳಿಸಲ್ಪಟ್ಟ ವಿಗ್ರಹಗಳಲ್ಲ. ಗೋಡೆಗಳ, ಬಂಡೆಗಳ ಭಾಗವಾಗಿ, ಅವುಗಳಲ್ಲಿಯೇ ಮೂಡಿಸಲಾದ ಚಿತ್ರಗಳು. ಪ್ರಸ್ತುತ ೫೦೩ನೆಯ ಶಾಸನ ಸಹ ಶ್ರವಣಬೆಳಗೊಳದ ಜಕ್ಕಿಕಟ್ಟೆಯ ದಕ್ಷಿಣಕ್ಕಿರುವ ದೊಡ್ಡದಾದ ಬಂಡೆಯ ಮೇಲೆ ಮೂಡಿಸಲಾದ ತೀರ್ಥಂಕರನ ಚಿತ್ರದ ಕೆಳಗೆ ಬರೆಯಲಾಗಿದೆ. ಆದಕಾರಣ ನಯಣದದೇವ ಎಂಬ ಮಾತಿಗೆ ಹಾಗೆ ಕೊರೆಯಲಾದ ತೀರ್ಥಂಕರದೇವ ಎಂಬ ಅರ್ಥವನ್ನು ಕೊಡಬೇಕಾಗುತ್ತದೆ.

ಈ ಶಾಸನದಲ್ಲಿ ಮೋಕ್ಷತಿಲಕವೆಂಬ ಜೈನವ್ರತದ ಉಲ್ಲೇಖವಿದೆ. ಅನಂತ್ನವ್ರತ (ನಂ. ೪೯೨), ರತ್ನತ್ರಯ ನೋಂಪಿ (ನಂ. ೩೩೩), ಪಂಚಕಲ್ಯಾಣ (ನಂ. ೩೪೪), ಪಂಚನಮಸ್ಕಾರ (ನಂ. ೫೪೯) ಇತ್ಯಾದಿ ಜೈನರು ಆಚರಿಸುವ ವ್ರತಗಳ ಉಲ್ಲೇಖಗಳು ಪ್ರಸ್ತುತ ಸಂಪುಟದಲ್ಲಿವೆ. 'ಶ್ರೀವಿಹಾರ'ವೆಂಬುದು ಒಂದು ಉತ್ಸವವೆಂದು ೪೮೬, ೪೮೭ ಮತ್ತು ೪೯೫ನೆಯ ಕ್ರಮವಾಗಿ ೧೮೫೬, ೧೮೫೮ ಮತ್ತು ೧೮೫೭ನೆಯ ವರ್ಷದ, ಶಾಸನಗಳಿಂದ ತಿಳಿದಿದೆ. ೭೩ನೆಯ ಶಾಸನದಲ್ಲಿ ಮಲ್ಲಿಷೇಣ ಮಲಧಾರಿಗಳು ರತ್ನತ್ರಯಗಳನ್ನು ಆಗಮಗಳಲ್ಲಿ ಉಕ್ತವಾದ ವಿಧಿಯಲ್ಲಿ ಆರಾಧಿಸಿ (''ಆರಾಧ್ಯರತ್ನತ್ರಯಮಾಗಮೋಕ್ತಂ'') ಜೀವತೊರೆದರೆಂದಿದೆ. ಇಲ್ಲಿನ ರತ್ನತ್ರಯದ ಆರಾಧನೆಯು ರತ್ನತ್ರಯನೋಂಪಿಯೇ ಆಗಿರಬಹುದು. ೫೪೯ನೆಯ ಶಾಸನದಲ್ಲಿ ಪಂಚನಮಸ್ಕಾರದ ಉಲ್ಲೇಖವಿದೆ. ಇದರ ಕಾಲ ಸುಮಾರು ಕ್ರಿ.ಶ. ೧೨೧೪. ಕ್ರಿ.ಶ. ೧೨೧೫ನೆಯ ವರ್ಷದ ಧಾರವಾಡದ ಶಾಸನದಲ್ಲಿ[1] ಮೈಳಲಮಹಾದೇವಿಯ 'ಕೀಳ್ವಾಗುನೋಂಪಿಯ' ಪ್ರಸ್ತಾಪವಿದೆ. ಇದು ಶಾಸ್ತ್ರೋಕ್ತವಾಗಿ 'ಕೆಳಗೆಬಾಗುವ', ಪ್ರಣಮಿಸುವ ಒಂದು ವ್ರತವಾಗಿಗಬಹುದೆಂದು ಊಹಿಸಲಾಗಿದೆ. ಪಂಚನಮಸ್ಕಾರವೆಂಬುದೇ ಈ ನೋಂಪಿಯಾಗಿರಬೇಕು. ಕೀಳ್ವಾಗುನೋಂಪಿಯು ಪಂಚನಮಸ್ಕಾರದ ಕನ್ನಡ ರೂಪವಿದ್ದಂತೆ ತೊರುತ್ತದೆ. ಅನನ್ತವ್ರತ, ತ್ರಿಭುವನತಿಲಕ ನೋಂಪಿಗಳು ನಮಗೆ ತಿಳಿದದ್ದೇ.[2] ಮೋಕ್ಷತಿಲಕವೆಂಬುದು ೫೦೩ನೆಯ ಶಾಸನದಲ್ಲಿ ಹೇಳಲಾಗಿದೆ. ಮೋಕ್ಷತಿಲಕ ಬಹುಶಃ ಈ ತ್ರಿಭುವನ ತಿಲಕವಾಗಿರಬಹುದೇನೋ.

ಛಂದಸ್ಸು[3]

ಈ ಶಾಸನಸಂಪುಟದಲ್ಲಿ ಸಂಗ್ರಹಿತವಾಗಿರುವ ಪ್ರತಿ ಶಾಸನದಲ್ಲೂ—ಅದು ಪದ್ಯಶಾಸನವಾಗಿರಲಿ ಅಥವಾ ಪದ್ಯಗದ್ಯಗಳು ಕೂಡಿ ಬರುವ ಶಾಸನವಾಗಿರಲಿ—ಕಂಡುಬರುವ ಪದ್ಯಗಳ ಛಂದಸ್ಸುಗಳನ್ನು ಗುರುತಿಸಿ ಆಯಾ ಶಾಸನದ ಅಡಿಟಿಪ್ಪಣಿಯಲ್ಲಿ ತೋರಿಸಿದೆ. ಕನ್ನಡ ನಾಡಿನ ಶಾಸನ ಕವಿತ್ವದಲ್ಲಿ ಛಂದಸ್ಸು ವಹಿಸಿರುವ ಪಾತ್ರ ಯಾವ ರೀತಿಯದು, ಅಲ್ಲಿ ಯಾವ ಪ್ರಮಾಣ ದಲ್ಲಿ ಹೇಗೆ ವಿವಿಧ ಛಂದಸ್ಸುಗಳು ಹಂಚಿಕೆಯಾಗಿವೆ, ಅಂತಹ ಹಂಚಿಕೆಯಲ್ಲಿ ಕಂಡುಬರುವ ಕವಿಗಳ ವಿದ್ವತ್ತಿನ ದೃಷ್ಟಿ ಯಾವ ತೆರನಾದ್ದು ಈ ಮುಂತಾದುವನ್ನು ತಿಳಿಯುವುದಾದರೆ ಶಾಸನಗಳ ಸಾಹಿತ್ಯಿಕ ಮೌಲ್ಯವನ್ನು ಗುರುತಿಸುವ ಕೆಲಸ ಸ್ವಲ್ಪಮಟ್ಟಿಗೆ ಸುಲಭವಾಗುತ್ತದೆ ಎನ್ನುವುದೇ ಇದರ ಉದ್ದೇಶ. ಅಲ್ಲದೆ ಕನ್ನಡ ಭಾಷೆಯ ರಚನೆಯ ಮೇಲೆ ಸಂಸ್ಕೃತ ಭಾಷೆ ಛಂದಸ್ಸುಗಳು ಉಂಟುಮಾಡಿರುವ ಪ್ರಭಾವವನ್ನೂ ಕನ್ನಡ ಛಂದಸ್ಸುಗಳ—ಎರವಲುಕೊಂಡ ಮತ್ತು ದೇಸೀಯವಾದ—ಐತಿಹಾಸಿಕ ಬೆಳವಣಿಗೆಯ ಮಜಲುಗಳನ್ನೂ ಗುರುತಿಸುವುದಕ್ಕೆ ಕೂಡ ಇದರಿಂದ ತುಂಬ ಅನುಕೂಲವಾಗುತ್ತದೆ. ಸಂಸ್ಕೃತ ಕನ್ನಡ ಶಾಸನಗಳ ಛಂದೋ ವೈವಿಧ್ಯವನ್ನು ಸ್ವತಂತ್ರವಾಗಿಯೂ ತೌಲನಿಕವಾಗಿಯೂ ಅಧ್ಯಯನಮಾಡುವುದೂ ಫಲಕಾರಿಯಾದ್ದೇ. ವಾಸ್ತವವಾಗಿ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಶಾಸನ ಛಂದಸ್ಸಿನ ಅಧ್ಯಯನವಿರಲಿ, ಛಂದಸ್ಸಿನ ವ್ಯಾಪಕವಾದ ಅಧ್ಯಯನವೇ ಇನ್ನೂ ನಡೆದಿಲ್ಲ. ಭಾವವಾಹಿಯಾದ ಭಾಷೆ ನಿಯತಛಂದಸ್ಸಿನ ಚೌಕಟ್ಟಿನಲ್ಲಿ ಹೇಗೆ ಅಪೂರ್ವವಾಗಿ ಹೆಣೆದುಕೊಳ್ಳುತ್ತದೆ ಎನ್ನುವ ಕವಿಕಾರ್ಯ ರಹಸ್ಯದ ವಿಶ್ಲೇಷಣೆ ಎಷ್ಟು ಚೆನ್ನಾಗಿ ನಡೆದರೆ ಪ್ರಾಚೀನಕವಿತ್ವ ಅಷ್ಟು ಚೆನ್ನಾಗಿ ಅರ್ಥವಾಗುತ್ತದೆ. ತೆಲುಗು ಭಾಷೆಯಲ್ಲಿ ಪ್ರಾಚೀನ ಮಹಾಕಾವ್ಯದ ಹಾಗೂ ಶಾಸನ ಸಾಹಿತ್ಯದ ಛಂದಸ್ಸಿನ ಅಭ್ಯಾಸ ಕೆಲಮಟ್ಟಿಗೆ ನಡೆದಿದೆ. ಅಂಥ ಪ್ರಯತ್ನ ಕನ್ನಡ ಭಾಷೆಯಲ್ಲಿ ಕೂಡ ನಡೆಯುವುದಕ್ಕೆ ಹೇರಳವಾದ ಉಪಪತ್ತಿಯುಂಟು ಎನ್ನುವುದು ಈ ಸಂಪುಟ ಒಂದನ್ನು ನೋಡಿದರೂ ಸಾಕು, ಯಾರಿಗಾದರೂ ತಿಳಿಯುತ್ತದೆ.

ಇಲ್ಲಿ ಪದ್ಯಗಳ ಛಂದಸ್ಸುಗಳನ್ನು ಗುರುತಿಸುವಾಗ ಅನುಸರಿಸಿರುವ ಕ್ರಮಗಳು ಈ ರೀತಿಯಾಗಿವೆ:

೧. ಛಂದಸ್ಸುಗಳ ಹೆಸರುಗಳನ್ನು ಪ್ರೊ. ಎಚ್. ಡಿ. ವೇಲಣಕರ್ ಅವರು ಸಂಪಾದಿಸಿರುವ 'ಜಯದಾಮನ್'

---

[1] B. R. Gopal, *Karnatak Inscriptions*, Vol. V, No. 32, Introduction xxxvi

[2] ಪದ್ಮರಾಜ ಪಂಡಿತ: ಚತುರ್ದ್ದಶನೋಂಪೀ ಕಥೆ (1929)

[3] ಈ ಭಾಗವನ್ನು ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಮತ್ತು ಶ್ರೀ ಸೀತಾರಾಮ ಜಾಗಿರ್‌ದಾರ್ ಅವರುಗಳು ಬರೆದಿದ್ದಾರೆ.

ಗ್ರಂಥದ (Haritosha Samiti, Bombay, 1949) ಮತ್ತು ಹೇಮಚಂದ್ರಕೃತ 'ಛಂದೋನುಶಾಸನ'ದ (Singhi Jain Series No-49, Bombay, 1961) ಕೊನೆಗೆ ಕೊಟ್ಟಿರುವ ವಿಸ್ತಾರವಾದ ಪರಿಶಿಷ್ಟಗಳನ್ನು ಪರಿಶೀಲಿಸಿ ಆಯ್ದುಕೊಂಡಿದೆ. ಕೆಲವೊಮ್ಮೆ-ಮುಖ್ಯವಾಗಿ ಅಚ್ಚಕನ್ನಡ ವೃತ್ತಗಳ ವಿಷಯದಲ್ಲಿ-ನಾಗವರ್ಮನ (ಸು. ಕ್ರಿ. ಶ. ೯೯೦) ಕನ್ನಡ 'ಛಂದೋಂಬುಧಿ'ಯನ್ನೂ ಉಪಯೋಗಿಸಿಕೊಂಡಿದೆ. ಆದ್ದರಿಂದ ಆಯಾ ಛಂದಸ್ಸಿನ ಹೆಸರು, ಲಕ್ಷಣ ಇತ್ಯಾದಿ ವಿವರಗಳು ಯಾವ ಛಂದೋಗ್ರಂಥದಲ್ಲಿ ಎಲ್ಲಿ ಬಂದಿವೆಯೆಂಬುದನ್ನು ತಿಳಿಯಬೇಕಾದರೆ ಮೊದಲೆರಡು ಆಕರಗಳ ಪರಿಶಿಷ್ಟಗಳನ್ನೂ ಕನ್ನಡ 'ಛಂದೋಂಬುಧಿ'ಯನ್ನೂ ಪರಿಶೀಲಿಸಬೇಕಾಗುತ್ತದೆ.

೨. ಮೊದಲೆರಡು ಆಕರಗಳನ್ನು ಉಪಯೋಗಿಸಿಕೊಳ್ಳುವಾಗ, ಸಾಮಾನ್ಯವಾಗಿ ಪಿಂಗಲ ಮುಂತಾದ ಪ್ರಾಚೀನ ಛಂದಶ್ಶಾಸ್ತ್ರಕಾರರು ಕೊಡುವ ಹೆಸರುಗಳಿಗೆ ಆದ್ಯತೆ ಕೊಟ್ಟಿದೆ; ಪಿಂಗಲನ ಛಂದಸ್ಸೂತ್ರಗಳಲ್ಲಿ ದೊರೆಯದಿದ್ದಾಗ ಮಾತ್ರ ಕಾಲಾನುಕ್ರಮವನ್ನು ಹಿಡಿದು ಬೇರೆಯವರು ಕೊಡುವ ವೃತ್ತನಾಮಗಳನ್ನು ಗ್ರಹಿಸಲಾಗಿದೆ. ಸಾಮಾನ್ಯವಾಗಿ ಛಂದಸ್ಸುಗಳ ಜನಪ್ರಿಯವಾದ ಹೆಸರುಗಳನ್ನು ಮಾನ್ಯಮಾಡುವಾಗ ಕೆಲವೊಮ್ಮೆ ಈ ಕ್ರಮದಲ್ಲಿ ಸ್ವಲ್ಪ ಏರುಪೇರಾಗಬಹುದು.

೩. ಯಾವುದಾದರೊಂದು ಛಂದಸ್ಸಿಗೆ ಹೆಸರು ಪೂರ್ವೋಕ್ತವಾದ ಮೂರು ಆಕರಗಳಲ್ಲಿಯೂ ದೊರೆಯದಿದ್ದಾಗ, ಮುಖ್ಯ ಛಂದೋವರ್ಗವನ್ನು ಸೂಚಿಸಿ ಪಕ್ಕದಲ್ಲಿ 'ಅನುಕ್ತ' ಎಂದು ಬರೆದಿದೆ (ಉದಾ: ನಂ. ೩೬೪).

೪. ಅಕ್ಷರಗಳು ಅಳಿಸಿಹೋಗಿರುವುದು ಮುಂತಾದ ಯಾವುದಾದರೂ ಕಾರಣದಿಂದ ವೃತ್ತವನ್ನು ಪೂರ್ಣವಾಗಿ ಗುರುತಿಸಲು ಸಾಧ್ಯವಾಗದಿದ್ದಾಗ, ಇಂತಹವೇ ಕಾರಣಗಳಿಂದ ಛಂದಸ್ಸು ಗೊತ್ತಾದರೂ ಪದ್ಯವು ಅಪೂರ್ಣವಾಗಿದ್ದಾಗ ಕೆಲವೊಮ್ಮೆ ವೃತ್ತದ ಹೆಸರನ್ನು ಸೂಚಿಸಿಲ್ಲ (ನಂ. ೬೪, ೫೬೫).

೫. ಛಂದಸ್ಸಿನ ದೃಷ್ಟಿಯಿಂದ ಸರಿಯಾಗಿದ್ದರೂ ನಾಲ್ಕು ಪಾದಗಳೂ ಪೂರ್ಣವಾಗಿಲ್ಲದ ವೃತ್ತಜಾತಿಗಳು ಕಾಣಿಸಿಕೊಂಡಾಗ, ಅಂಥ ವೃತ್ತಜಾತಿಗಳ ಮಗ್ಗುಲಿಗೆ 'ಅಸಮಗ್ರ' ಎಂದು ಬರೆದಿದೆ (ನಂ. ೧೨೦, ೧೭೩).

೬. ಅಲ್ಪಸ್ವಲ್ಪ ಸವರಣೆಯಿಂದ ಓದುಗರೇ ತಿದ್ದಿಕೊಳ್ಳಬಹುದಾದ ಲಿಪಿಕಾರ ಸ್ಖಾಲಿತ್ಯಗಳು ಬಹು ವಿರಳವಾಗಿ ಬಂದಿದ್ದಲ್ಲಿ, ಅಂಥ ವೃತ್ತಗಳನ್ನು ಶುದ್ಧವಾದ್ದೆಂದೇ ಗ್ರಹಿಸಿ ಆಯಾ ಛಂದಸ್ಸಿನ ಹೆಸರನ್ನು ಸೂಚಿಸಿದೆ. ಪ್ರಸ್ತಾರದಿಂದ ಇಂತಹ ಛಂದಸ್ಸು ಎಂದು ನಿರ್ದಿಷ್ಟವಾಗಿ ತಿಳಿಯುವ, ಆದರೆ ಸಾಮಾನ್ಯವಾಗಿ ಸವರಣೆಗಳಿಂದ ತಿದ್ದಿಕೊಳ್ಳಲು ಸಾಧ್ಯವಾಗದಂತೆ ಬಹುವಾಗಿ ಕೆಟ್ಟಿರುವ ವೃತ್ತಗಳ ವಿಷಯದಲ್ಲಿ ಆಯಾ ವೃತ್ತಜಾತಿಯ ಮಗ್ಗುಲಿಗೆ 'ಅಶುದ್ಧ' ಎಂದು ಬರೆದಿದೆ (ನಂ. ೧೬೨, ೧೭೩ .)

೭. ವೃತ್ತಜಾತಿ ಇಂಥದೆಂದು ನಿರ್ಣಯಿಸಲು ಸಾಧ್ಯವಾಗದೆ ಇದ್ದಾಗ, ನಿರ್ಣಯಿಸಲು ಸಾಧ್ಯವಿದ್ದರೂ ಪಾದಗಳಲ್ಲಿ ಎಲ್ಲಿಯಾದರೂ ವಿಭಿನ್ನ ಲಕ್ಷಣ ತೋರುವಂತಿದ್ದಾಗ, ಬೇರೆ ಬಗೆಯ ಸಂದೇಹಗಳಿದ್ದಾಗ, ಪ್ರಶ್ನಾರ್ಥಕಚಿಹ್ನೆಗಳನ್ನು ಅಂತಹ ಕಡೆಗಳಲ್ಲಿ ಹಾಕಲಾಗಿದೆ (ನಂ. ೧೩೦, ೧೭೫). ಹೀಗೆ ತೊಡಕಾಗಿರುವ ವೃತ್ತಜಾತಿಗಳನ್ನು ಕೆಲವೊಮ್ಮೆ ಗುರುತಿಸದೆಯೇ ಕೈಬಿಟ್ಟಿದೆ (ನಂ. ೯೦, ೧೦೮).

೮. ಶಾಸನಪಾಠದಲ್ಲೇ ವೃತ್ತಜಾತಿಯ ಸ್ಪಷ್ಟವಾದ ಸೂಚನೆಯಿರುವೆಡೆಗಳಲ್ಲಿ (ಉದಾ: ಕಂದ=ಕ, ಕಂ) ಮತ್ತೆ ಅಂಥವನ್ನು ಅಡಿಟಿಪ್ಪಣಿಯಲ್ಲಿ ತೋರಿಸಿಲ್ಲ. ಅಂಥ ಸೂಚನೆಗಳಲ್ಲಿ ತಪ್ಪಿದ್ದಾಗ ಮಾತ್ರ (ನಂ. ೭೯, ೫೬೮) ತಿದ್ದಿ ಸರಿಯಾದ ಹೆಸರನ್ನು ಅಡಿಟಿಪ್ಪಣಿಯಲ್ಲಿ ತೋರಿಸಿದೆ.

೯. ವರ್ಣವೃತ್ತಗಳಲ್ಲಿ ವಿಷಮಚತುಷ್ಪದಿಗಳಾದ ಉಪಜಾತಿಗಳಲ್ಲಿ ಭೇದಗಳನ್ನು ಸೂಚಿಸದೆ ಸಾಧಾರಣವಾಗಿ ಉಪಜಾತಿ ಎಂದೇ ಕರೆದಿದೆ. ಅರ್ಧಸಮಚತುಷ್ಪದಿಗಳಲ್ಲಿ ಭೇದಗಳನ್ನು ಹೇಳಿ ಮಗ್ಗುಲಲ್ಲಿ ದುಂಡುಕಂಸದಲ್ಲಿ ಅರ್ಧಸಮ ಚತುಷ್ಪದಿಯೆಂದು ಬರೆದಿದೆ. ಮಾತ್ರಾವೃತ್ತಗಳಲ್ಲಿ ಆರ್ಯೆಗೆ ಭೇದಗಳನ್ನು ಹೇಳಿಲ್ಲ. ಒಂದೆರಡು ಕಡೆ ವಿಶೇಷಗಳನ್ನು ಸೂಚಿಸಿದೆ.

ಈ ಸಂಪುಟದ ವೃತ್ತಜಾತಿಗಳು ಈ ನಾಲ್ಕು ರೀತಿಯಾಗಿವೆ: ವರ್ಣವೃತ್ತಗಳು, ಮಾತ್ರಾವೃತ್ತಗಳು, ಶ್ಲೋಕ, ಮತ್ತು ಕರ್ಣಾಟಕ ವಿಷಯಜಾತಿ. ವರ್ಣವೃತ್ತಗಳಲ್ಲಿ ಸಮ, ಅರ್ಧಸಮ ಮತ್ತು ವಿಷಮ (ಉಪಜಾತಿ) ಎಂಬ ಮೂರು ಬಗೆಗಳಿಗೂ ಉದಾಹರಣೆಗಳಿವೆ. ಮಾತ್ರಾವೃತ್ತಗಳಲ್ಲಿ ಆರ್ಯೆ ಮತ್ತು ಅದರ ಪ್ರಭೇದಗಳು ಬಳಕೆಯಾಗಿವೆ. ಕನ್ನಡ ಭಾಷೆಗೆ ಸಂಬಂಧಿಸಿದಂತೆ ಕಂದ ಪಿರಿಯಕ್ಕರಗಳ ಪ್ರಯೋಗಗಳಿವೆ. ವರ್ಣವೃತ್ತಗಳಲ್ಲಿ ತ್ರಿಷ್ಟುಪ್ ಛಂದೋವರ್ಗದ (೧೧ ಅಕ್ಷರಗಳು) ಇಂದ್ರವಜ್ರ, ಉಪೇಂದ್ರವಜ್ರ, ರಥೋದ್ಧತ, ಶಾಲಿನಿ; ಜಗತಿ ಛಂದೋವರ್ಗದ (೧೨ ಅಕ್ಷರಗಳು) ದ್ರುತವಿಲಂಬಿತ, ವಂಶಸ್ಥ,

ಸ್ರಗ್ವಿಣಿ; ಅತಿಜಗತಿ ಛಂದೋವರ್ಗದ (೧೩ ಅಕ್ಷರಗಳು) ಕನಕಪ್ರಭ; ಶಕ್ವರಿ ಛಂದೋವರ್ಗದ (೧೪ ಅಕ್ಷರಗಳು) ವಸಂತ ತಿಲಕ; ಅತಿಶಕ್ವರಿವರ್ಗದ (೧೫ ಅಕ್ಷರಗಳು) ಉತ್ಸವ, ಮೃದಂಗ, ಮಯೂರಲಲಿತ, ಮಾಲಿನಿ; ಅಷ್ಟಿ ವರ್ಗದ (೧೬ ಅಕ್ಷರಗಳು) ಮಂಗಲಮಂಗನಾ; ಅತ್ಯಷ್ಟಿವರ್ಗದ (೧೭ ಅಕ್ಷರಗಳು) ಅವಿತಥ, ಪೃಥ್ವಿ, ಮಂದಾಕ್ರಾಂತ, ಶಿಖರಿಣಿ; ಧೃತಿಛಂದಸ್ಸಿನ (೧೮ ಅಕ್ಷರಗಳು) ಮಲ್ಲಿಕಾಮಾಲೆ; ಅತಿಧೃತಿಛಂದಸ್ಸಿನ (೧೯ ಅಕ್ಷರಗಳು) ಶಾರ್ದೂಲವಿಕ್ರೀಡಿತ; ಕೃತಿಛಂದಸ್ಸಿನ (೨೦ ಅಕ್ಷರಗಳು) ಉತ್ಪಲಮಾಲೆ, ಮತ್ತೇಭವಿಕ್ರೀಡಿತ; ಪ್ರಕೃತಿಛಂದಸ್ಸಿನ (೨೧ ಅಕ್ಷರಗಳು) ಚಂಪಕಮಾಲೆ, ಸ್ರಗ್ಧರೆ; ಆಕೃತಿಛಂದಸ್ಸಿನ (೨೨ ಅಕ್ಷರಗಳು) ಮಹಾಸ್ರಗ್ಧರೆ–ಇವು ಬಳಕೆಯಾಗಿರುವ ವೃತ್ತಜಾತಿಗಳು. ಅರ್ಧಸಮವೃತ್ತಗಳಲ್ಲಿ ಆಖ್ಯಾನಕಿ, ವಿಪರೀತಾಖ್ಯಾನಕಿ, ವಿಯೋಗಿನಿ ಈ ಭೇದಗಳೂ ವಿಷಮ ವೃತ್ತಗಳಲ್ಲಿ ಕೆಲವು ಪ್ರಸಿದ್ಧವಾದ ಉಪಜಾತಿಭೇದಗಳೂ ಬಳಕೆಯಾಗಿವೆ. ಛಂದೋ ಗ್ರಂಥಗಳಲ್ಲಿ ಅನುಕ್ತವಾಗಿ ಪ್ರಾಯಶಃ ಶಾಸನಕವಿಗಳೇ ಸ್ವತಃ ಕಲ್ಪಿಸಿರಬಹುದಾದ ಒಂದೆರಡು ಸಮ ಮತ್ತು ಅರ್ಧಸಮ ಚತುಷ್ಪದಿಗಳೂ ಉಂಟು. (ನಂ. ೩೬೪). ಮಾತ್ರಾವೃತ್ತಗಳಲ್ಲಿ ಆರ್ಯಾ, ಗೀತಿ, ಆರ್ಯಾಗೀತಿ, ಗಾಥಿನಿ, ಸಂಕೀರ್ಣಕ, ಸಂಕೀರ್ಣಸ್ಕಂಧಕ ಇವುಗಳ ಪ್ರಯೋಗಗಳಿವೆ. ಕನ್ನಡ ಛಂದಸ್ಸುಗಳಲ್ಲಿ ಕಂದ ಮತ್ತು ಕೆಲವು ಪಿರಿಯಕ್ಕರಗಳು ಕಂಡು ಬಂದಿವೆ.

ಅಸಮಗ್ರಪಾದಗಳ ಛಂದಸ್ಸುಗಳಿರುವ (ನಂ. ೧೨೦, ೧೭೩.), ಅಪೂರ್ವವೂ ವಿವಿಧವೂ ಆದ ಛಂದಸ್ಸುಗಳಿರುವ (ನಂ. ೩೬೪, ೪೪೧.), ಬೇರೆ ಬೇರೆ ಕಾರಣಗಳಿಗಾಗಿ ನಿಯಮಕ್ಕೆ ಒಗ್ಗದ ಛಂದಸ್ಸುಗಳಿರುವ (ನಂ. ೭೨, ೭೩, ೧೩೦, ೧೭೫, ೧೭೬, ೫೭೨.), ಶಾಸನಗಳು ಛಂದಸ್ಸಿನ ದೃಷ್ಟಿಯಿಂದ ಕುತೂಹಲಕರವಾಗಿವೆ.

INTRODUCTION

It was in the year 1889 that B. Lewis Rice published the Second Volume of *Epigraphia Carnatica* named 'The Inscriptions of Śravaṇabeḷagoḷa'. That volume contained 144 inscriptions. When that was revised and published by Sri R. Narasimhachar in 1923 it consisted of 500 epigraphs. There are 573 records in all in the present edition which is being published 50 years thereafter. Each of the two inscriptions of the I Edition (Nos. 76 and 137) were split into 3 separate records in the II Edition. No. 76 has been separated into Nos. 175, 176 and 177 in the II Edition. Likewise No. 137 of the I Edition has been split into 3 separate records, Nos. 345, 346 and 347. No. 75 has, however, been split into two records, Nos. 179 and 180. Similarly, two inscriptions of the I Edition, Nos. 17 and 18, have been clubbed into No. 31. By these additions and subtractions the 144 epigraphs of the I Edition became 148. To these, 352 new epigraphs were added thus bringing the total number of incriptions to 500 in the II edition.[1]

There are 573 epigraphs in the present edition. Four of the earlier Edition have been dropped out here. Two of them (Nos. 353 and 354 of the previous edition) happen to be *sannads* written on paper and so are not included herein. This is in accordance with the decision of the advisory committee that all such documents included in the volumes of *Epigraphia Carnatica* published by Mr. Rice, could be brought together in one separate Volume, since strictly speaking they cannot be considered as inscriptions. No. 500 of the II Edition is not included in the present edition as it is a record belonging to the last part of the 19th century engraved on wood in front of the wooden processional car. No. 325 also does not find a place since it is too badly mutilated. Three records of the second edition (Nos. 311, 336 and 347) have been split into six (Nos. 419–420, 458–459 and 478–479). But Nos. 71–72 and Nos. 314–315 of that edition have been clubbed into No. 81 and No. 432 respectively. As a consequence the 500 inscriptions of the II Edition have become 497 here. To these seven records in the villages of the Śravaṇabeḷagoḷa Hobli, published in Vol. V, one record of Vol. XV and one record published in the Mysore Archælogical Report of the year 1927 have been added. Thus 506 inscriptions in the present edition are revised. Further, 67 new inscriptions found at Śravaṇabeḷagoḷa have been added. Due to these reasons, the total number of inscriptions included in the present volume is 573. The synchronised table given above would give an idea of the correlation.

As in the II Edition, these inscriptions have been divided into 4 parts. The first 271 epigraphs are from Chikka Beṭṭa, 172 are in Doḍḍa Beṭṭa, 80 inscriptions are in Śravaṇabeḷagoḷa and the remaining 50 are from the villages nearabout which formed part of the former Śravaṇabeḷagoḷa Hobli.

All the ancient epigraphs are centralised in Chikka Beṭṭa. The very first record of the volume is the most ancient too. This may be assigned to the 6th-7th century A. D. Chronologically the epigraphs in the present volume may be shown thus.

1. Sri Narasimhachar, in his Introduction, has said that 354 new inscriptions have been added (p. 35). But inscription No. 24 of that edition is the same as No. 7 of the I Edition. No. 141 of the I edition is not included in the II edition.

Period A. D.	Chikka Beṭṭa	Doḍḍa Beṭṭa	Śravaṇabeḷagoḷa	Villages nearabout
6–7th century	1	—	—	—
7th ,,	54	—	—	—
8th ,,	20	—	—	—
9th ,,	10	—	—	—
10th ,,	69	7	—	—
11th ,,	41	3	2	4
12th ,,	53	38	15	22
13th ,,	16	16	10	10
14th ,,	3	7	8	3
15th ,,	—	20	8	3
16th ,,	—	11	2	3
17th ,,	3	38	15	4
18th ,,	—	28	3	—
19th ,;	1	4	17	1
Total	271	172	80	50 = 573

KATAVAPRA–KALBAPPU–VELGOLA

In the inscriptions of Śravaṇabeḷagoḷa the place has been differently named as Kaṭavapra-Kaṭappa, Kaṭapra, Kaṭvappa, Kaḻbappa, Kaḻbappu, Kaḻvappu, Veḷgoḷa, Beḷgoḷa, Beḷugoḷa, Dhavaḷasarasatīrtha, Śvētasarōvara etc. In the oldest record (No. 1 of the 6th–7th century), we find the name Kaṭavapra. In the Sanskrit epigraphs of the 7th century (Nos. 13 and 85) we find the name Kaṭavapra-giri and Kaṭavapra-śaila while in the Kannada records of the same period (Nos. 25, 123 and 132) it is Kaṭavapra-śaila, Kaṭapra-giri, and Kaṭvapra-giri. We also find the names Kaḻbappa, Kaḻbappu, and Kaḻvappu, in the Kannada records of the 7th century (Nos. 31, 14 and 30 etc). " Both *Kaṭavapra* and *Kaḻvappu* indicate Chikka Beṭṭa alone . . . . But, which of them is the root ? Is Kaṭavapra the Sanskritised form of Kaḻvappu ? or, Kaḻvappu is the *tadbhava* of Kaṭavapra ? " In trying to find an answer for this question Dr. Chidanandamurthy has said that their origin is yet to be finalised.[1]

Discussing this question Sri Devirappa has said " *Kaḻbelpu* must be the ancient form of the word *Kaḻvappu.* It looks as though, as time passed, the word also wore out and assumed the form Kaḻveppu-Kaḻvappu-Kaḻbappu ". Kaḻ = water. Karchi, Kachcha, Kaḻchu, Kaḻuvu—the root of these words is Kaḻ " Beḷu becomes (Veḷpu) Beppu. When it becomes a part of a conjunct word, it is possible, in the history of language, to assume the form Bappu. Anyway, Kaḻbappu means white water *Kaṭavapra* is the Sanskritic form, sanskritised only on the similarity of forms ".[2]

In this connection another surmise made by Sri. Venkataraman also may be considered here. He says that ' Kaḷabhōra ' occurring in the Halmiḍi inscription is, in Tamil, the same as Kaḷabhra. Kaḷappar. Kaḷappāḷar, and Kaḷabhra is the name of a tribe. The members of this

[1] *Saṃśōdhana Taraṃga* (Kannada), p. 71
[2] *Prabuddha Karṇātaka*, Vol. 51, Pt. II, pp. 163-65

tribe were responsible for disturbing the political and social set up in Tamilnadu in the 7th century A. D.[1] This learned scholar is of the opinion that these Kaḷabhras were originally living in the region around Śravaṇabeḷagoḷa and Kaḷavappu, Kaḷabappu are names derived from the name of this tribe. These people being driven out by the Kadambas later on occupied the districts of Bangalore, Kolar and Chittoor and then migrated into Toṇḍaimaṇḍalm and other areas of Tamilnadu. But this surmise stands unsubstantiated. There is no relationship whatsoever between Kaḻbappu and Kaḷabhra. Further, the surmise that the name Kaḷabhōra occurring in the Halmiḍi record is the name of a tribe called Kaḷabhra is baseless.

As seen above Sri Devirappa has said Kaḻvappu-white water-is the root form of the word by giving the meaning 'water' for Kaḻ. But the statement that both Doḍḍa Beṭṭa and Chikka Beṭṭa are white stone boulders, is not apt. It is a well-known fact that a place name is, some times, dependent upon the physical features of the place itself. It may be noted that Kaḻ means, black. Kaḻbappu may perhaps describe the physical feature of the place by meanning a black-hill. But it is not known whether Bappu-Vappu means a hill.

In Sanskrit, *Vapra* means a hill, hillock. But what is meant by *Kaṭa*? Kaṭa means a sephulchre, a burial ground.[2] Out of the 54 inscriptions of the 7th century found in Chikka Beṭṭa 41 are epitaphs recording the death of Jainas by means of *sallēkhana*, *sanyāsana* etc. Likewise, of the 20 epigraphs of the 8th century, 10 are similar ones. If we consider this, is it not possible to interpret the term *Kaṭavapra* as a *vapra* of tombs, a hillock fit for attainnig *samādhimaraṇa*? In No. 13 it is stated that Arishṭanēmi having left the whole group (*gaṇa*) and having given up food etc., and climbed(*samāruhya*) the Kaṭavapra-giri gave up his body there. Similarly, Charitaśrī having observed the vows, attained happiness in the Kaḻbappu (No.14). Māsēna-ṛishi having observed the vow on the mountain of Kaḷvappu, passed away (No. 30). From these it would become clear that already by then this place which had been sanctified by Bhadrabāhu-muni had come to be regarded as a suitable place for the *samādhi-maraṇa* of the Jainas had become renowned as a holy *tīrtha* (Nos. 85-87). Therefore, it would appear proper to apply the meaning —a hill of *samādhi* (*samādhi guḍḍa*)—to the Sanskrit word Kaṭavapra. Kaḷbappu must be the Kannada form (*tadbhava*) of Kaṭavapra. It would appear that this derivation—Kaṭavapra-Kaḍavapra-Kaḻvapra-Kaḻvappa-Kaḻvappu-Kaḻbappu-after all, is not impossible.

It should further be noticed that the name Veḷgoḷa is also applied to this village. The names Veḷgoḷa and Beḷgoḷa occurring in two records respectively (Nos. 34 and 38) of the 7th century A.D. has led Sri Narasimhachar to suggest that the village might have derived this name from the pond situated in the midst (*beḷ-koḷa=beḷagoḷa*). But the fact that it is described as the *kalyāṇi* of Chikkadēvarājēndra-mahāsvāmi in No. 501 and the statement made by Ananta-kavi in his *Gammaṭēśvara-charitra* that Chikkadēvarāja (1672-1704 A.D.), the king of Mysore, issued orders for the construction of this pond led Sri Narasimhachar to express a doubt about his own surmise.[3] But the reference made in the 7th century record cannot be ignored. Therefore, as Narasimhachar has himself suggested, it is quite likely that the pond was in existence even at such an early period and it gave the name to the village also. It is further likely that the king Chikkadēvarājēndra must have renovated it after making it bigger. Would it be wrong to assume that Kaṭavapra, Kaḻvappu is the name given to Chikka Beṭṭa while the village itself came to be called Beḷgoḷa?

---

[1] *Transactions of the Archaeological Society of South India* (Madras), 1956-57, pp. 94-100

[2] Monier Williams : *A Sanskrit English Dictionary*, (Indian Edition, 1970) p. 243 *Kaṭa*=a burning ground or sephulchre. Kittel : *Kannada English Dictionary* (Revised and enlarged 1969), p. 3254.

[3] Introduction, p. 1 and p. 32

BHADRABAHU—CHANDRAGUPTA

The earliest record is the one connected with the renowned Bhadrabāhu at Chikka Beṭṭa. This record has been subjected to a great deal of commentary by scholars. In brief, it may be said that every one agrees that this epigraph confirms the traditional statement made in Jaina literature. But there are differences of opinion with regard to the identification of the persons mentioned herein. The record states that after the *nirvāṇa* of Mahāvīra there lived several Jaina preceptors like Gautama Gaṇadhara of whom Bhadrabāhusvāmi, when at Ujjayini, foretold that the country would pass through a calamity for twelve years, as a consequence of which the entire *saṃgha* migrated from the North to the South and reached a country consisting of hundreds of *janapadas* and filled with people happy and wealthy with gold, grain, herds of buffaloes and cows and goats and sheep. Here, a preceptor named Prabhāchandra, perceiving that his end was nearing, with a desire to attain *samādhi* left the *saṃgha* in its entirety excepting for only one disciple and accomplished *samādhi* in the vast expanse of cold rocks of this Kaṭavapra-giri. Varied have been the discussions about the identity of the three persons-Bhadrabāhusvāmi, Prabhāchandra and the lone disciple that stayed behind with him.

Rice had read the text of this record slightly differently. In the 6th line he had read *āchāryaḥ Prabhāchandrēṇāmāvanitala-lalāma-bhūte* in place of *achāryaḥ Prabhāchandrō nāmāvani-tala-lalāma bhūtē.*[1]

On the basis of this he suggested that the term *āchārya* is a reference to Bhadrabāhu and Prabhāchandra was the name of the disciple who stayed with him. According to the Jaina literary tradition the disciple of Bhadrahāhusvāmi was Prabhāchandra. Rice opined that Prabhāchandra mentioned in the epigraph is identical with this Chandragupta and that the latter, at the time of initiation into asceticism, bore the name of Prabhāchandra. He concluded that Bhadrabāhu the teacher was one of the *Śrutakēvalis* and Chandragupta (Prabhāchandra) who accompanied him to Śravaṇabeḷagoḷa is the famous Chandrgupta Maurya of the Maurya family.

This view was severely criticised by Dr. Fleet who held the view that Bhadrabāhu mentioned in the epigraph was not the *Śrutakēvali* who passed away in 380 B.C., but Bhadrabāhu II who breathed his last in 30–31 B.C. Chandragupta is not his namesake of the Maurya family, but Guptigupta otherwise known as Arhadbali and Viśākhāchārya, who was a disciple of Bhadrabāhu II. In the present record Bhadrabāhu is referred to twice. First time he figures along with Lōhārya, Jambuvishṇu, Aparājita and Gōvardhana. It is then stated that Bhadrabāhusvāmi foretold a calamity of 12 years. Therefore, Bhadrabāhusvāmi mentioned a second time is not the *Śrutakèvali.* This is one of the prominent reasons put forth by Dr. Fleet.[3] Luders, supporting this arguement said that although the name Guptigupta does not figure in the Kaḍaba copper plates referred to by Dr. Fleet, it would in no way affect Dr. Fleet's view.[4] Sri Narasimhachar has put together all these views in his Introduction.[5]

---

1. *Inscriptions from Śravaṇabelagola,* (1889) Chikka Beṭṭa's inscriptions, p.1.
2. "That Bhadrabāhu was the leader of the pilgrims and that he died at Śravaṇabelagola there seems no reason to call in question . . . . . that he was attended to the last by a disciple named Chandra-Gupta may also be allowed . . . . . According to No. 1 he appears to have taken the clerical name of Prabhāchandra on retiring from the world, and it was the usual custom to change the name on such an occasion." (*Ibid.* Introduction, pp. 6–7)
3. *Epigraphia Indica,* Vol. IV, pp. 22ff.
4. *Ibid.,* p. 339
5. pp. 35-42

That both Bhadrabāhu and Chandragupta migrated to the south is widely current in the Jaina traditional accounts and literature. No. 251 of the present volume, belonging to the 11th century, states that Jinachandra bowed to the feet of Bhadrabāhusvāmi. This is engraved on a rock in the Bhadrabāhu cave. Below the footprints carved on the summit of the hill in the Chikka Beṭṭa is found engraved a record in characters of the 13th century which states that it is the feet of Bhadrabāhusvāmi (No. 254). It is not possible to say how old the Bhadrabāhu cave is. Since the epigraph in it is of the 11th century we can say that by then the belief that Bhadrabāhu had come and lived therein had gained ground.

